
ಸೋಮವಾರ, ಜನವರಿ 3, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 3 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಶಿಕ್ಷಣ
ಐಐಎಸ್‌ಟಿ ಸಂಸ್ಥೆ ಖಗೋಳ ವಿಜ್ಞಾನದಲ್ಲಿ ಆಸಕ್ತಿಯಿರುವವರಿಗೆ ಪದವಿ, ಸ್ನಾತಕೋತ್ತರ ಪದವಿ, ಪಿಎಚ್‌ಡಿ ಮಾಡುವಂತಹ ಅವಕಾಶವನ್ನು ಒದಗಿಸಿದೆ.

ಕೋವಿಡ್: ಆರಂಭದಲ್ಲೇ ಬಿಗಿ ಕ್ರಮಕ್ಕೆ ಟಿಎಸಿ ಶಿಫಾರಸು • ವಾರಾಂತ್ಯದೊಳಗೆ ನಿರ್ಧಾರ ಸಾಧ್ಯತೆ

ಅಂಕೆ ಮೀರಿದರೆ ಲಾಕ್‌ಡೌನ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಹೊಸ ಪ್ರಕರಣಗಳ ದೃಢ ಪ್ರಮಾಣ ದರದ ಆಧಾರದಲ್ಲಿ ವಲಯವಾರು ನಿರ್ಬಂಧಗಳ ಜಾರಿಗೆ ರಾಜ್ಯ ಮಟ್ಟದ ಕೋವಿಡ್ ತಾಂತ್ರಿಕ ಸಲಹಾ ಸಮಿತಿ (ಟಿಎಸಿ) ಸಲಹೆ ನೀಡಿದೆ. ಕೋವಿಡ್ ದೃಢ ಪ್ರಮಾಣದ ದರ ಶೇ 5 ದಾಟಿದರೆ ಅಂತಹ ಪ್ರದೇಶಗಳಲ್ಲಿ 'ಲಾಕ್‌ಡೌನ್' ಜಾರಿಗೂ ಶಿಫಾರಸು ಮಾಡಲಾಗಿದೆ.

ಓಮೈಕ್ರಾನ್ ಸೋಂಕಿನ ಪ್ರಕರಣಗಳ ಹೆಚ್ಚಳ ಮತ್ತು ಒಟ್ಟಾರೆ ಕೋವಿಡ್ ಪ್ರಕರಣಗಳ ಏರಿಕೆಯನ್ನು ವಿಶ್ಲೇಷಣೆ ಮಾಡಿರುವ ಸಮಿತಿ ಡಿಸೆಂಬರ್ 29ಕ್ಕೆ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಪರಿಸ್ಥಿತಿಯು ಕೈಮೀರದಂತೆ ತಡೆಯಲು ತಕ್ಷಣದಿಂದಲೇ ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೊಳಿಸಬೇಕು ಎಂಬ ಶಿಫಾರಸು ವರದಿಯಲ್ಲಿದೆ.

ಒಂದು ವಾರದಲ್ಲಿ ವರದಿಯಾದ ಹೊಸ ಸೋಂಕು ಪ್ರಕರಣಗಳ ದೃಢಪ್ರಮಾಣ ದರ ಶೇ 1ಕ್ಕಿಂತ ಕಡಿಮೆ ಇರುವ ಪ್ರದೇಶವನ್ನು ಹಳದಿ ವಲಯ ಎಂದು ಘೋಷಿಸಬೇಕು. ಈ ದರ ಶೇ 1 ರಿಂದ 2ರಷ್ಟು ಇದ್ದರೆ ಕಿತ್ತಳೆ ವಲಯ ಮತ್ತು ಶೇ 3ರಷ್ಟನ್ನು ಮೀರುವ ಪ್ರದೇಶಗಳನ್ನು ಕೆಂಪು ವಲಯ ಎಂಬುದಾಗಿ ಘೋಷಿಸಬೇಕು ಎಂದು ಟಿಎಸಿ ವರದಿ ಹೇಳಿದೆ.

'ಕೋವಿಡ್ ಪ್ರಕರಣಗಳ ದೃಢಪ್ರಮಾಣ ದರ ಶೇ 3ಕ್ಕಿಂತ ಹೆಚ್ಚಾದ ಪ್ರದೇಶಗಳಲ್ಲಿ ಲಾಕ್‌ಡೌನ್ ಜಾರಿಗೆ ಕ್ರಮ ಜರುಗಿಸಬೇಕು. ಒಂದು ವಾರದ ಅವಧಿಯಲ್ಲಿನ ಹೊಸ ಕೋವಿಡ್ ಪ್ರಕರಣಗಳ ದೃಢಪ್ರಮಾಣ ದರದ ಸರಾಸರಿ ಶೇ 5ರಷ್ಟನ್ನು ಮೀರಿದರೆ ಅಥವಾ ಆಮ್ಲಜನಕ ಸಹಿತ ಅಥವಾ ಐಸಿಯು ಹಾಸಿಗೆಗಳಲ್ಲಿ ಶೇ 40ರಷ್ಟು ಭರ್ತಿಯಾದರೆ ಲಾಕ್‌ಡೌನ್ ಜಾರಿಗೊಳಿಸಬೇಕು' ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

9ನೇ ಪುಟ ನೋಡಿ

ಟಿಎಸಿ ಶಿಫಾರಸಿನಲ್ಲಿ ಏನಿದೆ?

ಕ್ಷೇತ್ರ	ಹಳದಿ ವಲಯ	ಕಿತ್ತಳೆ ವಲಯ	ಕೆಂಪು ವಲಯ
ಮಾರುಕಟ್ಟೆ	ಮುಕ್ತ	ನಿರ್ಬಂಧಿತ	ಬೆಳಿಗ್ಗೆ 6ರಿಂದ ಮಧ್ಯಾಹ್ನ 1
ಮಾಲ್ ಮತ್ತು ವಾಣಿಜ್ಯ ಸಂಕೀರ್ಣ	ಮುಕ್ತ	ಬೆ 6ರಿಂದ ಮ 1	ಆನ್‌ಲೈನ್ ವಹಿವಾಟು ಮಾತ್ರ
ಚಿತ್ರಮಂದಿರ ಮತ್ತು ಸಭಾಂಗಣ	ಮುಕ್ತ	ಶೇ 50ರ ಮಿತಿ	ಬಂದ್
ಶಾಲೆ ಮತ್ತು ಕಾಲೇಜು	ಮುಕ್ತ	ಶೇ 50ರ ಮಿತಿ	ಆನ್‌ಲೈನ್ ತರಗತಿ ಮಾತ್ರ
ಪಬ್, ಬಾರ್ ಮತ್ತು ಕ್ಲಬ್	ಮುಕ್ತ	ಶೇ 50ರ ಮಿತಿ	ಪಾರ್ಸೆಲ್ ಮಾತ್ರ
ರೆಸ್ಟೋರೆಂಟ್	ಮುಕ್ತ	ಶೇ 50ರ ಮಿತಿ	ಪಾರ್ಸೆಲ್ ಮಾತ್ರ
ಕಚೇರಿಗಳು	ಮುಕ್ತ	ಶೇ 50ರ ಮಿತಿ	ಮನೆಯಿಂದಲೇ ಕೆಲಸ
ಕಾರ್ಖಾನೆಗಳು	ಮುಕ್ತ	ಶೇ 50ರ ಮಿತಿ	ಮನೆಯಿಂದಲೇ ಕೆಲಸ
ಸಾರ್ವಜನಿಕ ಸಾರಿಗೆ	ಮುಕ್ತ	ಶೇ 50ರ ಮಿತಿ	ಬಂದ್
ಮೆಟ್ರೊ ರೈಲು	ಮುಕ್ತ	ಶೇ 50ರ ಮಿತಿ	ಬಂದ್
ಕ್ಷೌರದಂಗಡಿ	ಮುಕ್ತ	ಶೇ 50ರ ಮಿತಿ	ಬಂದ್
ಜಿಮ್ ಮತ್ತು ಈಜುಕೊಳ	ಮುಕ್ತ	ತರಬೇತಿಗೆ ಮಾತ್ರ	ಬಂದ್

ಪಶ್ಚಿಮ ಬಂಗಾಳ, ಪಟ್ನಾದಲ್ಲಿ ಶಾಲಾ, ಕಾಲೇಜು ಬಂದ್‌ಗೆ ಆದೇಶ

ಕೋಲ್ಕತ್ತ (ಪಿಟಿಐ): ಕೋವಿಡ್ ಪ್ರಕರಣಗಳಲ್ಲಿ ತೀವ್ರ ಏರಿಕೆ ಕಂಡುಬಂದಿರುವ ಕಾರಣ ಸೋಮವಾರದಿಂದ ಶಾಲಾ, ಕಾಲೇಜುಗಳನ್ನು ಬಂದ್ ಮಾಡಲು ಪಶ್ಚಿಮ ಬಂಗಾಳ ಸರ್ಕಾರ ನಿರ್ಧರಿಸಿದೆ. ಬಿಹಾರದ ಪಟ್ನಾ ನಗರದಲ್ಲಿ ಒಂದು ವಾರದ ಮಟ್ಟಿಗೆ ಶಾಲೆಗಳನ್ನು ಮುಚ್ಚಲು ಆದೇಶಿಸಲಾಗಿದೆ.

ದೆಹಲಿ ಹಾಗೂ ಮುಂಬೈನಿಂದ ರಾಜ್ಯಕ್ಕೆ ಬರುವ ವಿಮಾನಗಳ ಹಾರಾಟದ ಮೇಲೆ ಪಶ್ಚಿಮ ಬಂಗಾಳ ಸರ್ಕಾರ ಕೆಲವು ನಿರ್ಬಂಧಗಳನ್ನು ವಿಧಿಸಿದೆ. ಈ ಎರಡೂ ನಗರಗಳಿಂದ ಕೋಲ್ಕತ್ತಾಕ್ಕೆ ವಾರಕ್ಕೆ ಎರಡು ದಿನ ಮಾತ್ರ ವಿಮಾನಗಳು ಬರಲು ಅವಕಾಶ ನೀಡಲಾಗಿದೆ. ಬ್ರಿಟನ್‌ನಿಂದ ಬರುವ ವಿಮಾನಗಳನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ. ಕಚೇರಿಗಳು ಶೇ 50ರಷ್ಟು ಸಿಬ್ಬಂದಿಯೊಂದಿಗೆ ಕೆಲಸ ಮಾಡುವಂತೆ ನಿರ್ದೇಶಿಸಲಾಗಿದೆ. ಮೆಟ್ರೊದಲ್ಲಿ ಶೇ 50ರಷ್ಟು ಪ್ರಯಾಣಿಕರು ಸಂಚರಿಸಬಹುದು. ಪಶ್ಚಿಮ ಬಂಗಾಳದಲ್ಲಿ ಕೋವಿಡ್ ದೃಢಪಡುವ ಪ್ರಮಾಣವು ಶೇ 12.02ರಿಂದ ಶೇ 15.93ಕ್ಕೆ ಏರಿಕೆಯಾಗಿದೆ. ಕೋವಿಡ್ ಪ್ರಕರಣಗಳ ಹೆಚ್ಚಳ ಹಾಗೂ ತೀವ್ರ ಚಳಿಯಿಂದಾಗಿ, ಪಟ್ನಾ ನಗರದ ಸರ್ಕಾರಿ ಹಾಗೂ ಖಾಸಗಿ ಶಾಲೆಗಳನ್ನು ಮುಚ್ಚಲು ಆದೇಶ ಹೊರಡಿಸಲಾಗಿದೆ. ಭಾನುವಾರ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ದೇಶದಲ್ಲಿ ಹೊಸದಾಗಿ 27,553 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 1.22 ಲಕ್ಷಕ್ಕೆ ಏರಿಕೆಯಾಗಿದೆ. ಓಮೈಕ್ರಾನ್ ಸೋಂಕಿತರ ಸಂಖ್ಯೆ 1,525ಕ್ಕೆ ಏರಿಕೆಯಾಗಿದೆ.

ಇಂದಿನಿಂದ ಮಕ್ಕಳಿಗೆ ಲಸಿಕೆ



ಬೆಂಗಳೂರು: ರಾಜ್ಯದಲ್ಲಿ 15 ರಿಂದ 18 ವರ್ಷದ ಮಕ್ಕಳಿಗೆ ಕೋವಿಡ್ ಲಸಿಕೆ ನೀಡುವ ಅಭಿಯಾನ ಸೋಮವಾರ (ಜ.3) ಆರಂಭವಾಗಲಿದ್ದು, ಇದಕ್ಕಾಗಿ ಆರೋಗ್ಯ ಇಲಾಖೆ ಸಿದ್ಧತೆ ನಡೆಸಿದೆ.

ಈ ವಯೋಮಾನದ ಮಕ್ಕಳಿಗೆ ಸದ್ಯ 'ಕೋವ್ಯಾಕ್ಸಿನ್' ಲಸಿಕೆ ಮಾತ್ರ ನೀಡಲು ನಿರ್ಧರಿಸಲಾಗಿದೆ. 2007ನೇ ಇಸವಿಯಲ್ಲಿ ಅಥವಾ ಅದಕ್ಕೂ ಮೊದಲು ಜನಿಸಿದವರು ಲಸಿಕೆ ಪಡೆಯಲು ಅರ್ಹರಾಗಿದ್ದಾರೆ.


ರಾಜ್ಯದಲ್ಲಿ ಈ ವಯೋಮಾನದ 31.75 ಲಕ್ಷ ಮಕ್ಕಳು ಲಸಿಕೆ ಪಡೆಯಲಿದ್ದಾರೆ. ಮೊದಲ ದಿನವೇ ನಾಲ್ಕು ಸಾವಿರಕ್ಕಿಂತ ಹೆಚ್ಚು ಕೇಂದ್ರಗಳಲ್ಲಿ ಆರು ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಲಸಿಕೆ ನೀಡುವ ಗುರಿ ಇದೆ ಎಂದು ಆರೋಗ್ಯ ಇಲಾಖೆಯ ಪ್ರಕಟಣೆ ತಿಳಿಸಿದೆ.

ಕೋವ್ಯಾಕ್ಸಿನ್ ಲಸಿಕೆಯ 16 ಲಕ್ಷ ಡೋಸ್ ಸಂಗ್ರಹವಿದೆ. ಶಾಲೆ, ಕಾಲೇಜುಗಳಲ್ಲಿಯೂ ಲಸಿಕೆ ನೀಡಲು ಸಿದ್ಧತೆ ಆಗಿದೆ. ಇಲ್ಲಿ ಸಾಧ್ಯವಾಗದಿದ್ದರೆ ಸಮೀಪದ ಆರೋಗ್ಯ ಕೇಂದ್ರಗಳಿಗೂ ತೆರಳಿ ಲಸಿಕೆ ಪಡೆಯಬಹುದು. ಲಸಿಕೆ ಪಡೆದವರು ಪ್ರಮಾಣಪತ್ರವನ್ನು ಕೋವಿನ್ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ತಿಳಿಸಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೋಮವಾರ ಬೆಳಿಗ್ಗೆ 9.30ಕ್ಕೆ ನಗರದ ಮೂಡಲಪಾಳ್ಯದ ಭೈರವೇಶ್ವರ ನಗರದ ಬಿಬಿಎಂಪಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಸ್ನಾತಕೋತ್ತರ ಕಾಲೇಜಿನಲ್ಲಿ ಈ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ.

9ನೇ ಪುಟ ನೋಡಿ

'ಗಡಿಯಲ್ಲಿ ಕೋವಿಡ್ ಹರಡದಂತೆ ಕ್ರಮ'



ಬೆಳಗಾವಿ: 'ಕೊರೊನಾ ಸೋಂಕು ಹರಡುವುದನ್ನು ನಿಯಂತ್ರಿಸಲು ಎಲ್ಲ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗುತ್ತಿದೆ. ಗಡಿಯಲ್ಲಿ ಹೆಚ್ಚಿನ ಕಟ್ಟೆಚ್ಚರ ವಹಿಸಲು ಸೂಚಿಸಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೊರೊನಾ, ಓಮೈಕ್ರಾನ್ ಪ್ರಕರಣಗಳು ವಾರದಿಂದ ಹೆಚ್ಚಿವೆ. ಮಹಾರಾಷ್ಟ್ರದಲ್ಲಿ ಗಣನೀಯವಾಗಿ ಏರಿಕೆಯಾಗಿವೆ. ಬೆಳಗಾವಿ ಹಾಗೂ ಅಕ್ಕಪಕ್ಕದ ಜಿಲ್ಲೆಗಳ ಚೆಕ್‌ಪೋಸ್ಟ್‌ಗಳನ್ನೂ ಬಿಗಿಗೊಳಿಸಲಾಗುತ್ತಿದೆ. ಜನರ ಆರೋಗ್ಯ ದೃಷ್ಟಿಯಿಂದ ಈ ಕ್ರಮ ಅನಿವಾರ್ಯ' ಎಂದು ಹೇಳಿದರು.

'ಪರಿಸ್ಥಿತಿ ನಿಭಾಯಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಆಕ್ಸಿಜನ್ ಕೊರತೆ ನೀಗಿಸಲು, ಹೆಚ್ಚುವರಿ ಐಸಿಯು ಹಾಗೂ ಬೆಡ್ ವ್ಯವಸ್ಥೆಗೆ ಕ್ರಮಕೈಗೊಳ್ಳಲಾಗಿದೆ. ಔಷಧವನ್ನೂ ಸಿದ್ಧವಾಗಿಟ್ಟುಕೊಳ್ಳುವಂತೆ ಸೂಚಿಸಲಾಗಿದೆ' ಎಂದು ತಿಳಿಸಿದರು.

ನೈಟ್ ಕರ್ಫ್ಯೂ ವಿಸ್ತರಣೆ ಹಾಗೂ ಮುಂಬೈ ಮಾದರಿಯಲ್ಲಿ ಬೆಂಗಳೂರಿನಲ್ಲೂ ಟಫ್ ರೂಲ್ಸ್ ಜಾರಿ ಸಂಬಂಧ ಎರಡು ದಿನಗಳಲ್ಲಿ ನಿರ್ಧರಿಸಲಾಗುವುದು ಎಂದರು.



ಅಂತರ ಮರೆತ ಜನ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ನಡುವೆಯೇ ಹೈದರಾಬಾದ್‌ನ ನೆಹರೂ ಮೃಗಾಲಯಕ್ಕೆ ಭಾನುವಾರ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭೇಟಿ ನೀಡಿದ್ದರು –ಪಿಟಿಐ ಚಿತ್ರ

ದ್ವೇಷ ಭಾಷಣ: ತನಿಖೆಗೆ ಎಸ್‌ಐಟಿ

ಡೆಹ್ರಾಡೂನ್(ಪಿಟಿಐ): ಹರಿದ್ವಾರದಲ್ಲಿ ಈಚೆಗೆ ನಡೆದ 'ಧರ್ಮ ಸಂಸತ್' ಕಾರ್ಯಕ್ರಮದಲ್ಲಿ ದ್ವೇಷ ಭಾಷಣ ಮಾಡಿರುವ ಪ್ರಕರಣದ ತನಿಖೆಗೆ ಭಾನುವಾರ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಲಾಗಿದೆ.

ಐವರು ಸದಸ್ಯರನ್ನೊಳಗೊಂಡ ವಿಶೇಷ ತನಿಖಾ ತಂಡವು ಪ್ರಕರಣದ ತನಿಖೆ ನಡೆಸಲಿದೆ. ದ್ವೇಷ ಭಾಷಣ ಮಾಡಿದವರ ವಿರುದ್ಧ ಸಾಕ್ಷ್ಯಾಧಾರಗಳು ದೊರಕಿದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಈಚೆಗಷ್ಟೇ ಹಿಂದೂ ಧರ್ಮವನ್ನು ಸ್ವೀಕರಿಸಿರುವ ವಾಸಿಂ ರಿಜ್ವಿ (ಜಿತೇಂದ್ರ ನಾರಾಯಣ ತ್ಯಾಗಿ), ಸಾಧ್ವಿ ಅನ್ನಪೂರ್ಣ, ಧರ್ಮದಾಸ್, ಸಿಂಧು ಸಾಗರ್, ಕಾರ್ಯಕ್ರಮದ ಆಯೋಜಕರಾದ ಯತಿ ನರಸಿಂಹಾನಂದ ಹಾಗೂ ಗಾಜಿಯಾಬಾದ್‌ನ ಡಾಸ್ನಾ ದೇವಾಲಯದ ಪ್ರಧಾನ ಅರ್ಚಕರ ವಿರುದ್ಧ ಈಗಾಗಲೇ ಎಫ್‌ಐಆರ್ ದಾಖಲಾಗಿದೆ.

ಡಿಸೆಂಬರ್ 16ರಿಂದ 19ರವರೆಗೆ ನಡೆದಿದ್ದ ಧರ್ಮ ಸಂಸತ್ ಕಾರ್ಯಕ್ರಮದಲ್ಲಿ ಮುಸ್ಲಿಮರ ವಿರುದ್ಧ ದ್ವೇಷಪೂರಿತ ಭಾಷಣ ಮಾಡಿದವರ ವಿರುದ್ಧ ಕ್ರಮಕೈಗೊಳ್ಳುವಂತೆ ಉತ್ತರಾಖಂಡದ ಬಿಜೆಪಿ ಸರ್ಕಾರದ ಮೇಲೆ ವಿವಿಧೆಡೆಯಿಂದ ಒತ್ತಡ ಬಂದಿತ್ತು.

ಈ ಕಾರ್ಯಕ್ರಮವು ಉತ್ತರಾಖಂಡದ ಶಾಂತಿ ಹಾಗೂ ಸಹಬಾಳ್ವೆಯ ಸಂಪ್ರದಾಯಕ್ಕೆ ಕಳಂಕ ತಂದೊಡ್ಡಿದೆ ಎಂದು ಆರೋಪಿಸಿ ಉತ್ತರ ಪ್ರದೇಶ ಮತ್ತು ಹರಿಯಾಣದ ನಿವೃತ್ತ ಪೊಲೀಸ್ ಅಧಿಕಾರಿಗಳು ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರಿಗೆ ಪತ್ರ ಬರೆದಿದ್ದರು.

ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಮುಸ್ಲಿಮರು ಡೆಹ್ರಾಡೂನ್ ಮತ್ತು ಹರಿದ್ವಾರದಲ್ಲಿ ಪ್ರತಿಭಟನೆ ನಡೆಸಿದ್ದರು.

ನೀಟ್–ಪಿಜಿ: ಇಡಬ್ಲ್ಯುಎಸ್‌ಗೆ ₹ 8 ಲಕ್ಷ ಆದಾಯ ಮಿತಿ ಬದಲಿಲ್ಲ

ನವದೆಹಲಿ (ಪಿಟಿಐ): ಆರ್ಥಿಕವಾಗಿ ಹಿಂದುಳಿದ ವರ್ಗದ (ಇಡಬ್ಲ್ಯುಎಸ್) ಅಭ್ಯರ್ಥಿಗಳಿಗೆ ನೀಟ್–ಪಿಜಿಯಲ್ಲಿ ಮೀಸಲಾತಿಗೆ ನಿಗದಿಪಡಿಸಿದ್ದ ₹ 8 ಲಕ್ಷ ಆದಾಯ ಮಿತಿಯನ್ನೇ ಉಳಿಸಿಕೊಳ್ಳಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ.

'ಈ ಅಂಶವನ್ನು ಪರಾಮರ್ಶಿಸಲು ರಚಿಸಿದ್ದ ಮೂವರು ಸದಸ್ಯರ ಸಮಿತಿಯು ಈ ಕುರಿತು ವರದಿ ಸಲ್ಲಿಸಿದ್ದು ಸರ್ಕಾರ ಅದನ್ನು ಒಪ್ಪಿಕೊಂಡಿದೆ' ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ತಿಳಿಸಿದೆ.

ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ಕಾರ್ಯದರ್ಶಿ ಆರ್.ಸುಬ್ರಹ್ಮಣ್ಯಂ ಅವರು ಕೇಂದ್ರದ ಪರವಾಗಿ ಪ್ರಮಾಣಪತ್ರ ಸಲ್ಲಿಸಿದ್ದಾರೆ.

ಡಿಸೆಂಬರ್ 31ರಂದು ಕೇಂದ್ರಕ್ಕೆ ವರದಿ ಸಲ್ಲಿಸಿದ್ದ ಸಮಿತಿಯು, 'ಇಡಬ್ಲ್ಯುಎಸ್ ವರ್ಗಕ್ಕೆ ಮೀಸಲಾತಿಗೆ ಈಗಿರುವಂತೆ ₹ 8 ಲಕ್ಷ ಆದಾಯ ಅಥವಾ ಅದಕ್ಕೂ ಕಡಿಮೆ ನಿಗದಿಪಡಿಸಬಹುದು' ಎಂದು ಶಿಫಾರಸು ಮಾಡಿತ್ತು. 'ಕುಟುಂಬ' ಮತ್ತು ಆದಾಯ ಕುರಿತ ವ್ಯಾಖ್ಯಾನ ಜನವರಿ 17, 2019ರಲ್ಲಿ ಹೊರಡಿಸಿದ್ದ ಸುತ್ತೋಲೆಯಂತೇ ಇರಲಿದೆ ಎಂದು ಹೇಳಿದೆ.

ಅಲ್ಲದೆ, ಇಡಬ್ಲ್ಯುಎಸ್ ವರ್ಗವನ್ನು ಗುರುತಿಸುವಾಗ 5 ಎಕರೆ ಅಥವಾ ಅದಕ್ಕೂ ಹೆಚ್ಚು ಕೃಷಿ ಭೂಮಿ ಹೊಂದಿರುವುದು, ಮನೆಯನ್ನು ಹೊಂದಿರುವುದು ಕುರಿತ ನಿಯಮಗಳನ್ನು ಕೈಬಿಡಬಹುದು ಎಂದೂ ಸಮಿತಿ ಶಿಫಾರಸು ಮಾಡಿದೆ.

'ಆದರೆ, 2019ರಿಂದ ಚಾಲ್ತಿಯಲ್ಲಿರುವ ನಿಯಮಗಳಂತೆ ಈಗಾಗಲೇ ನೀಟ್–ಪಿಜಿಗೆ ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ. ಮಧ್ಯಂತರದಲ್ಲಿ ಪರಿಷ್ಕೃತ ನಿಯಮ ಜಾರಿಗೊಳಿಸುವ ಬದಲಿಗೆ, ಮುಂದಿನ ಶೈಕ್ಷಣಿಕ ಸಾಲಿನಿಂದ ಶಿಫಾರಸುಗಳನ್ನು ಜಾರಿಗೊಳಿಸಬಹುದು' ಎಂದು ಸಮಿತಿಯು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಈ ಕುರಿತ ವಿಚಾರಣೆಯನ್ನು ಇದೇ 6ಕ್ಕೆ ಮುಂದೂಡಿದೆ.

ಬಿಬಿಎಂಪಿಗೆ ₹ 1,500 ಕೋಟಿ ಹೆಚ್ಚುವರಿ ಅನುದಾನ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿನ ಮಳೆನೀರು ಕಾಲುವೆಗಳು ಮತ್ತು ರಾಜಕಾಲುವೆಗಳ ಅಭಿವೃದ್ಧಿ, ನಿರ್ವಹಣೆಗೆ ₹ 1,500 ಕೋಟಿ ಹೆಚ್ಚುವರಿ ಅನುದಾನವನ್ನು ತಕ್ಷಣ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆದೇಶಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದಂತೆ ನಗರವನ್ನು ಪ್ರತಿನಿಧಿಸುವ ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಸಂಸದರು ಮತ್ತು ಹಿರಿಯ ಅಧಿಕಾರಿಗಳ ಜತೆ ಭಾನುವಾರ ಸಭೆ ನಡೆಸಿದ ಅವರು, ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವಂತೆ ಹಣಕಾಸು ಇಲಾಖೆ ಅಧಿಕಾರಿಗಳಿಗೆ ಆದೇಶಿಸಿದರು.

'ಮಳೆನೀರು ಕಾಲುವೆಗಳು ಮತ್ತು ರಾಜಕಾಲುವೆಗಳ ಅಭಿವೃದ್ಧಿ, ನಿರ್ವಹಣೆ ಕಾಮಗಾರಿಯನ್ನು ವ್ಯವಸ್ಥಿತವಾಗಿ ಕೈಗೊಳ್ಳುವಂತೆ ಸೂಚಿಸಲಾಗಿದೆ. ಈ ಕಾಮಗಾರಿಗಳಿಗೆ ವೃತ್ತಿಪರ ತಂತ್ರಜ್ಞರ ನೆರವಿನಲ್ಲಿ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಿ, ಕಾಲಮಿತಿಯೊಳಗೆ ಕೆಲಸ ಪೂರ್ಣಗೊಳಿಸಲು ನಿರ್ದೇಶನ ನೀಡಲಾಗಿದೆ' ಎಂದು ಬೊಮ್ಮಾಯಿ ತಿಳಿಸಿದರು.

2ನೇ ಪುಟ ನೋಡಿ

ಮುಸ್ಲಿಂ ಮಹಿಳೆಯರ ಭಾವಚಿತ್ರ ದುರ್ಬಳಕೆ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ನವದೆಹಲಿ: 100ಕ್ಕೂ ಹೆಚ್ಚು ಪ್ರಭಾವಿ ಮುಸ್ಲಿಂ ಮಹಿಳೆಯರ ಭಾವಚಿತ್ರಗಳನ್ನು 'ಬುಲ್ಲಿ ಬಾಯಿ' ಹೆಸರಿನ ಆ್ಯಪ್‌ಗೆ ಅಪ್‌ಲೋಡ್ ಮಾಡಿ ಇವರನ್ನು ಹರಾಜಿಗಿಡಲಾಗಿದೆ ಎಂಬ ಒಕ್ಕಣೆಯೊಂದಿಗೆ ಅವಹೇಳನ ಮಾಡಿರುವುದು ವ್ಯಾಪಕ ಆಕ್ರೋಶಕ್ಕೆ ಗುರಿಯಾಗಿದೆ.

ಈ ಸಂಬಂಧ ಪತ್ರಕರ್ತೆಯೊಬ್ಬರು ನೀಡಿರುವ ದೂರಿನ ಆಧಾರದಲ್ಲಿ ದೆಹಲಿ ಪೊಲೀಸರು ಭಾನುವಾರ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಪ್ರಕರಣ ಕುರಿತು ಮುಂಬೈನ ಸೈಬರ್ ಕ್ರೈಂ ಪೊಲೀಸರು ಕೂಡ ತನಿಖೆ ನಡೆಸುತ್ತಿದ್ದಾರೆ. ಬಳಿಕ ಈ ಆ್ಯಪ್ ಅನ್ನು ನಿರ್ಬಂಧಿಸಲಾಗಿದೆ.

'ಬುಲ್ಲಿ ಬಾಯಿ' ಆ್ಯಪ್ ಅನ್ನು ನಿರ್ಬಂಧಿಸಿರುವುದಾಗಿ ಗಿಟ್‌ಹಬ್ ವೇದಿಕೆಯು ದೃಢಪಡಿಸಿದೆ. ಈ ಕುರಿತು ಕಂಪ್ಯೂಟರ್ ತುರ್ತು ಪ್ರತಿಸ್ಪಂದನಾ ತಂಡ (ಸಿಇಆರ್‌ಟಿ) ಹಾಗೂ ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಟ್ವೀಟ್ ಮಾಡಿದ್ದಾರೆ.

ಈ ವಿಚಾರವಾಗಿ ದೆಹಲಿ ಮತ್ತು ಮುಂಬೈ ಪೊಲೀಸರ ಜೊತೆ ಕೇಂದ್ರ ಸರ್ಕಾರವು ಸಮನ್ವಯತೆಯಿಂದ ಕೆಲಸ ಮಾಡುತ್ತಿದೆ ಎಂದೂ ಸಚಿವರು ತಿಳಿಸಿದ್ದಾರೆ.

ಕಳೆದ ಜುಲೈನಲ್ಲಿ 'ಸುಲ್ಲಿ ಡೀಲ್ಸ್' ಆ್ಯಪ್‌ನಲ್ಲೂ ಇದೇ ರೀತಿಯಲ್ಲಿ ಮಹಿಳೆಯರ ಭಾವಚಿತ್ರಗಳನ್ನು ಅಪ್‌ಲೋಡ್ ಮಾಡಲಾಗಿತ್ತು. ಟ್ವಿಟರ್‌ನಲ್ಲಿ ಸಕ್ರಿಯವಾಗಿರುವ ಮುಸ್ಲಿಂ ಮಹಿಳೆಯರ ಭಾವಚಿತ್ರಗಳನ್ನು 'ಬುಲ್ಲಿ ಬಾಯಿ' ಆ್ಯಪ್‌ಗೆ ಅಪ್‌ಲೋಡ್ ಮಾಡಲಾಗಿದೆ.

'ಬುಲ್ಲಿ ಬಾಯಿ' ಕೂಡ 'ಸುಲ್ಲಿ ಡೀಲ್ಸ್' ನಂತೆ ಗಿಟ್‌ಹಬ್ ವೇದಿಕೆಯ ಆ್ಯಪ್ ಆಗಿದ್ದು, ಇವುಗಳಲ್ಲಿ ಸಾಮ್ಯತೆ ಇದೆ ಎಂದು ದೆಹಲಿ ಪೊಲೀಸರು ಹೇಳಿದ್ದಾರೆ. ದೆಹಲಿ ಪೊಲೀಸರ ಸೈಬರ್ ಕ್ರೈಂ ವಿಭಾಗವು ಟ್ವಿಟರ್ ಸಂಸ್ಥೆಯನ್ನು ಸಂಪರ್ಕಿಸಿದ್ದು, ಈ ಆ್ಯಪ್ ಬಗ್ಗೆ ಮೊದಲು ಪೋಸ್ಟ್ ಮಾಡಿದ ವ್ಯಕ್ತಿಯ ಟ್ವಿಟರ್ ಖಾತೆಯನ್ನು ನಿರ್ಬಂಧಿಸಲಾಗಿದೆ.

ಪ್ರಕರಣದ ಬಗ್ಗೆ ಮುಂಬೈ ಪೊಲೀಸರಿಂದ ದೂರು ಸ್ವೀಕರಿಸಲಾಗಿದೆ. ಕ್ರಮ ಕೈಗೊಳ್ಳುವ ಪ್ರಕ್ರಿಯೆ ಪ್ರಧಾನ ಕಚೇರಿಯಲ್ಲಿ ನಡೆಯುತ್ತಿದೆ ಎಂದು ಗಿಟ್‌ಹಬ್ ವೇದಿಕೆಯು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯಕ್ಕೆ ಮಾಹಿತಿ ನೀಡಿದೆ.

'ಬುಲ್ಲಿ ಬಾಯಿ' ಆ್ಯಪ್ ಮೂಲಕ ಮಹಿಳೆಯರನ್ನು ಅವಹೇಳನ ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಶಿವಸೇನಾ ಸಂಸದೆ ಪ್ರಿಯಾಂಕಾ ಚತುರ್ವೇದಿ ಅವರು ಶನಿವಾರ ಆಗ್ರಹಿಸಿದ್ದರು.

'ಅಪರಾಧಿಗಳ ಜತೆ ಜೈಲ್ ಜೈಲ್ ಆಟ'

ಮೀರತ್ (ಪಿಟಿಐ): ಹಿಂದಿನ ಸರ್ಕಾರಗಳ ಅವಧಿಯಲ್ಲಿ ಅಪರಾಧಿಗಳು ಮತ್ತು ಮಾಫಿಯಾಗಳು ಅವರದ್ದೇ ಆಟ ಆಡುತ್ತಿದ್ದರು. ಆದರೆ ಈಗ ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರ ಅವರ ಜೊತೆ 'ಜೈಲ್ ಜೈಲ್' ಆಟ ಆಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಹೇಳಿದರು. ಮೋದಿ ಅವರು ಹಿಂದಿನ ಸರ್ಕಾರಗಳನ್ನು ಈ ಮೂಲಕ ಟೀಕಿಸಿದರು. 9

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಳ ಪುಟಗಳು



ನಿವೇಶನ ಹಂಚಿಕೆ: ತುರ್ತು ಸಭೆ ಕರೆಯಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಸ್‌ಸಿಪಿ–ಟಿಎಸ್‌ಪಿ ಯೋಜನೆಯಡಿ ಆಯ್ಕೆಯಾದ ಪರಿಶಿಷ್ಟ ಸಮುದಾಯದ 1,110 ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡುವ ಸಂಬಂಧ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ತುರ್ತಾಗಿ ಸಭೆ ನಡೆಸಬೇಕು' ಎಂದು ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘ ಅಧ್ಯಕ್ಷ ಮೈಸೂರು ನಾರಾಯಣ ಆಗ್ರಹಿಸಿದ್ದಾರೆ.

'ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯಡಿ (ಟಿಎಸ್‌ಪಿ) ಬಿಬಿಎಂಪಿ ಈವರೆಗೆ ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡಿಲ್ಲ. ಬದಲಾಗಿ ಫಲಾನುಭವಿಗಳಿಗೆ ಮಾರಕವಾಗುವಂತೆ ಯೋಜನೆಯನ್ನೇ ಬದಲಾಯಿಸಲು ಹೊರಟಿದೆ. ಈ ಕ್ರಮದ ಬಗ್ಗೆ ಚರ್ಚಿಸಲು ದಿನಾಂಕ ನಿಗದಿಯಾದರೂ ಸಭೆಯನ್ನು ಮುಂದೂಡಲಾಗುತ್ತಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತುರ್ತಾಗಿ ಸಭೆ ಕರೆದು, ಫಲಾನುಭವಿಗಳಿಗೆ ನ್ಯಾಯ ಒದಗಿಸಬೇಕು. ಇಲ್ಲದಿದ್ದರೆ ಪ್ರತಿಭಟನೆಗೆ ಮುಂದಾಗಲಿದ್ದೇವೆ' ಎಂದೂ ಎಚ್ಚರಿಸಿದ್ದಾರೆ.





ಸ್ಥಳೀಯರ ಪ್ರತಿಭಟನೆ ನಂತರ ಬಿಬಿಎಂಪಿ ಸಿಬ್ಬಂದಿ ಜೆಸಿಬಿ ಬಳಸಿ ತ್ಯಾಜ್ಯ ತೆರವುಗೊಳಿಸಲು ಮುಂದಾದರು (ಎಡ ಚಿತ್ರ). ಚರಂಡಿ ನೀರು ರಸ್ತೆಯ ಮೇಲೆ ನಿಂತಿರುವುದು – ಪ್ರಜಾವಾಣಿ ಚಿತ್ರಗಳು/ ಎಂ.ಎಸ್.ಮಂಜುನಾಥ್

ಮೈಸೂರು ರಸ್ತೆ ಆನಂದಪುರ ನಿವಾಸಿಗಳ ಅಳಲು

ತೆರವಾಗದ ತ್ಯಾಜ್ಯ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಮಾರು 6 ತಿಂಗಳಿಂದ ರಸ್ತೆ ಬದಿಯಲ್ಲೇ ಕೊಳೆತು ನಾರುತ್ತಿದ್ದ ತ್ಯಾಜ್ಯವನ್ನು ಹಲವು ಬಾರಿ ಮನವಿ ಮಾಡಿದರೂ ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸದ್ದಕ್ಕೆ ಆಕ್ರೋಶಗೊಂಡ ಮೈಸೂರು ರಸ್ತೆ ಆನಂದಪುರ ನಿವಾಸಿಗಳು ಭಾನುವಾರ ರಸ್ತೆ ಬಂದ್ ಮಾಡಿ ಪ್ರತಿಭಟನೆ ನಡೆಸಿದರು.

ಸಿಸಿಬಿ ಕಚೇರಿಯಿಂದ ಸಿರ್ಸಿ ವೃತ್ತದವರೆಗೆ ರಸ್ತೆಯ ಎರಡು ಬದಿಗಳಲ್ಲೂ ಬ್ಯಾರಿಕೇಡ್‌ಗಳನ್ನು ಹಾಕಿ ವಾಹನ ಸಂಚಾರ ನಿರ್ಬಂಧಿಸಿದ ಪ್ರತಿಭಟನಕಾರರು ಸ್ಥಳೀಯ ಶಾಸಕರು ಹಾಗೂ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ರಸ್ತೆಯ ಮೇಲೆ ಚರಂಡಿ ನೀರು ಹರಿಯುತ್ತಿರುವುದರಿಂದ ಶಾಲೆ, ಕಾಲೇಜುಗಳಿಗೆ ಹೋಗುವ ಮಕ್ಕಳಿಗೆ ತೊಂದರೆಯಾಗುತ್ತಿದೆ. ರಸ್ತೆಯಲ್ಲಿ ಮಾರುದ್ದದವರೆಗೂ ಗುಂಡಿಗಳು ಬಿದ್ದಿದ್ದು, ದ್ವಿಚಕ್ರವಾಹನ ಸವಾರರಿಗೆ ಸಮಸ್ಯೆಯಾಗುತ್ತಿದೆ. ಹಲವರು ಗುಂಡಿ ತಪ್ಪಿಸುವ ಭರದಲ್ಲಿ ಆಯತಪ್ಪಿ ಬಿದ್ದು ಗಾಯ ಮಾಡಿಕೊಂಡಿರುವ ಸಾಕಷ್ಟು ನಿದರ್ಶನಗಳೂ ಇವೆ' ಎಂದು ಪ್ರತಿಭಟನಕಾರರು ದೂರಿದರು.

'ಕೊಳೆಗೇರಿ ನಿವಾಸಿಗಳು ಎಂಬ ಕಾರಣಕ್ಕೆ ನಮ್ಮ ಸಮಸ್ಯೆಗಳ ಬಗ್ಗೆ ಅಧಿಕಾರಿಗಳು ತಾತ್ಸಾರ ತೋರುತ್ತಾರೆ. ತ್ಯಾಜ್ಯದಿಂದ ಹೊರಸೂಸುವ ಗಬ್ಬು ವಾಸನೆಯಿಂದಾಗಿ ಉಸಿರಾಡುವುದಕ್ಕೂ ಕಷ್ಟವಾಗುತ್ತಿದೆ. ಮಕ್ಕಳು ಸಾಂಕ್ರಾಮಿಕ ರೋಗಗಳಿಗೂ ತುತ್ತಾಗುತ್ತಿದ್ದಾರೆ' ಎಂದೂ ಆರೋಪಿಸಿದರು.

'ಆರು ತಿಂಗಳಿಂದ ಒಳಚರಂಡಿ ಸ್ವಚ್ಛಗೊಳಿಸಿಲ್ಲ. ರಸ್ತೆಯಲ್ಲೆಲ್ಲಾ ತ್ಯಾಜ್ಯ ಹರಡಿಕೊಂಡಿದೆ. ಹೀಗಾಗಿ ಬೆಳಿಗ್ಗೆ ಹಾಗೂ ಸಂಜೆ ಸಮಯದಲ್ಲಿ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಶಾಸಕರು, ಅಧಿಕಾರಿಗಳು ಈ ಮಾರ್ಗದಲ್ಲೇ ಹಾದು ಹೋಗುತ್ತಾರೆ. ಹೀಗಿದ್ದರೂ ರಸ್ತೆಯ ದುಸ್ಥಿತಿ ಅವರಿಗೆ ಕಂಡಿಲ್ಲವೆ. ಇದನ್ನು ಸರಿಪಡಿಸಲು ಅವರೇಕೆ ಕ್ರಮ ಕೈಗೊಂಡಿಲ್ಲ' ಎಂದು ಸ್ಥಳೀಯರು ಪ್ರಶ್ನಿಸಿದರು.

'ಮೈಸೂರು ರಸ್ತೆಯಲ್ಲಿರುವ ವಿನಾಯಕ ಚಿತ್ರಮಂದಿರದ ಎದುರು ಬಿಸ್ಕತ್ ತಯಾರಿಕಾ ಕಾರ್ಖಾನೆ ಇದೆ. ಅದರ ಶೌಚಾಲಯದ ನೀರೆಲ್ಲಾ ಚರಂಡಿಗೆ ನುಗ್ಗುತ್ತದೆ. ಅದು ತುಂಬಿ ರಸ್ತೆಯ ಮೇಲೇ ಹರಿಯುತ್ತಿದೆ. ಅದರಿಂದ ದುರ್ನಾತವೂ ಬೀರುತ್ತಿದೆ. ಮನೆಯಲ್ಲಿ ವಾಸಿಸುವುದಕ್ಕೂ ಆಗುವುದಿಲ್ಲ. ಇದನ್ನೆಲ್ಲಾ ಸಹಿಸಿಕೊಂಡು ನಾವು ರೋಸಿ ಹೋಗಿದ್ದೇವೆ. ಸಂಬಂಧಪಟ್ಟವರಿಗೆಲ್ಲಾ ಮನವಿ ಪತ್ರ ನೀಡಿದರೂ ಪ್ರಯೋಜನವಾಗಿಲ್ಲ. ಹೀಗಾಗಿ ಪ್ರತಿಭಟನೆ ನಡೆಸಿದೆವು' ಎಂದು ಸ್ಥಳೀಯರಾದ ಸೆಲ್ವರಾಜ್ ಹೇಳಿದರು.

'ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆಯ ಮೇಲೆಯೇ ರಾಶಿ ಕಸ ಹರಡಿಕೊಂಡಿದೆ. ಕಿರಾಣಿ ಅಂಗಡಿ, ಔಷಧ ಅಂಗಡಿಗಳಿಗೆ ಹೋಗುವುದಕ್ಕೂ ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬಡಾವಣೆಯಲ್ಲಿ 1,000ಕ್ಕೂ ಅಧಿಕ ಮನೆಗಳಿವೆ. ತ್ಯಾಜ್ಯದಿಂದಾಗಿ ಇಲ್ಲಿ ವಾಸಿಸುವುದೇ ಕಷ್ಟವಾಗಿದೆ. ಪ್ರತಿಭಟನೆ ಬಳಿಕ ಎಚ್ಚೆತ್ತಿರುವ ಸಿಬ್ಬಂದಿ ತ್ಯಾಜ್ಯ ತೆರವುಗೊಳಿಸಿದ್ದಾರೆ. ಈ ಕಾರ್ಯ ಒಂದು ದಿನಕ್ಕೆ ಸೀಮಿತವಾಗಬಾರದು. ಇದು ಹೀಗೆ ಮುಂದುವರಿಯಬೇಕು. ಆಗ ಮಾತ್ರ ನಾವು ನೆಮ್ಮದಿಯ ಬದುಕು ನಡೆಸಲು ಸಾಧ್ಯ' ಎಂದು ತಿಳಿಸಿದರು.

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ಜ.4ರಂದು ಬೆಳಿಗ್ಗೆ 8 ಗಂಟೆಯಿಂದ ಸಂಜೆ 5ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಕಾಚಮಾರನಹಳ್ಳಿ, ವರ್ತೂರು, ಸುಲಿಕುಂಟೆ, ಗುಂಜೂರು, ಪಣತೂರ ದಿಣ್ಣೆ, ಬಾಳಗೆರೆ ವೈಟ್‌ಫೀಲ್ಡ್ ಮುಖ್ಯ ರಸ್ತೆ, ರಾಮಗೊಂಡನಹಳ್ಳಿ, ಗುಂಜೂರು ಹೊಸಹಳ್ಳಿ, ವಿನಾಯಕ ಚಿತ್ರಮಂದಿರ, ವಿನಾಯಕ ಬಡಾವಣೆ, ವರ್ತೂರು ಮುಖ್ಯ ರಸ್ತೆ, ಬಾಳಗೇರಿ ರಸ್ತೆ, ಈದ್ಗಾ ರಸ್ತೆ, ಪ್ರಕಾಶ್ ಬಡಾವಣೆ, ಮಧುರ ನಗರ ಸುತ್ತಮುತ್ತ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಬಿಬಿಎಂಪಿಗೆ ₹ 1,500 ಕೋಟಿ ಹೆಚ್ಚುವರಿ ಅನುದಾನ

ಒಂದನೇ ಪುಟದಿಂದ...

ಬೀದಿದೀಪ ನೇರ ನಿರ್ವಹಣೆ: ಪಾಲಿಕೆ ವ್ಯಾಪ್ತಿಯಲ್ಲಿ ಎಲ್‌ಇಡಿ ಬೀದಿ ದೀಪಗಳ ಅಳವಡಿಕೆಗೆ ನೀಡಿದ್ದ ಟೆಂಡರ್ ರದ್ದುಗೊಳಿಸಿ, ತಾತ್ಕಾಲಿಕವಾಗಿ ಬಿಬಿಎಂಪಿಯಿಂದಲೇ ಬೀದಿ ದೀಪಗಳನ್ನು ನಿರ್ವಹಣೆ ಮಾಡುವಂತೆ ಮುಖ್ಯಮಂತ್ರಿ ಸೂಚನೆ ನೀಡಿದರು.

ಇಡೀ ಪಾಲಿಕೆ ವ್ಯಾಪ್ತಿಯ ಬೀದಿ ದೀಪಗಳ ಬದಲಾವಣೆ ಮತ್ತು ನಿರ್ವಹಣೆಯ ಗುತ್ತಿಗೆಯನ್ನು ಒಬ್ಬರಿಗೇ ನೀಡಬಾರದು. ವಲಯವಾರು ಪ್ರತ್ಯೇಕವಾದ ಟೆಂಡರ್ ಪ್ರಕ್ರಿಯೆ ನಡೆಸಬೇಕು. ಬೀದಿ ದೀಪಗಳ ನಿರ್ವಹಣೆಗೆ ಪಾಲಿಕೆಯಲ್ಲಿ ಹಣದ ಕೊರತೆ ಇದ್ದರೆ ತಕ್ಷಣ ಪ್ರಸ್ತಾವ ಸಲ್ಲಿಸಿ ಅನುಮೋದನೆ ಪಡೆಯಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ನಿರ್ಭಯಾ ಯೋಜನೆಯಡಿ 7,000 ಸಿಸಿಟಿವಿ ಕ್ಯಾಮೆರಾ ಅಳವಡಿಸುವ ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರಬೇಕು. ಬಿಬಿಎಂಪಿಗೆ ಹೊಸದಾಗಿ ಸೇರಿರುವ 110 ಗ್ರಾಮಗಳಲ್ಲಿ ರಸ್ತೆ ಅಭಿವೃದ್ಧಿಯನ್ನು ಶೀಘ್ರದಲ್ಲಿ ಪೂರ್ಣಗೊಳಿಸಬೇಕು. ಅತಿ ದಟ್ಟಣೆ ಕಾರಿಡಾರ್‌ಗಳ ದುರಸ್ತಿ ಕಾಮಗಾರಿಗೆ ಅಲ್ಪಾವಧಿ ಟೆಂಡರ್ ಪ್ರಕ್ರಿಯೆ ನಡೆಸಬೇಕು ಎಂದು ಮುಖ್ಯಮಂತ್ರಿ ನಿರ್ದೇಶನ ನೀಡಿದರು.

ಗುಂಡಿ ಮುಚ್ಚಲು 15 ದಿನ: ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ, 'ಮಳೆಯಿಂದ ಹಾಳಾಗಿದ್ದ ನಗರದ ರಸ್ತೆಗಳಲ್ಲಿ ಗುಂಡಿ ಮುಚ್ಚುವ ಕೆಲಸ ಶೇಕಡ 80 ರಷ್ಟು ಪೂರ್ಣಗೊಂಡಿದೆ. ಬಾಕಿ ಉಳಿದಿರುವ 751 ಕಿ.ಮೀ. ರಸ್ತೆಗಳ ಗುಂಡಿಗಳನ್ನು ಮುಚ್ಚಲು ಮುಖ್ಯಮಂತ್ರಿಯವರು 15 ದಿನ ಗಡುವು ನೀಡಿದ್ದಾರೆ ಎಂದರು.

ಟೆಂಡರ್ ಶ್ಯೂರ್ ರಸ್ತೆ ಕಾಮಗಾರಿಗಳನ್ನು ಮಾರ್ಚ್ 31ರೊಳಗೆ ಪೂರ್ಣಗೊಳಿಸಬೇಕು. ಐದು ಗ್ರೇಡ್ ಸಪರೇಟರ್‌ಗಳ ಕಾಮಗಾರಿಗಳನ್ನೂ ತ್ವರಿತವಾಗಿ ಮುಗಿಸಬೇಕು ಎಂದು ಮುಖ್ಯಮಂತ್ರಿ ತಾಕೀತು ಮಾಡಿದ್ದಾರೆ ಎಂದರು.

ಬಿಬಿಎಂಪಿಯಲ್ಲಿ ಐದು ತಿಂಗಳೊಳಗೆ ಕಾಯಂ ಎಂಜಿನಿಯರ್‌ಗಳ ನೇಮಕಾತಿಗೂ ಸೂಚಿಸಿದ್ದಾರೆ ಎಂದರು.

ಸಮನ್ವಯ ಸಮಿತಿ ರಚನೆ

'ಬಿಬಿಎಂಪಿ, ಬೆಸ್ಕಾಂ ಮತ್ತು ಜಲಮಂಡಳಿ ಅಧಿಕಾರಿಗಳ ನಡುವೆ ಸಮನ್ವಯದ ಕೊರತೆ ಇರುವುದರಿಂದ ಸಮಸ್ಯೆಯಾಗುತ್ತಿದೆ. ಹೊಸದಾಗಿ ನಿರ್ಮಿಸಿದ ರಸ್ತೆಗಳನ್ನೂ ಅಗೆಯಲಾಗುತ್ತಿದೆ' ಎಂದು ಮಹದೇವಪುರ ಶಾಸಕ ಅರವಿಂದ ಲಿಂಬಾವಳಿ ದೂರಿದರು. ಈ ಸಮಸ್ಯೆ ಪರಿಹರಿಸಲು ಬಿಬಿಎಂಪಿ, ಬೆಸ್ಕಾಂ ಮತ್ತು ಜಲಮಂಡಳಿ ಅಧಿಕಾರಿಗಳನ್ನು ಒಳಗೊಂಡ ಸಮನ್ವಯ ಸಮಿತಿ ರಚಿಸಲಾಗುವುದು. ರಾಜ್ಯ ಮಟ್ಟದಲ್ಲಿ ಮೇಲ್ವಿಚಾರಣಾ ಸಮಿತಿ ಮತ್ತು ಸಂಯೋಜಕರನ್ನು ನೇಮಿಸಿ ಮೂರು ದಿನಗಳೊಳಗೆ ಆದೇಶ ಹೊರಡಿಸಲಾಗುವುದು ಎಂದು ಮುಖ್ಯಮಂತ್ರಿ ಪ್ರಕಟಿಸಿದರು.

ವಿಶೇಷ ಅನುದಾನ?

ಸಭೆಯಲ್ಲಿದ್ದ ಹಲವು ಶಾಸಕರು ತಮ್ಮ ಕ್ಷೇತ್ರಗಳಿಗೆ ಹೆಚ್ಚಿನ ಅನುದಾನ ನೀಡುವಂತೆ ಆಗ್ರಹಿಸಿದರು. ಈ ಬೇಡಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಅಮೃತ ನಗರೋತ್ಥಾನ ಯೋಜನೆಗೆ ಮುಂದಿನ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗುವುದು. ಅದರ ಅಡಿಯಲ್ಲಿ ಬೆಂಗಳೂರು ನಗರಕ್ಕೆ ₹ 6,000 ಕೋಟಿ ವಿಶೇಷ ಅನುದಾನ ದೊರೆಯಲಿದೆ' ಎಂದು ಭರವಸೆ ನೀಡಿದರು. ತಮ್ಮ ಕ್ಷೇತ್ರದಲ್ಲಿ ಬಿಬಿಎಂಪಿ ಮತ್ತು ಜಲಮಂಡಳಿಯ ಕಾಮಗಾರಿಗಳು ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ದಾಸರಹಳ್ಳಿ ಶಾಸಕ ಆರ್. ಮಂಜುನಾಥ್ ಅಸಮಾಧಾನ ವ್ಯಕ್ತಪಡಿಸಿದರು. ಪಕ್ಷದ ಹೆಸರಿನಲ್ಲಿ ತಾರತಮ್ಯ ಮಾಡದಂತೆ ಎಲ್ಲ ಶಾಸಕರಿಗೂ ಸಮಾನವಾಗಿ ಅನುದಾನ ಒದಗಿಸುವಂತೆ ಬ್ಯಾಟರಾಯನಪುರ ಶಾಸಕ ಕೃಷ್ಣ ಬೈರೇಗೌಡ ಆಗ್ರಹಿಸಿದರು. ಸಭೆಯ ಕಾರ್ಯಸೂಚಿಯನ್ನು ಮುಂಚಿತವಾಗಿ ನೀಡಿಲ್ಲ ಮತ್ತು ತಮಗೆ ಮಾತನಾಡಲು ಅವಕಾಶ ನೀಡಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ರಮೇಶ್ ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ರಾಷ್ಟ್ರೀಯ ಅಧ್ಯಕ್ಷರಾಗಿ ಮುಂದುವರಿಕೆ: ಮಾತೆ ಗಂಗಾದೇವಿ ಸ್ಪಷ್ಟನೆ

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): 'ಚಿತ್ರದುರ್ಗ ಬಸವ ಮಂಟಪದಲ್ಲಿ ಬಸವ ಧರ್ಮ ಪೀಠದ ಕೆಲವು ಸ್ವಾಮೀಜಿಗಳು, ಭಕ್ತರು ತಮ್ಮ ಗಮನಕ್ಕೆ ತಾರದೇ ಬಸವರಾಜ ಧನ್ನೂರ ಅವರನ್ನು ರಾಷ್ಟ್ರೀಯ ಅಧ್ಯಕ್ಷ ಸ್ಥಾನದಿಂದ ಪದಚ್ಯುತಗೊಳಿಸಿದ್ದೇವೆ ಎಂದು ಘೋಷಿಸಿರುವುದು ಅಮಾನ್ಯ. ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾಗಿ ಅವರೇ ಮುಂದುವರಿಯುವರು' ಎಂದು ಕೂಡಲಸಂಗಮ ಬಸವಧರ್ಮ ಪೀಠದ ಪೀಠಾಧ್ಯಕ್ಷೆ ಮಾತೆ ಗಂಗಾದೇವಿ ಸ್ಪಷ್ಟಪಡಿಸಿದ್ದಾರೆ.



'ಕೂಡಲಸಂಗಮ ಬಸವ ಧರ್ಮ ಪೀಠದ ಅಡಿಯಲ್ಲಿ ರಾಷ್ಟ್ರೀಯ ಬಸವ ದಳ, ಲಿಂಗಾಯತ ಧರ್ಮ ಮಹಾಸಭಾ, ಕ್ರಾಂತಿ ಗಂಗೋತ್ರಿ ಮಹಿಳಾ ಗಣ, ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್, ವಿಶ್ವಕಲ್ಯಾಣ ಮಿಷನ್, ಅಕ್ಕಮಹಾದೇವಿ ಅನುಭಾವ ಪೀಠ ಮುಂತಾದವು ಕಾರ್ಯನಿರ್ವಹಿಸುತ್ತಿವೆ. ಈ ಎಲ್ಲ ಸಂಘಟನೆ, ಟ್ರಸ್ಟ್‌ಗಳಿಗೆ ನಾನೇ ಅಧ್ಯಕ್ಷೆ. ನನ್ನ ಅನುಮೋದನೆ ಇಲ್ಲದೇ ಯಾವುದೇ ಪದಾಧಿಕಾರಿಗಳನ್ನು ತೆಗೆಯುವ, ನೇಮಿಸುವ ಅಧಿಕಾರ ಯಾರಿಗೂ ಇಲ್ಲ. ನಾನು ನೀಡುವ ಸಂದೇಶವೇ ಬಸವ ಧರ್ಮ ಪೀಠದ ಅಧಿಕೃತ ಆದೇಶವಾಗಿರುತ್ತದೆ' ಎಂದಿದ್ದಾರೆ.

'ಬಸವ ಧರ್ಮ ಪೀಠದ ಕುರಿತು ಕೆಲವು ಮಠಾಧೀಶರು, ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರು ಸತ್ಯಕ್ಕೆ ದೂರವಾದ ಆರೋಪ, ಟೀಕೆ ಮಾಡುತ್ತಿರುವರು, ಮುಂದುವರಿಸಿದರೆ ಶಿಸ್ತು ಕ್ರಮ ಕೈಗೊಳ್ಳಬೇಕಾಗುತ್ತದೆ' ಎಂದು ಅವರು ಎಚ್ಚರಿಸಿದ್ದಾರೆ.

ಶಾಲೆಗಳಲ್ಲಿಯೇ ಕೋವಿಡ್ ಲಸಿಕೆ ಕೊಡಿ– ರುಪ್ಸ

ಬೆಂಗಳೂರು: 15ರಿಂದ18 ವರ್ಷದ ಒಳಗಿನ ಮಕ್ಕಳಿಗೆ ಶಾಲೆಗಳಲ್ಲಿಯೇ ಕೋವಿಡ್ ಲಸಿಕೆ ನೀಡಬೇಕು ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘ (ರುಪ್ಸ) ಸರ್ಕಾರವನ್ನು ಒತ್ತಾಯಿಸಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿರುವ ಸಂಘದ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ, 'ಎಲ್ಲ ಶಾಲೆಗಳಲ್ಲಿ ಭೌತಿಕ ತರಗತಿಗಳು ನಡೆಯುತ್ತಿವೆ. ಶೇ 100 ರಷ್ಟು ಹಾಜರಾತಿಯೂ ಇದೆ. ಪ್ರೌಢಶಾಲೆಗಳಲ್ಲಿ ಎಲ್ಲ ಮಕ್ಕಳು ಲಭ್ಯ ಇರುವುದರಿಂದ ಅಲ್ಲಿಯೇ ಲಸಿಕೆ ನೀಡಲು ಕ್ರಮ ತೆಗೆದುಕೊಳ್ಳಬೇಕು' ಎಂದು ಮನವಿ ಮಾಡಿದ್ದಾರೆ.

'ಇದರಿಂದ ಕಡಿಮೆ ಅವಧಿಯಲ್ಲಿ ಎಲ್ಲ ಮಕ್ಕಳಿಗೆ ಲಸಿಕೆ ಕೊಡಲು ಸಾಧ್ಯವಿದೆ. ರಾಜ್ಯದ ಎಲ್ಲ ಪ್ರೌಢಶಾಲೆಗಳಲ್ಲಿ ಏಕಕಾಲದಲ್ಲಿ ಲಸಿಕೆ ನೀಡುವ ಅಭಿಯಾನ ಕೈಗೊಳ್ಳಬೇಕು' ಎಂದೂ ಅವರು ಆಗ್ರಹಿಸಿದ್ದಾರೆ.

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	29.00 ಕೋಟಿ ▲	3.48 ಕೋಟಿ
ಸಕ್ರಿಯ ಪ್ರಕರಣ	3.00ಕೋಟಿ ▲	1,22,801 ▲
ಗುಣಮುಖ	25.43ಕೋಟಿ ▲	3.42 ಕೋಟಿ
ಸಾವು	54.59 ಲಕ್ಷ ▲	4.81 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	11.90ಲಕ್ಷ ▼	27,533 ▲
ಗುಣಮುಖ	4.99 ಲಕ್ಷ ▼	9,249 ▲
ಸಾವು	4,150 ▼	284 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 5.72 ಲಕ್ಷ ಅಮೆರಿಕ ▲ | 1.62 ಬ್ರಿಟನ್ ▼ | 2.19 ಫ್ರಾನ್ಸ್ ▼

ಎಲ್ಲಿ ಹೆಚ್ಚು ಸಾವು: 1.41 ಲಕ್ಷ ಮಹಾರಾಷ್ಟ್ರ | 36,784 ತಮಿಳುನಾಡು ▲ | 48,035 ಕೇರಳ ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 1.34 ಕೋಟಿ ಅಮೆರಿಕ ▲ | 25.86 ಬ್ರಿಟನ್ ▲ | 19.33 ಫ್ರಾನ್ಸ್ ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 66.87 ಮಹಾರಾಷ್ಟ್ರ ▲ | 52.49 ಕೇರಳ ▲ | 27.49 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ಆಸ್ಪತ್ರೆಗೆ ದಾಖಲಾಗುತ್ತಿರುವವರ ಸಂಖ್ಯೆಯಲ್ಲಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸದ್ಯ ಕೇವಲ ಎರಡು ಸರ್ಕಾರಿ ಆಸ್ಪತ್ರೆಗಳು ಮಾತ್ರ ಕೋವಿಡ್–19 ರೋಗಿಗಳನ್ನು ದಾಖಲಿಸಿಕೊಳ್ಳುತ್ತಿರುವುದರಿಂದ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸೋಂಕಿತರ ಸಂಖ್ಯೆ ಕ್ರಮೇಣ ಹೆಚ್ಚಾಗುತ್ತಿದೆ.

ಆದರೆ, ಬಹುತೇಕರಲ್ಲಿ ಸೌಮ್ಯ ಸ್ವರೂಪದ ಲಕ್ಷಣಗಳಿವೆ ಎಂದು ವೈದ್ಯರು ತಿಳಿಸಿದ್ದಾರೆ.

ಬಿಬಿಎಂಪಿ ವತಿಯಿಂದ ಕಲ್ಪಿಸಲಾಗುವ ಸರ್ಕಾರಿ ಕೋಟಾ ಅಡಿಯಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾಗುವವರ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದೆ. ಪ್ರತಿ ದಿನ 26ಕ್ಕೂ ಹೆಚ್ಚು ಮಂದಿ ಈ ಆಸ್ಪತ್ರೆಗಳಿಗೆ ದಾಖಲಾಗುತ್ತಿದ್ದಾರೆ.

'ರೋಗಿಗಳು ವೆಂಟಿಲೇಟರ್ ರಹಿತ ಹಾಸಿಗೆಗಳಿಗೆ ದಾಖಲಾಗುತ್ತಿದ್ದಾರೆ. ಅದರಲ್ಲೂ 45 ವಯಸ್ಸಿನ ಮೇಲಿನವರೇ ಹೆಚ್ಚಿನ ಸಂಖ್ಯೆಯಲ್ಲಿ ಚಿಕಿತ್ಸೆ ಪಡೆಯಲು ದಾಖಲಾಗಿದ್ದಾರೆ' ಎಂದು ಬೌರಿಂಗ್, ಲೇಡಿ ಕರ್ಜನ್ ವೈದ್ಯಕೀಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ನೋಡಲ್ ಅಧಿಕಾರಿ ಡಾ.ಎಚ್.ಎಂ. ಶ್ರೀಕಾಂತ್ ಹೆಳವಾರ್ ತಿಳಿಸಿದ್ದಾರೆ.

ಕಳೆದ 14 ದಿನಗಳಲ್ಲಿ 296 ಮಂದಿ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರೆ, ಕೇವಲ 38 ಮಂದಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವುದು ಬಿಬಿಎಂಪಿ ಅಂಕಿ–ಸಂಖ್ಯೆಗಳಿಂದ ತಿಳಿದು ಬಂದಿದೆ.

ಮಕ್ಕಳಿಗೆ ಲಸಿಕೆ: 15 ರಿಂದ 18 ವರ್ಷದ ಮಕ್ಕಳಿಗೆ ಕೋವಿಡ್ ಲಸಿಕೆ ನೀಡುವ ಅಭಿಯಾನಕ್ಕೆ ಬಿಬಿಎಂಪಿ ಎಲ್ಲ ಸಿದ್ಧತೆಗಳನ್ನು ಕೈಗೊಂಡಿದೆ.

ಈ ವಯೋಮಾನದ ಸುಮಾರು 7.5 ಲಕ್ಷ ಮಕ್ಕಳಿಗೆ ಲಸಿಕೆ ನೀಡಲು ಉದ್ದೇಶಿಸಲಾಗಿದೆ. ಶಾಲೆ ಮತ್ತು ಕಾಲೇಜುಗಳ ಆವರಣದಲ್ಲಿ ಲಸಿಕೆ ನೀಡಲು ಕ್ರಮ ಕೈಗೊಳ್ಳಲಾಗಿದೆ. ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವಂತೆ ಡಿಡಿಪಿಐ ಮತ್ತು ಬಿಇಒಗಳಿಗೂ ಸೂಚಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,65,351 ▲ ಒಟ್ಟು ಸೋಂಕಿತರು (12,64,428 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
8,671 ▲	12,40,274 ▲	16,405 ▲

ದಿನದ ಏರಿಕೆ

ಹೊಸ ಪ್ರಕರಣ	923 ▲
ಗುಣಮುಖ	125 ▼
ಸಾವು	03 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಮಾಹಿತಿ ಫಲಕ ನಿಲ್ಲಿಸಿ

ಸಹಕಾರನಗರದ 20ನೇ ಅಡ್ಡರಸ್ತೆಯಲ್ಲಿ ಆರು ತಿಂಗಳ ಹಿಂದೆ ವಿದ್ಯುತ್ ಪರಿವರ್ತಕ ಅಳವಡಿಕೆ ಕಾಮಗಾರಿಯನ್ನು ಬೆಸ್ಕಾಂ ಕೈಗೆತ್ತಿಕೊಂಡಿತ್ತು. ಅಲ್ಲಿ ಅಳವಡಿಸಿದ್ದ ವಿಳಾಸದ ಫಲಕವನ್ನು ಕಾಮಗಾರಿಗಾಗಿ ತಾತ್ಕಾಲಿಕವಾಗಿ ತೆರವು ಮಾಡಿದ್ದರು. ಆದರೆ, ಈವರೆಗೆ ಆ ಫಲಕವನ್ನು ಮತ್ತೆ ಅದೇ ಸ್ಥಳದಲ್ಲಿ ಅಳವಡಿಸದೆ ಬಿಟ್ಟಿದ್ದಾರೆ. ಆರು ತಿಂಗಳಿನಿಂದ ಆ ಫಲಕ ರಸ್ತೆ ಬದಿಯಲ್ಲೇ ಇದೆ.

ಫಲಕ ಇಲ್ಲದಿರುವುದರಿಂದ ಈ ರಸ್ತೆಯಲ್ಲಿನ ವಿಳಾಸ ತಿಳಿಯಲು ಹಾಗೂ ಆಹಾರ, ಇನ್ನಿತರ ವಸ್ತುಗಳನ್ನು ಮನೆಗೆ ತಲುಪಿಸುವ ಡೆಲಿವರಿ ಸಿಬ್ಬಂದಿಯೂ ವಿಳಾಸ ಹುಡುಕಲು ಪರದಾಡುತ್ತಿದ್ದಾರೆ. ಮಾಹಿತಿ ಫಲಕವನ್ನು ಮೂಲ ಸ್ಥಳದಲ್ಲಿ ಅಳವಡಿಸಲು ಬೆಸ್ಕಾಂ ಅಧಿಕಾರಿಗಳು ಕ್ರಮ ಜರುಗಿಸಬೇಕು.

ಎ.ಎನ್.ಗಿರೀಶ್, ಸಹಕಾರ ನಗರ ನಿವಾಸಿ



ಸಹಕಾರ ನಗರದ 20ನೇ ಅಡ್ಡರಸ್ತೆಯಲ್ಲಿ ಬಿದ್ದಿರುವ ವಿಳಾಸ ಫಲಕ



ರಾಜರಾಜೇಶ್ವರಿ ನಗರದ ಶಂಕರಪ್ಪ ಬಡಾವಣೆಯಲ್ಲಿ ರಸ್ತೆ ಹಾಳಾಗಿರುವುದು

ಬಡಾವಣೆಯಲ್ಲಿ ಒಳ್ಳೆಯ ರಸ್ತೆಗಳನ್ನು ನಿರ್ಮಿಸಿ

ರಾಜರಾಜೇಶ್ವರಿ ನಗರ ವ್ಯಾಪ್ತಿಯ ಶಂಕರಪ್ಪ ಬಡಾವಣೆಯು ಹಲವಾರು ವರ್ಷಗಳಿಂದ ಸರಿಯಾದ ರಸ್ತೆಯನ್ನು ಕಂಡಿಲ್ಲ. ಇಲ್ಲಿ ಒಳಚರಂಡಿ ಮಾರ್ಗವೂ ಇಲ್ಲ. ಇಲ್ಲಿನ ನಿವಾಸಿಗಳು ಸೂಕ್ತ ರಸ್ತೆಯಿಲ್ಲದೆ, ಪರದಾಡುತ್ತಿದ್ದಾರೆ. ಗುಂಡಿಮಯ ರಸ್ತೆಗಳಲ್ಲಿ ಮಕ್ಕಳು ಹಾಗೂ ವಯಸ್ಸಾದವರು ನಡೆದಾಡಲು ಸಮಸ್ಯೆಯಾಗಿದೆ. ಸ್ಥಳೀಯ ಜನಪ್ರತಿನಿಧಿಗಳು ಈ ಬಗ್ಗೆ ಗಮನಹರಿಸಿಲ್ಲ. ದಯವಿಟ್ಟು ಈ ಬಡಾವಣೆಯಲ್ಲಿ ಉತ್ತಮ ರಸ್ತೆ ಹಾಗೂ ಒಳಚರಂಡಿ ಕಾಮಗಾರಿಗಳನ್ನು ಆರಂಭಿಸಿ.

ರಂಗನಾಥ್, ಶಂಕರಪ್ಪ ಬಡಾವಣೆ ನಿವಾಸಿ

ರಸ್ತೆ ಸರಿಪಡಿಸಿ

ಶ್ರೀರಾಂಪುರ ಮೆಟ್ರೊ ನಿಲ್ದಾಣ ಸಮೀಪದ ಮಾರುತಿ ಬಡಾವಣೆ, 2ನೇ ಮುಖ್ಯರಸ್ತೆ, ಸಂಪೂರ್ಣ ರಸ್ತೆ ಹದಗೆಟ್ಟಿದ್ದು ಸಂಚಾರ ಅಸ್ತವ್ಯಸ್ತವಾಗಿದೆ. ಕರ್ನಾಟಕ ಬ್ಯಾಂಕ್ ಹತ್ತಿರ. ಈ ರಸ್ತೆಯಲ್ಲಿ ದಿನಕ್ಕೆ ಹಲವು ವಾಹನಗಳು ಸಂಚರಿಸುತ್ತವೆ. ಕಾರು, ಕ್ಯಾಬ್‌ನಂತಹ ವಾಹನಗಳು ತಿರುಗಾಡಲು ಕಷ್ಟವಾಗಿದೆ. ಅಲ್ಲದೇ ಮುಖ್ಯರಸ್ತೆಯಿಂದ ಒಳತಿರುವು ಪಡೆಯಲು ಹರಸಾಹಸಪಡಬೇಕಾಗಿದೆ. ಅಲ್ಲಲ್ಲಿ ಗುಂಡಿಗಳಿದ್ದು ಮಕ್ಕಳಿಗೂ ನಡೆದಾಡುವುದು ಕಷ್ಟವಾಗಿದೆ. ಸಂಬಂಧಪಟ್ಟವರು ಈ ಬಗ್ಗೆ ಗಮನಹರಿಸಿ ಆದಷ್ಟು ಬೇಗ ಸಮಸ್ಯೆಗೆ ಪರಿಹರಿಸಿ.

ಶರಣ್, ಶ್ರೀರಾಂಪುರದ ನಿವಾಸಿ



ಮಾರುತಿ ಬಡಾವಣೆ, 2ನೇ ಮುಖ್ಯರಸ್ತೆ ಹದಗೆಟ್ಟಿರುವುದು

ವರದಿ ಫಲಶ್ರುತಿ



ಜೆಲ್ಲಿ ಮೆಷಿನ್ ವೃತ್ತಕ್ಕೆ ಸಾಗುವ ರಸ್ತೆ ದುರಸ್ತಿ

ಹದಗೆಟ್ಟ ರಸ್ತೆ ದುರಸ್ತಿ ಆರಂಭ

ವಿದ್ಯಾರಣ್ಯಪುರ ಬಸ್ ನಿಲ್ದಾಣದಿಂದ ಜೆಲ್ಲಿ ಮೆಷಿನ್ ವೃತ್ತಕ್ಕೆ ಸಾಗುವ ರಸ್ತೆ ಹದಗೆಟ್ಟಿತ್ತು. ಇದರ ದುರಸ್ತಿ ಕಾರ್ಯ ಒಂದು ವಾರದಿಂದ ನಡೆಯುತ್ತಿದೆ. ರಸ್ತೆಯಲ್ಲಿದ್ದ ದೊಡ್ಡ ಗುಂಡಿಗಳಿಗೆ ಜೆಲ್ಲಿ ಹಾಗೂ ಜೆಲ್ಲಿಪುಡಿ ಹಾಕಿ ಸಮತಟ್ಟು ಮಾಡಲಾಗಿದ್ದು, ಡಾಂಬರು ಹಾಕುವ ಕಾಮಗಾರಿ ಪ್ರಗತಿಯಲ್ಲಿದೆ.

'ಜೆಲ್ಲಿ ಮೆಷಿನ್ ವೃತ್ತಕ್ಕೆ ಸಾಗುವ ರಸ್ತೆ ತೀರಾ ಹದಗೆಟ್ಟಿದ್ದು, ಗುಂಡಿಗಳ ಗೂಡಾಗಿದೆ. ಬಸ್ ಹಾಗೂ ಖಾಸಗಿ ವಾಹನಗಳು ನರ್ತನ ಮಾಡಿಕೊಂಡೇ ಸಂಚರಿಸುತ್ತವೆ' ಎಂದು ಸಾರ್ವಜನಿಕರು 'ಪ್ರಜಾವಾಣಿ'ಗೆ ಅಳಲು ತೋಡಿಕೊಂಡಿದ್ದರು. ಈ ಸಂಬಂಧ 'ಕುಂದು–ಕೊರತೆ' ಅಂಕಣದಲ್ಲಿ 'ಗುಂಡಿಗಳ ಗೂಡಾದ ರಸ್ತೆ' ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು.

ರಸ್ತೆಯಲ್ಲೇ ತೆರೆದುಕೊಂಡ ಚರಂಡಿ

ಮರಿಯಪ್ಪನಪಾಳ್ಯದ ದೊಡ್ಡಬಸ್ತಿ ಮುಖ್ಯರಸ್ತೆಯಲ್ಲಿರುವ 12ನೇ ಅಡ್ಡರಸ್ತೆಗೆ ಹೊಂದಿಕೊಂಡಿರುವ ಚರಂಡಿಯು ಗುಂಡಿಯಾಗಿ ಬದಲಾಗಿದೆ. ಮಳೆ ನೀರು ಹರಿಯಲು ಇದನ್ನು ನಿರ್ಮಿಸಲಾಗಿತ್ತು. ಮುಖ್ಯರಸ್ತೆ ಆಗಿರುವುದರಿಂದ ಇಲ್ಲಿ ವಾಹನ ಸಂಚಾರವೂ ಹೆಚ್ಚು. ತಿರುವಿನಲ್ಲಿ ಸಂಚರಿಸುವಾಗ ವಾಹನಗಳು ಈ ಗುಂಡಿಗೆ ಬೀಳುವ ಸಾಧ್ಯತೆ ಹೆಚ್ಚು. ಇಲ್ಲಿನ ಸ್ಥಳೀಯರು ಕಸ ತಂದು ಗುಂಡಿಗೆ ಬಿಸಾಡುತ್ತಾರೆ. ಈ ಬಗ್ಗೆ ಪಾಲಿಕೆ ಅಧಿಕಾರಿಗಳಿಗೆ ದೂರು ನೀಡಿದ್ದೆ. ಆದರೆ, ಯಾವುದೇ ಕ್ರಮ ಕೈಗೊಳ್ಳಲಿಲ್ಲ. ತೆರೆದುಕೊಂಡಿರುವ ಈ ಚರಂಡಿಯನ್ನು ದಯವಿಟ್ಟು ಮುಚ್ಚಿ.

ಮಧುಚಂದ್ರ, ಭುವನೇಶ್ವರಿ ನಗರ



ಮರಿಯಪ್ಪನಪಾಳ್ಯದ ದೊಡ್ಡಬಸ್ತಿ ಮುಖ್ಯರಸ್ತೆಯಲ್ಲಿ ತೆರೆದುಕೊಂಡಿರುವ ಚರಂಡಿ ಗುಂಡಿ

ಬೀದಿ ನಾಯಿಗಳ ಹಾವಳಿ ತಪ್ಪಿಸಿ

ಆರ್.ಟಿ.ನಗರದ ಮನೋರಾಯನಪಾಳ್ಯ ಬಳಿಯ ಸೀತಪ್ಪ ಕಾಲೊನಿಯಲ್ಲಿ ರಾತ್ರಿ ಸಮಯದಲ್ಲಿ ಬೀದಿನಾಯಿಗಳ ಹಾವಳಿ ಹೆಚ್ಚಾಗಿದೆ. ರಾತ್ರಿಯಿಡೀ ಶಬ್ದ ಮಾಡುತ್ತ ಇಲ್ಲಿನ ನಿವಾಸಿಗಳಿಗೆ ಕಿರಿಕಿರಿ ಮಾಡುತ್ತವೆ. ರಾತ್ರಿ ವೇಳೆ ಸಂಚರಿಸುವ ವಾಹನ ಸವಾರರ ಮೇಲೂ ದಾಳಿ ನಡೆಸುತ್ತವೆ. ಪಾಲಿಕೆಯವರು ಬೀದಿ ನಾಯಿಗಳನ್ನು ಸ್ಥಳಾಂತರ ಮಾಡಲು ಕ್ರಮ ಕೈಗೊಳ್ಳಬೇಕು.

ಬಾಲಕೃಷ್ಣ, ಸೀತಪ್ಪ ಕಾಲೊನಿ ನಿವಾಸಿ

ಜಲಮಂಡಳಿ ಗುಂಡಿ ಮುಚ್ಚಿ

ಜ್ಞಾನಭಾರತಿ ವಾರ್ಡ್‌ನ ಮುತ್ತುರಾಯನಗರದಲ್ಲಿ ಆರು ತಿಂಗಳುಗಳ ಹಿಂದೆ ಜಲಮಂಡಳಿಯವರು ಕುಡಿಯುವ ನೀರಿನ ಪೈಪ್‌ಲೈನ್ ಸಂಪರ್ಕದ ಕಾಮಗಾರಿ ಕೈಗೆತ್ತಿಕೊಂಡಿದ್ದರು. ಅಲ್ಲಿ ಅಗೆಯಲಾಗಿದ್ದ ದೊಡ್ಡ ಗುಂಡಿಯನ್ನು ಈವರೆಗೆ ಮುಚ್ಚಿಲ್ಲ. ಜನರಿಗೆ ಸಮಸ್ಯೆಯಾಗದಂತೆ ಚಪ್ಪಡಿಯನ್ನೂ ಎಳೆದಿಲ್ಲ. ಇದರ ಪಕ್ಕದಲ್ಲೇ ರಸ್ತೆ ಇದ್ದು, ಹೆಚ್ಚು ಜನ ಈ ರಸ್ತೆಯಲ್ಲಿ ಸಂಚರಿಸುತ್ತಾರೆ. ಅಗೆದ ಮಣ್ಣನ್ನು ರಸ್ತೆಗೆ ಬರುವಂತೆ ರಾಶಿ ಹಾಕಲಾಗಿದೆ. ರಾತ್ರಿ ವೇಳೆ ವಾಹನಗಳು ಆಯತಪ್ಪಿ, ಈ ತೆರೆದ ಗುಂಡಿಗೆ ಬೀಳುವ ಅಪಾಯದ ಸ್ಥಿತಿ ಇದೆ. ಈ ಬಗ್ಗೆ ಸ್ಥಳೀಯ ಅಧಿಕಾರ ಗಮನಕ್ಕೆ ತಂದರೂ ಪ್ರಯೋಜನವಾಗಲಿಲ್ಲ. ಮಕ್ಕಳು ಹಾಗೂ ವೃದ್ಧರಿಗೆ ಈ ರಸ್ತೆ ಯೋಗ್ಯವಾಗಿಲ್ಲ. ಅನಾಹುತಗಳಿಗೆ ಆಸ್ಪದ ನೀಡದೆ, ಗುಂಡಿಯನ್ನು ಶೀಘ್ರವಾಗಿ ಮುಚ್ಚಿರಿ.

ತುಕಾರಾಂ, ಮಲ್ಲತ್ತಹಳ್ಳಿ ನಿವಾಸಿ



ಮುತ್ತುರಾಯನಗರದ ರಸ್ತೆ ಬದಿ ತೆರೆದುಕೊಂಡಿರುವ ಜಲಮಂಡಳಿ ಗುಂಡಿ

ನಗರದ ರಸ್ತೆ ಗುಂಡಿ ಮುಚ್ಚುವಲ್ಲಿ ತೋರಿದ ನಿರ್ಲಕ್ಷ್ಯಕ್ಕೆ ಶಿಕ್ಷೆ

ಇಬ್ಬರು ಎಂಜಿನಿಯರ್‌ಗಳ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ರಸ್ತೆ ಗುಂಡಿ ಮುಚ್ಚದ ಕಾರಣಕ್ಕೆ ಇಬ್ಬರು ಕಾರ್ಯ-ನಿರ್ವಾಹಕ ಎಂಜಿನಿಯರ್‌ಗಳ-ನ್ನು ಅಮಾನತು ಮಾಡಿ ಬಿಬಿಎಂಪಿ ಆದೇಶ ಹೊರಡಿಸಿದೆ. ಜತೆಗೆ, ನಾಲ್ವರು ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ನೋಟಿಸ್ ನೀಡಿದೆ.

ರಸ್ತೆಗಳನ್ನುಗುಂಡಿ ಮುಕ್ತಗೊಳಿಸಲು ವಲಯವಾರು ಕೈಗೊಂಡಿರುವ ಕ್ರಮಗಳ ಬಗ್ಗೆ ಹಲವಾರು ಪರಿಶೀಲನಾ ಸಭೆಗಳನ್ನು ನಡೆಸಲಾಗಿದೆ. ಮುಖ್ಯ ರಸ್ತೆಗಳು, ಉಪ ಮುಖ್ಯ ರಸ್ತೆಗಳು ಹಾಗೂ ವಾರ್ಡ್ ರಸ್ತೆಗಳನ್ನು ಮುಚ್ಚಲು ತ್ವರಿತ ಕ್ರಮ ಕೈಗೊಳ್ಳುವಂತೆ ಪಾಲಿಕೆಯ ಮುಖ್ಯ ಆಯುಕ್ತರು ಸೂಚಿಸಿದ್ದರು. ಎಲ್ಲ ರಸ್ತೆಗಳ ಗುಂಡಿ ಮುಚ್ಚುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಹ ನಿರ್ದೇಶನ ನೀಡಿದ್ದರು. ಗುಂಡಿ ಮುಚ್ಚಲು ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರು. ನಿರ್ಲಕ್ಷ್ಯ ತೋರಿದ ಆರೋಪದಲ್ಲಿ ಇದೀಗ ಎಂಜಿನಿಯರ್‌ಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ.

ಅಮಾನತು ಆದವರು: ಎನ್.ಎಸ್.ರೇವಣ್ಣ (ಪ್ರಭಾರ ಕಾರ್ಯಪಾಲಯ ಎಂಜಿನಿಯರ್, ಗಾಂಧಿನಗರ): ಗಾಂಧಿನಗರ ವಿಭಾಗದಲ್ಲಿ 787 ಗುಂಡಿಗಳಿದ್ದು, 67 ಗುಂಡಿಗಳನ್ನಷ್ಟೇ ಮುಚ್ಚಿ, ಶೇ 9 ಪ್ರಗತಿ.

ಸಿ.ಎಂ. ಶಿವಕುಮಾರ್(ಕಾರ್ಯ-ಪಾಲಕ ಎಂಜಿನಿಯರ್, ಯಲಹಂಕ ವಿಭಾಗ): ಯಲಹಂಕ ವಿಭಾಗದಲ್ಲಿ 18 ಗುಂಡಿಗಳಿದ್ದು, ಕೇವಲ 5 ಗುಂಡಿಗಳನ್ನು ಮುಚ್ಚಿ, ಶೇ 28 ಪ್ರಗತಿ.

ನೋಟಿಸ್ ಪಡೆದವರು: ಇ.ರಾಮಕೃಷ್ಣಪ್ಪ (ಕಾರ್ಯಪಾಲಕ ಎಂಜಿನಿಯರ್, ಶಿವಾಜಿನಗರ): ಈ ವಿಭಾಗದಲ್ಲಿ 298 ಗುಂಡಿಗಳಿದ್ದು, 127 ಗುಂಡಿಗಳನ್ನು ಮುಚ್ಚಿ, ಶೇ 43 ಪ್ರಗತಿ.

ಮೋಹನದಾಸ್ (ಪ್ರಭಾರ ಕಾರ್ಯಪಾಲಕ ಎಂಜಿನಿಯರ್, ಬ್ಯಾಟ-ರಾಯನಪುರ): ಈ ವಿಭಾಗದಲ್ಲಿ 239 ಗುಂಡಿಗಳಿದ್ದು, 76 ಗುಂಡಿಗಳನ್ನಷ್ಟೇ ಮುಚ್ಚಿ, ಶೇ 32 ಪ್ರಗತಿ.

ಎಚ್.ಎಸ್.ಮಹದೇಶ್ (ಕಾರ್ಯ ಪಾಲಕ ಎಂಜಿನಿಯರ್, ಬೊಮ್ಮನಹಳ್ಳಿ): ಇಲ್ಲಿನ ರಸ್ತೆ ಮೂಲಸೌಕರ್ಯ ವಿಭಾಗದ ವ್ಯಾಪ್ತಿಯಲ್ಲಿ 13 ಗುಂಡಿಗಳಿದ್ದು, 4 ಗುಂಡಿಗಳನ್ನು ಮಾತ್ರ ಮುಚ್ಚಿ, ಶೇ 31 ಪ್ರಗತಿ.

ಎಚ್.ವಿ.ಯರಪ್ಪ ರೆಡ್ಡಿ (ಕಾರ್ಯ ಪಾಲಕ ಎಂಜಿನಿಯರ್, ದಾಸರಹಳ್ಳಿ): ಇಲ್ಲಿನ ರಸ್ತೆ ಮೂಲಸೌಕರ್ಯ ವಿಭಾಗದಲ್ಲಿ 17 ಗುಂಡಿಗಳಿದ್ದು, 5 ಗುಂಡಿಗಳನ್ನು ಮಾತ್ರ ಮುಚ್ಚಿ, ಶೇ 29 ಪ್ರಗತಿ ಸಾಧನೆ.

ನಗರದಲ್ಲಿ ಇಂದು

ಅನಂತಸ್ವಾಮಿ ಮಹಾರಾಜರ ದಿವ್ಯಾರಾಧನೆ: ಕಲಶ ಸ್ಥಾಪನೆ, ಪಂಚಾಮೃತ ಅಭಿಷೇಕ, ಪ್ರವಚನ ಮತ್ತು ಭಜನೆ, ಆಯೋಜನೆ ಮತ್ತು ಸ್ಥಳ-ಅನಂತಸ್ವಾಮಿ ಆಶ್ರಮ, ಸುಬೇದಾರ್ ಛತ್ರ ರಸ್ತೆ, ಗಾಂಧಿನಗರ, ಬೆಳಿಗ್ಗೆ 5ರಿಂದ

15ರಿಂದ 18 ವರ್ಷದೊಳಗಿನ ಶಾಲಾ ವಿದ್ಯಾರ್ಥಿಗಳಿಗೆ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಚಾಲನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆಯೋಜನೆ-ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸ್ಥಳ-ಬಿಬಿಎಂಪಿ ಪ್ರೌಢಶಾಲೆ, ಪದವಿ ಪೂರ್ವ ಮತ್ತು ಸ್ನಾತಕೋತ್ತರ ಕಾಲೇಜು, ಭೈರವೇಶ್ವರ ನಗರ, ಮೂಡಲಪಾಳ್ಯ ವಾರ್ಡ್, ಬೆಳಿಗ್ಗೆ 9.30

ಎನ್.ಆರ್.ಕಾಲೊನಿ ಹೆರಿಗೆ ಆಸ್ಪತ್ರೆಗೆ ಅಳವಡಿಸಿರುವ ಸೌರಶಕ್ತಿ ವ್ಯವಸ್ಥೆ ಹಾಗೂ ವಾರ್ಡ್‌ನಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆಯ ಕಾರ್ಯಕ್ಕೆ ಚಾಲನೆ: ಸಂಸದ ತೇಜಸ್ವಿ ಸೂರ್ಯ, ಶಾಸಕ ಎಲ್.ಎ.ರವಿ ಸುಬ್ರಹ್ಮಣ್ಯ, ಸ್ಥಳ-ಹೆರಿಗೆ ಆಸ್ಪತ್ರೆ ಆವರಣ, ಎನ್.ಆರ್.ಕಾಲೊನಿ, ಬೆಳಿಗ್ಗೆ 9.30

ಬಿ.ಎಂ.ಶ್ರೀಕಂಠಯ್ಯ ಅವರ ಜನ್ಮದಿನ: ಬಿಎಂಶ್ರೀ ಪ್ರತಿಮೆಗೆ ಮಾಲಾರ್ಪಣೆ, ಅತಿಥಿ-ಮನು ಬಳಿಗಾರ್, ವ.ಚ.ಚನ್ನೇಗೌಡ, ಆಯೋಜನೆ-ಕರ್ನಾಟಕ ವಿಕಾಸ ರಂಗ, ಸ್ಥಳ-ನ್ಯಾಷನಲ್ ಕಾಲೇಜು ವೃತ್ತ, ಬಸವನಗುಡಿ, ಬೆಳಿಗ್ಗೆ 11

ಎಂ.ಸದಾಶಿವಪ್ಪ-75: ಉದ್ಘಾಟನೆ-ಗೊ.ರು.ಚನ್ನಬಸಪ್ಪ, ಗೌರವ ಸಮರ್ಪಣೆ-'ಮುಖ್ಯಮಂತ್ರಿ' ಚಂದ್ರು, ಅತಿಥಿಗಳು-ಎಸ್.ರಂಗಪ್ಪ, ಎಸ್. ಮಹದೇವಯ್ಯ, ಅಧ್ಯಕ್ಷತೆ-ಕೆ.ವಿ. ನಾಗರಾಜಮೂರ್ತಿ, ಸವಿತಕ್ಕ ಅಭಿನಯದ 'ಉಧೋ ಉಧೋ ಎಲ್ಲಮ್ಮ' ಏಕವ್ಯಕ್ತಿ ಪ್ರದರ್ಶನ, ಆಯೋಜನೆ-ಲಂಡನ್‌ನ ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ-ನಯನ ರಂಗಮಂದಿರ, ರವೀಂದ್ರ ಕಲಾಕ್ಷೇತ್ರ ಆವರಣ, ಸಂಜೆ 5

'ನಿರಂತರಂ'-ರಾಷ್ಟ್ರೀಯ ಸಂಗೀತ ಮತ್ತು ನೃತ್ಯೋತ್ಸವ ಹಾಗೂ 'ಸಂಭ್ರಮ ಪುರಸ್ಕಾರ' ಪ್ರಶಸ್ತಿ ಪ್ರದಾನ: ಅತಿಥಿಗಳು-ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಪ್ರತಿಭಾ ಪ್ರಹ್ಲಾದ್, ಗುರುವಂದನೆ-ನಾಗಮಣಿ ಶ್ರೀನಾಥ್, ಪುರಸ್ಕೃತರು-ಶ್ರೀಧರ ಹಯಗ್ರೀವ ಭಟ್ಟರ್, ಎಂ.ಎಸ್.ಶ್ರೀರಾಮುಲು, ಎಚ್.ಎಸ್. ವೇಣುಗೋಪಾಲ್, ಜೆ.ಕೆ.ಶ್ರೀಧರ್, ರೇವತಿ ಕಾಮತ್, ಬಿ.ಓಂಕಾರಮೂರ್ತಿ, ಶ್ರೀಧರ್, ಆಯೋಜನೆ-ಸಂಗೀತ ಸಂಭ್ರಮ, ಸ್ಥಳ-ಸೇವಾಸದನ, ಮಲ್ಲೇಶ್ವರ, ಸಂಜೆ 5

'ಫರೋಸ್ ಇನ್ ಎ ಫೀಲ್ಡ್' ಪುಸ್ತಕ ಬಿಡುಗಡೆ: ಅತಿಥಿ-ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ, ಆಯೋಜನೆ ಮತ್ತು ಸ್ಥಳ-ಬುಕ್‌ವರ್ಮ್, ಚರ್ಚ್‌ಸ್ಟ್ರೀಟ್, ಸಂಜೆ 6

ಏಕವ್ಯಕ್ತಿ ನಾಟಕಕ್ಕೆ ಚಾಲನೆ: ನಾಟಕ-'ಚಿಟ್ಟೆ', ರಚನೆ-ಬೇಲೂರು ರಘುನಂದನ್, ನಿರ್ದೇಶನ-ಕೃಷ್ಣಮೂರ್ತಿ ಕವತ್ತಾರ್, ರಂಗಗೀತೆಗಳು-ರಾಜ್‌ಗುರು ಮತ್ತು ತಂಡ, ಅತಿಥಿಗಳು-ವಿಜಯ, ಕವಿತಾ ಲಂಕೇಶ್, ಗೀತಮ್ಮ ನಾಯಕ್, ಎ.ಸೌಮ್ಯ, ಅಕ್ಕೈ ಪದ್ಮಶಾಲಿ, ನಯನಾ ಸೂಡ, ಆಯೋಜನೆ-ಕಾಜಾಣ ಮತ್ತು ರಂಗಪಯಣ, ಸ್ಥಳ-ರವೀಂದ್ರ ಕಲಾಕ್ಷೇತ್ರ, ಸಂಜೆ 6



'ಚಿಟ್ಟೆ' ನಾಟಕ

'ಪಾದಯಾತ್ರೆ: ರಾಜಕೀಯ ಇಲ್ಲ'



ನೆಲಮಂಗಲ: 'ವೇಗವಾಗಿ ಬೆಳೆಯುತ್ತಿರುವ ಬೆಂಗಳೂರಿನ ಜನಸಂಖ್ಯೆಗೆ ಅನುಗುಣವಾಗಿ ನೀರಿನ ಅವಶ್ಯಕತೆ ನೀಗಿಸಲು ಮೇಕೆದಾಟು ಯೋಜನೆ ಅವಶ್ಯಕವಾಗಿ-ದೆ. ಆದ್ದರಿಂದ, ಪಕ್ಷಾತೀತವಾಗಿ ಜನರು ಬೆಂಬಲಿಸಬೇಕು' ಎಂದು ಮಾಜಿ ಸಚಿವ ಆಂಜನಮೂರ್ತಿ ಕೋರಿದರು.

'ಪಾದಯಾತ್ರೆಗೆ ಬರುವವರಿಗೆ ನೆಲಮಂಗಲದಿಂದ ಬಸ್ ವ್ಯವಸ್ಥೆ ಮಾಡಲಾಗಿದೆ. ನೆಲಮಂಗಲದಿಂದ 5ಸಾವಿರ ಜನ ಪಾದಯಾತ್ರೆಯಲ್ಲಿ ಭಾಗವಹಿಸುವ ನಿರೀಕ್ಷೆ ಇದೆ. ಇದರಲ್ಲಿ ಯಾವುದೇ ರಾಜಕೀಯ ಹಿತಾಸಕ್ತಿ ಇಲ್ಲ. ನಮ್ಮ ನೀರಿಗಾಗಿ ನಾವು ಹೋರಾಟ ನಡೆಸುವ ಪರಿಸ್ಥಿತಿ ಎದುರಾಗಿದೆ' ಎಂದರು.

ದೋಷಪೂರಿತ ನೋಂದಣಿ ಫಲಕ: 4.1 ಲಕ್ಷ ವಾಹನಗಳ ವಿರುದ್ಧ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ದೋಷಪೂರಿತ ನೋಂದಣಿ ಫಲಕಗಳನ್ನು ಹೊಂದಿದ್ದ ಒಟ್ಟು 4.1 ಲಕ್ಷ ವಾಹನಗಳ ವಿರುದ್ಧ ಸಾರಿಗೆ ಇಲಾಖೆ ಅಧಿಕಾರಿಗಳು ಪ್ರಕರಣ ದಾಖಲಿಸಿದ್ದಾರೆ.

'2020ರಲ್ಲಿ ಒಟ್ಟು 2.5 ಲಕ್ಷ ವಾಹನಗಳ ವಿರುದ್ಧ ಪ್ರಕರಣ ದಾಖ-ಲಿಸಲಾಗಿತ್ತು. 2021ರ ನವೆಂಬರ್ ವೇಳೆಗೆ ಈ ಸಂಖ್ಯೆ 4.1 ಲಕ್ಷಕ್ಕೆ ಹೆಚ್ಚಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗರಿಷ್ಠ ಭದ್ರತೆಯ ನೋಂದಣಿ ಫಲಕ (ಎಚ್‌ಎಸ್‌ಆರ್‌ಪಿ) ಅಳವಡಿಸಿಲ್ಲ ಎಂಬ ಕಾರಣ ನೀಡಿ ಸಂಚಾರ ಪೊಲೀಸರು ಕಂಡ ಕಂಡಲ್ಲಿ ವಾಹನಗಳನ್ನು ತಡೆದು ದಂಡ ವಿಧಿಸುತ್ತಿದ್ದಾರೆ ಎಂದು ವಾಹನ ಸವಾರರು ದೂರಿದ್ದಾರೆ. ಪೊಲೀಸರ ಕ್ರಮದ ವಿರುದ್ಧ ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತಪಡಿ-ಸಿದ್ದಾರೆ.

'2019ರ ಏಪ್ರಿಲ್ ನಂತರ ನೋಂದಣಿಯಾಗಿರುವ ವಾಹನಗಳಿ-ಗಷ್ಟೇ ಎಚ್‌ಎಸ್‌ಆರ್‌ಪಿ ಕಡ್ಡಾಯಗೊ-ಳಿಸಲಾಗಿದೆ. ಅದಕ್ಕಿಂತಲೂ ಹಳೆಯದಾದ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಕಡ್ಡಾಯಗೊಳಿಸಿಲ್ಲ. ಈ ಬಗ್ಗೆ ಶೀಘ್ರವೇ ಮಾರ್ಗಸೂಚಿ ಬಿಡುಗಡೆ ಮಾಡಲಾಗುತ್ತದೆ' ಎಂದು ಅಧಿಕಾರಿ-ಯೊಬ್ಬರು ಹೇಳಿದ್ದಾರೆ.

ಪೊಲೀಸರ ಸೋಗಿನಲ್ಲಿ ಕಳವು

ಬೆಂಗಳೂರು: ಪೊಲೀಸರ ಸೋಗಿನಲ್ಲಿ ಸಿವಿಲ್ ಎಂಜಿನಿಯರ್ ಮನೆಗೆ ನುಗ್ಗಿ ₹19 ಲಕ್ಷ ನಗದು ಹಾಗೂ 500 ಗ್ರಾಂ ಚಿನ್ನದ ಆಭರಣ ಲಪಟಾಯಿಸಿದ್ದ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಮಹಾಲಕ್ಷ್ಮಿ ಲೇಔಟ್ ಠಾಣೆ ಪೊಲೀಸರು, ದುಷ್ಕರ್ಮಿಗಳ ಪತ್ತೆಗೆ ಮೂರು ವಿಶೇಷ ತಂಡಗಳನ್ನು ರಚಿಸಿದ್ದಾರೆ. 'ದೂರು ದಾಖಲಾದ ಬೆನ್ನಲ್ಲೇ ಆರೋಪಿಗಳ ಪತ್ತೆಗಾಗಿ ಮೂರು ವಿಶೇಷ ತಂಡಗಳನ್ನು ರಚಿಸಲಾಗಿದೆ. ಘಟನಾ ಸ್ಥಳದ ಸುತ್ತಲಿನ ಪ್ರದೇಶಗಳ-ಲ್ಲಿನ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿರುವ ದೃಶ್ಯಾವಳಿಗಳನ್ನು ಪರಿಶೀ-ಲಿಸಲಾಗಿದೆ. ಆರೋಪಿಗಳ ಕುರಿತು ಕೆಲ ಸುಳಿವುಗಳು ದೊರೆತಿವೆ. ಅದರ ಆಧಾರದಲ್ಲಿ ಒಂದು ತಂಡ ನಗರದ ವಿವಿಧೆಡೆ ಶೋಧ ಕಾರ್ಯ ನಡೆಸುತ್ತಿದೆ. ಮತ್ತೆರಡು ತಂಡಗಳನ್ನು ಹೊರ ಜಿಲ್ಲೆಗಳಿಗೆ ರವಾನಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಚಿತ್ರಾವಳಿ



ಬಿಜೆಪಿ ವತಿಯಿಂದ ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯ ಕೆರೆ ಗುಡ್ಡಹಳ್ಳಿ ಗಂಗಾಧರಯ್ಯ ಕಲ್ಯಾಣ ಮಂಟಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡ ಎಸ್‌.ಮುನಿರಾಜು ಅವರು ಬಡವರಿಗೆ ಹೊಲಿಗೆ ಯಂತ್ರ ವಿತರಿಸಿದರು. ಬಿಜೆಪಿ ಮಂಡಲದ ಅಧ್ಯಕ್ಷ ಎನ್‌.ಲೋಕೇಶ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಮರಿಸ್ವಾಮಿ ಚಿತ್ರದಲ್ಲಿದ್ದಾರೆ



ಯಲಹಂಕ ಉಪನಗರ ಹಿರಿಯ ನಾಗರಿಕರ ವೇದಿಕೆ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು. ನಗರಸಭೆ ಮಾಜಿ ಸದಸ್ಯೆ ಅನ್ನಪೂರ್ಣ ಪಿ.ನಾಗಪ್ಪ, ವೇದಿಕೆಯ ಸದಸ್ಯ ನಾರಾಯಣಗೌಡ, ಸಂಘಟನಾ ಕಾರ್ಯದರ್ಶಿ ನಾಗಪ್ಪ ಇದ್ದರು.



ರೌಡಿಶೀಟರ್‌ಗಳಿಗೆ ಪೊಲೀಸರು ಗಿಡಗಳನ್ನು ವಿತರಿಸಿದರು

ರೌಡಿಶೀಟರ್‌ಗಳಿಂದ ಗಿಡ ನೆಡಿಸಿದ ಪೊಲೀಸರು

ಬೆಂಗಳೂರು: ಬಂಡೆಪಾಳ್ಯ ಠಾಣೆಯ ಪೊಲೀಸರು ರೌಡಿಶೀಟರ್‌ಗಳಿಂದಲೇ ಗಿಡಗಳನ್ನು ನೆಡಿಸಿ ಹೊಸ ವರ್ಷವನ್ನು ವಿಭಿನ್ನವಾಗಿ ಬರಮಾಡಿಕೊಂಡಿದ್ದಾರೆ.

ಗಿಡ ನೆಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ 23 ರೌಡಿಗಳು, ಇನ್ನು ಮುಂದೆ ಅಪರಾಧ ಕೃತ್ಯಗಳಲ್ಲಿ ಭಾಗಿ-ಯಾಗುವುದಿಲ್ಲ ಎಂಬ ಪ್ರತಿಜ್ಞೆಯನ್ನೂ ಕೈಗೊಂಡಿದ್ದಾರೆ.

ಸೋಮಸುಂದರಪಾಳ್ಯದ ಕೆರೆ ಏರಿ ಪಕ್ಕದಲ್ಲಿದ್ದ ಖಾಲಿ ಜಾಗದಲ್ಲಿ ಬಾದಾಮಿ, ಹೊಂಗೆ, ಮಾವು, ಬೇವು ಸೇರಿದಂತೆ ವಿವಿಧ ಬಗೆಯ ಸಸಿಗಳನ್ನು ನೆಡಲಾಗಿದ್ದು, ರೌಡಿಗಳಿಗೆ ಅವುಗಳ ಪೋಷಣೆಯ ಹೊಣೆ ವಹಿಸಲಾಗಿದೆ.

'ರೌಡಿಗಳನ್ನು ಠಾಣೆಗೆ ಕರೆದು ವಿಚಾರಣೆ ನಡೆಸುವುದು, ಪ್ರಕರಣ ದಾಖಲಿಸುವುದು, ಶಿಕ್ಷೆ ಕೊಡಿಸುವುದು ಸಾಮಾನ್ಯ. ಅದು ವರ್ಷಪೂರ್ತಿ ನಡೆಯುತ್ತಲೇ ಇರುತ್ತದೆ. ಸಸಿಗಳನ್ನು ನೆಡಿಸಿದರೆ ಮನಃ ಪರಿವರ್ತನೆಗೂ ದಾರಿ ಮಾಡಿಕೊಟ್ಟಂತಾಗುತ್ತದೆ ಎಂಬ ಆಲೋಚನೆ ಹೊಳೆದಿದ್ದರಿಂದ ಈ ಕಾರ್ಯಕ್ರಮ ಕೈಗೊಂಡಿದ್ದೆವು' ಎಂದು ಇನ್‌ಸ್ಪೆಕ್ಟರ್ ಎಲ್.ವೈ.ರಾಜೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಪುನೀತ್ ರಾಜ್‌ಕುಮಾರ್, ಆರ್.ಎಲ್. ಜಾಲಪ್ಪ ಅವರಿಗೆ ನುಡಿನಮನ

ಈಡಿಗ ಸಮಾಜ ಒಗ್ಗೂಡಿಸಲು ಸಲಹೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ವಿವಿಧ ಪಂಗಡಗಳ ಹೆಸರಿನಲ್ಲಿ ಹಂಚಿ ಹೋಗಿರುವ ಈಡಿಗ ಸಮಾಜವನ್ನು ಒಂದೇ ಸೂರಿನಡಿ ತಂದು ಸಮಾಜದ ಅಭಿವೃದ್ಧಿಗೆ ಮುಂದಾಗಬೇಕು' ಎಂದು ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷ ಡಾ.ಎಂ.ತಿಮ್ಮೇಗೌಡ ಸಲಹೆ ನೀಡಿದರು.

ಬೆಂಗಳೂರು ದಕ್ಷಿಣ ತಾಲ್ಲೂಕು ಆರ್ಯ ಈಡಿಗರ ಸಂಘದ ವತಿಯಿಂದ ಪುಷ್ಪಗಿರಿನಗರದಲ್ಲಿ ದಿವಂಗತ ಪುನೀತ್ ರಾಜ್‌ಕುಮಾರ್ ಮತ್ತು ದಿವಂಗತ ಆರ್. ಎಲ್. ಜಾಲಪ್ಪ ಅವರಿಗೆ ಹಮ್ಮಿಕೊಂಡಿದ್ದ ನುಡಿ ನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಮಕ್ಕಳಿಗೆ ಉನ್ನತ ಶಿಕ್ಷಣ ದೊರಕಿಸಿಕೊಡುವ ಮೂಲಕ ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಅಭಿವೃದ್ಧಿ ಸಾಧಿಸಬೇಕು' ಎಂದು ಸಲಹೆ ನೀಡಿದರು.

'ರಾಜ್ಯದಲ್ಲಿ ಈಡಿಗ ಜನಾಂಗ ನಾಲ್ಕನೇ ಸ್ಥಾನದಲ್ಲಿದೆ. 80 ಲಕ್ಷ ಜನಸಂಖ್ಯೆ ಹೊಂದಿದ್ದರೂ ಸರ್ಕಾರದಿಂದ ಸೌಲಭ್ಯಗಳು ಸಮರ್ಪಕವಾಗಿ ದೊರೆಯುತ್ತಿಲ್ಲ. ಈ ಬಗ್ಗೆ ಜನಪ್ರತಿನಿಧಿಗಳು ಮತ್ತು ಸಮಾಜದ ಮುಖಂಡರು ಧ್ವನಿ ಎತ್ತಬೇಕು. ರಾಜ್ಯ ಈಡಿಗ ಸಂಘಕ್ಕೆ 75ವರ್ಷ ತುಂಬಿದ್ದು, ಫೆಬ್ರುವರಿಯಲ್ಲಿ ಸಮಾಜದ ನೂತನ ಶ್ರೀಗಳ ಪಟ್ಟಾಭಿ-ಷೇಕಕ್ಕೆ ಐದು ಲಕ್ಷ ಜನರನ್ನು ಸೇರಿಸಿ ಜನಾಂಗದ ಸಮಾವೇಶ ಹಮ್ಮಿಕೊಳ್ಳ-ಲಾಗುವುದು' ಎಂದು ತಿಳಿಸಿದರು.

ಪ್ರದೇಶ ಆರ್ಯ ಈಡಿಗರ ಸಂಘದ ನಿರ್ದೇಶಕ ಆರ್.ಪಿ. ಪ್ರಕಾಶ್ ಮಾತನಾಡಿ, 'ಚಿಕ್ಕವಯಸ್ಸಿನಲ್ಲಿ-ಯೇ ನಟ ಪುನೀತ್‌ರಾಜ್‌ಕುಮಾರ್ ಅವರು ಅದ್ಭುತ ಸಾಧನೆ ಮಾಡಿ ಖ್ಯಾತಿ ಗಳಿಸಿದ್ದರು. ಆರ್.ಎಲ್. ಜಾಲಪ್ಪ ಅವರು, ಶಿಕ್ಷಣ, ಅರೋಗ್ಯ, ಸಹಕಾರ, ರಾಜಕೀಯ ರಂಗದಲ್ಲಿ ಸಮಾಜಕ್ಕೆ ಅಪಾರವಾದ ಕೊಡುಗೆ ನೀಡಿದ್ದರು' ಎಂದು ಸ್ಮರಿಸಿದರು.

ಚಿತ್ರ ನಿರ್ಮಾಪಕ ಕೆ.ಎಸ್. ದುಶ್ಯಂತ್ ಮಾತನಾಡಿ, 'ಪುನೀತ್ ಅವರು ಎಲ್ಲ ವರ್ಗಗಳ ವಿಶ್ವಾಸ, ಪ್ರೀತಿ ಗಳಿಸಿ ಸಮಾಜಮುಖಿ ಸೇವೆ ಮಾಡಿದ್ದರು. ಜಾಲಪ್ಪ ಅವರು ಸೋಲೂರಿನಲ್ಲಿ ಜಾಲಪ್ಪ ಅಕಾಡೆಮಿ ಪ್ರಾರಂಭಿಸಿ, ನೂರಾರು ಜನರು ಉದ್ಯೋಗ ಪಡೆದುಕೊಳ್ಳಲು ನೆರವಾಗಿದ್ದರು' ಎಂದು ನೆನಪಿಸಿಕೊಂಡರು.

ಚಿತ್ರ ನಿರ್ಮಾಪಕ ಎಸ್.ಎ. ಚಿನ್ನೇಗೌಡ, ರಾಜ್ಯ ಸಂಘದ ಜಂಟಿ ಕಾರ್ಯದರ್ಶಿ ಜಿ.ವೈ.ಕೃಷ್ಣ, ರಾಜ್ಯ ಸಂಘದ ಪದಾಧಿಕಾರಿಗ-ಳಾದ ಕುಸುಮ ಅಜಯ್‌ಕುಮಾರ್, ಟಿ.ವಾಸನ್, ಗೋವಿಂದಬಾಬು ಪೂಜಾರಿ, ಕಾಳೇಗೌಡ, ಬೆಂಗಳೂರು ದಕ್ಷಿಣ ತಾಲ್ಲೂಕು ಈಡಿಗರ ಸಂಘದ ಅಧ್ಯಕ್ಷ ಪ್ರಕಾಶ್, ಆರ್.ಆರ್. ನಗರ ಸಂಘದ ಅಧ್ಯಕ್ಷ ರಾಮರಾಜು, ಕೆಂಗೇರಿ ಹೋಬಳಿ ಅಧ್ಯಕ್ಷ ಕೆ.ಮುತ್ತುರಾಜು, ವೆಂಕಟಾಚಲಯ್ಯ ಅವರು ಇದ್ದರು.

ಉಚಿತ ನೇತ್ರ ತಪಾಸಣೆಯಲ್ಲಿ 85 ಜನ ಚಿಕಿತ್ಸೆ ಪಡೆದುಕೊಂಡರು. 25 ಜನ ರಕ್ತದಾನ ಮಾಡಿದರು.

35 ಮಂದಿ ನೇತ್ರದಾನ ಮಾಡಲು ಹೆಸರು ನೊಂದಾಯಿಸಿಕೊಂಡರು.



ನಗರದ ಪುಷ್ಪಗಿರಿನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ನುಡಿ ನಮನ' ಕಾರ್ಯಕ್ರಮವನ್ನು ಚಿತ್ರ ನಿರ್ಮಾಪಕ ಎಸ್‌.ಎ. ಚಿನ್ನೇಗೌಡ ಉದ್ಘಾಟಿಸಿದರು. ಆರ್ಯ ಈಡಿಗರ ಸಂಘದ ಅಧ್ಯಕ್ಷ ಡಾ. ಎಂ.ತಿಮ್ಮೇಗೌಡ, ಸಂಘದ ನಿರ್ದೇಶಕ ಆರ್‌.ಪಿ.ಪ್ರಕಾಶ್, ಕೆ.ಮುತ್ತುರಾಜು, ಜಿ.ವೈ.ಕೃಷ್ಣ, ಟಿ.ವಾಸನ್, ದಕ್ಷಿಣ ತಾಲ್ಲೂಕು ಈಡಿಗರ ಸಂಘದ ಅಧ್ಯಕ್ಷ ಪ್ರಕಾಶ್, ಚಿತ್ರ ನಿರ್ಮಾಪಕ ಕೆ.ಎಸ್. ದುಶ್ಯಂತ್ ಇದ್ದರು

ಮಹದೇವಪುರ ಕ್ಷೇತ್ರದ ರಸ್ತೆ • ಚರ್ಚೆಗೆ ಗ್ರಾಸವಾದ ಸರ್ಕಾರದ ಆದೇಶ

ಅಭಿವೃದ್ಧಿಗೆ 'ಶುಭ್ರ ಬೆಂಗಳೂರು' ಹಣ!

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹೈಕೋರ್ಟ್‌ನಿಂದ ಬಿಬಿಎಂಪಿ ಸೂಪರ್‌ಸೀಡ್ ಮಾಡುವ ಎಚ್ಚರಿಕೆ
- ಕಸ ಸಮಸ್ಯೆ ಇತ್ಯರ್ಥಕ್ಕೆ 'ಶುಭ್ರ ಬೆಂಗಳೂರು' ಅಡಿ ₹999 ಕೋಟಿ
- ರಸ್ತೆಗಳ ಅಭಿವೃದ್ಧಿಗೆ ₹19 ಕೋಟಿ ಬಳಕೆಗೆ ತೀರ್ಮಾನ

ಬೆಂಗಳೂರು: ನಗರದ ಕಸ ವಿಲೇವಾರಿ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಪ್ರಕಟಿಸಿದ್ದ 'ಶುಭ್ರ ಬೆಂಗಳೂರು' ಯೋಜನೆಯ ₹19 ಕೋಟಿ ಮೊತ್ತವನ್ನು ಮಹದೇವಪುರ ಕ್ಷೇತ್ರದ ರಸ್ತೆಗಳ ಅಭಿವೃದ್ಧಿಗೆ ಬಳಕೆ ಮಾಡಲು ತೀರ್ಮಾನಿಸಲಾಗಿದೆ. ಇದಕ್ಕೆ ಅಧಿಕಾರಿಗಳ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿದೆ.

ಮಿಟ್ಟಗಾನಹಳ್ಳಿ ಹಾಗೂ ಕಣ್ಣೂರಿನ ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳ ಅಭಿವೃದ್ಧಿಗೆ ಈ ಮೊತ್ತ ವಿನಿಯೋಗಿಸಲು ನಗರಾಭಿವೃದ್ಧಿ ಇಲಾಖೆ ಒಪ್ಪಿಗೆ ನೀಡಿದೆ. ಒಟ್ಟು 17 ಕಡೆ ಕಾಮಗಾರಿಗಳನ್ನು ನಡೆಸಲಾಗುತ್ತಿದ್ದು, ಇದಕ್ಕಾಗಿ ಬಿಬಿಎಂಪಿ ಅಲ್ಪಾವಧಿ ಟೆಂಡರ್ ಕರೆದಿದೆ.

ನಗರದ ಅಭಿವೃದ್ಧಿ ಕಾಮಗಾರಿಗಳಿಗಾಗಿ ರಾಜ್ಯ ಸರ್ಕಾರವು 2019ನೇ ಸಾಲಿನಲ್ಲಿ ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆ ಪ್ರಕಟಿಸಿ, ₹8,015 ಕೋಟಿ ಅನುದಾನ ಒದಗಿಸಿತು. ಈ ಕ್ರಿಯಾಯೋಜನೆಯಲ್ಲಿ ಕಸ ನಿರ್ವಹಣೆಗೆ ₹584.35 ಕೋಟಿ ಮೀಸಲಿಡಲಾಯಿತು. ಇದರಲ್ಲಿ ಕಸ ವಿಲೇವಾರಿ ಸ್ಥಳಗಳ ಪ್ರದೇಶಾಭಿವೃದ್ಧಿ ಕಾಮಗಾರಿಗೆ ₹528.85 ಕೋಟಿ ಹಂಚಿಕೆ ಮಾಡಲಾಯಿತು. ಹೀಗಾಗಿ, ಕಸ ವಿಲೇವಾರಿ ಕಾಮಗಾರಿಗಳಿಗೆ ₹55.50 ಕೋಟಿಯಷ್ಟೇ ಉಳಿಯಿತು.

ಈ ನಡುವೆ, ನಗರದಲ್ಲಿ ಉತ್ಪತ್ತಿಯಾಗುತ್ತಿರುವ ಕಸವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಪಾಲಿಕೆ ವಿಫಲವಾಗಿದ್ದು, ಪಾಲಿಕೆ ಆಡಳಿತವನ್ನು ಸೂಪರ್‌ಸೀಡ್ ಮಾಡಲು ತಿಂಗಳಲ್ಲಿ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ 2019ರಲ್ಲಿ ನಿರ್ದೇಶನ ನೀಡಿತು. ಇದರ ಬೆನ್ನಲ್ಲೇ, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಕಸ ಸಮಸ್ಯೆ ನಿವಾರಿಸಲು ಶಾಶ್ವತ ಕ್ರಮಗಳನ್ನು ಕೈಗೊಳ್ಳುವುದಾಗಿ ಹೈಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದರು. ಬಳಿಕ ಪಾಲಿಕೆಯ ಆಯುಕ್ತರು ಕಸ ವಿಲೇವಾರಿ ಕಾಮಗಾರಿಗಳ ಪ್ರಸ್ತಾವನೆ ಸಲ್ಲಿಸಿದರು. ಅದರ ಬೆನ್ನಲ್ಲೇ, ₹999 ಕೋಟಿ ಮೊತ್ತದ 'ಶುಭ್ರ ಬೆಂಗಳೂರು' ಯೋಜನೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿತು. ಕಸ ಸಂಸ್ಕರಣಾ ಘಟಕಗಳು, ಭೂಭರ್ತಿ ಘಟಕಗಳು ಹಾಗೂ ಕಸ ಎಲ್ಲೆಂದರಲ್ಲಿ ಎಸೆಯುವುದನ್ನು ತಡೆಯಲು ಮಾರ್ಷಲ್‌ಗಳ ನೇಮಕ ಮತ್ತು ಕಸ ವಿಲೇವಾರಿ ಮೇಲೆ ನಿಗಾ ಇರಿಸಲು ಯಂತ್ರಗಳ ಖರೀದಿಯೂ (₹19 ಕೋಟಿ) ಇದರಲ್ಲಿ ಸೇರಿದೆ. ಹೈಕೋರ್ಟ್‌ಗೆ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ ಹೇಳಿರುವ ಕಾಮಗಾರಿಗಳಿಗೆ ಅಗತ್ಯ ಅನುದಾನವನ್ನು ನೀಡಲಾಗಿದ್ದು, ಪಾಲಿಕೆಯು ಆದ್ಯತೆ ಮೇರೆಗೆ ಈ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಅನುಪಾಲನಾ ವರದಿಯನ್ನು ಸಲ್ಲಿಸಬೇಕು ಎಂದು ರಾಜ್ಯ ಸರ್ಕಾರ ಸೂಚನೆ ನೀಡಿತು.

ಶಾಸಕರಿಂದ ₹150 ಕೋಟಿ ಅನುದಾನ ಬೇಡಿಕೆ: ಮಿಟ್ಟಹಾನಹಳ್ಳಿ ಭೂಭರ್ತಿ ಘಟಕ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ₹150 ಕೋಟಿ ಅನುದಾನ ನೀಡುವಂತೆ ಮಹದೇವಪುರ ಶಾಸಕ ಅರವಿಂದ ಲಿಂಬಾವಳಿ ಅವರು 2021ರ ಆಗಸ್ಟ್‌ನಲ್ಲಿ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು. 'ಮಾರ್ಷಲ್‌ಗಳ ನೇಮಕವು ನಿರ್ವಹಣೆ ಕಾಮಗಾರಿಯಾಗಿದ್ದು, ಅದನ್ನು ಪಾಲಿಕೆಯ ಅನುದಾನದಲ್ಲಿ ಈಗಾಗಲೇ ಕೈಗೆತ್ತಿಕೊಳ್ಳಲಾಗಿದೆ. ಹೀಗಾಗಿ, ₹19 ಕೋಟಿ ಅನುದಾನವನ್ನು ಮಿಟ್ಟಗಾನಹಳ್ಳಿ ಹಾಗೂ ಕಣ್ಣೂರಿನ ಸುತ್ತಮುತ್ತಲ ಪ್ರದೇಶಗಳ ಅಭಿವೃದ್ಧಿಗೆ ಒದಗಿಸಬೇಕು' ಎಂದು ಪಾಲಿಕೆಯು ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿತು. ಇದಕ್ಕೆ ನಗರಾಭಿವೃದ್ಧಿ ಇಲಾಖೆ ಒಪ್ಪಿಗೆ ಸೂಚಿಸಿದೆ.

'ಹೈಕೋರ್ಟ್ ಎಚ್ಚರಿಕೆಗೆ ಮಣಿದು ಶುಭ್ರ ಬೆಂಗಳೂರು ಯೋಜನೆ ಪ್ರಕಟಿಸಲಾಯಿತು. ನಗರದಲ್ಲಿ ಈಗಲೂ ಕಸ ವಿಲೇವಾರಿ ಸಮಸ್ಯೆ ಇದೆ. ಆ ಯೋಜನೆಯ ಹಣವನ್ನು ಕಸ ವಿಲೇವಾರಿಗೇ ಬಳಸಬೇಕಿತ್ತು. ಜನಪ್ರತಿನಿಧಿಗಳ ಒತ್ತಡದಿಂದ ಅದನ್ನು ರಸ್ತೆಗಳ ಅಭಿವೃದ್ಧಿಗೆ ಬಳಸುತ್ತಿರುವುದು ಸರಿಯಲ್ಲ' ಎಂದು ಪಾಲಿಕೆಯ ಹಿರಿಯ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

ಆಟೊಪೈಲಟ್ ತಂಡದಲ್ಲಿ ಭಾರತೀಯ

ಹ್ಯೂಸ್ಟನ್ (ಪಿಟಿಐ): ಕಂಪನಿಯ ಆಟೊಪೈಲಟ್ ತಂಡದ ಮೊದಲ ಉದ್ಯೋಗಿಯಾಗಿ ಭಾರತ ಮೂಲದ ಅಶೋಕ್ ಎಲ್ಲುಸ್ವಾಮಿ ಆಯ್ಕೆಯಾಗಿದ್ದಾರೆ ಎಂದು ಟೆಸ್ಲಾ ಕಂಪನಿಯ ಸ್ಥಾಪಕ ಮತ್ತು ಸಿಇಒ ಎಲಾನ್ ಮಸ್ಕ್ ಹೇಳಿದ್ದಾರೆ.

ಆಟೊಪೈಲಟ್ ತಂಡಕ್ಕೆ ನೇಮಕಾತಿಗೆ ಮಸ್ಕ್ ಅವರು ಸಾಮಾಜಿಕ ಮಾಧ್ಯಮಗಳ ಮೂಲಕ ಸಂದರ್ಶನ ನಡೆಸಿದ್ದರು. ಎಲ್ಲುಸ್ವಾಮಿ ಅವರ ಸಂದರ್ಶನಕ್ಕೆ ಸಂಬಂಧಿಸಿದ ವಿಡಿಯೊವೊಂದನ್ನು ಅವರು ಟ್ವೀಟ್ ಮಾಡಿದ್ದಾರೆ. 'ಟ್ವೀಟ್ ಮೂಲಕ ನೇಮಕ ಮಾಡಿಕೊಂಡಿರುವ ಮೊದಲ ವ್ಯಕ್ತಿ ಅಶೋಕ್' ಎಂದು ಈ ವಿಡಿಯೊದಲ್ಲಿ ಹೇಳಿದ್ದಾರೆ. ಇದಕ್ಕೂ ಮುನ್ನ ಅಶೋಕ್ ಅವರು ಫೋಕ್ಸ್‌ವ್ಯಾಗನ್ ಎಲೆಕ್ಟ್ರಾನಿಕ್ಸ್ ರಿಸರ್ಚ್ ಲ್ಯಾಬ್, ವ್ಯಾಬ್‌ಕೊ ವೆಹಿಕಲ್ ಕಂಟ್ರೋಲ್ ಸಿಸ್ಟಮ್ ಕಂಪನಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು.

ಕುಸಿದ ಬೇಡಿಕೆ; ಹೊರ ರಾಜ್ಯಗಳಿಂದಲೂ ಪೂರೈಕೆ

ಬಾಳೆಹಣ್ಣು ಬೆಲೆ ಕೇವಲ ₹30

• ಜಾಹ್ನವಿ ಆರ್

ಬೆಂಗಳೂರು: ಬೇಡಿಕೆ ಕುಸಿದ ಕಾರಣ ಕಳೆದ ಎರಡು ವರ್ಷಗಳ ಅವಧಿಯಲ್ಲಿಯೇ ದಾಖಲೆಯ ಮಟ್ಟದಲ್ಲಿ ಬಾಳೆಹಣ್ಣಿನ ಬೆಲೆ ನೆಲಕಚ್ಚಿದೆ. ಅಲ್ಲದೆ, ನಿರಂತರ ಮಳೆಯಿಂದಾಗಿ ಹಣ್ಣಿನ ಗುಣಮಟ್ಟದ ಮೇಲೂ ಪರಿಣಾಮ ಬೀರಿದೆ.

ಮೈಸೂರು, ಮಂಡ್ಯ, ಚಾಮರಾಜನಗರ, ಕೊಳ್ಳೆಗಾಲ, ಗೌರಿಬಿದನೂರು ಮತ್ತಿತರ ಭಾಗಗಳಿಂದ ಪ್ರತಿದಿನ 600ರಿಂದ 650 ಟನ್ ಬಾಳೆ ಹಣ್ಣು ಪೂರೈಕೆ ಆಗುತ್ತಿದೆ. ಕೆಲವು ವಿಧದ ಬಾಳೆಹಣ್ಣುಗಳು ನೆರೆಯ ತಮಿಳುನಾಡು ಮತ್ತು ಆಂಧ್ರ ಪ್ರದೇಶದಿಂದಲೂ ಸರಬರಾಜು ಆಗುತ್ತಿವೆ. ಬಿನ್ನಿ ಮಿಲ್ ಬಾಳೆಹಣ್ಣು ಮಾರುಕಟ್ಟೆಗೆ ಪ್ರತಿದಿನ ಸುಮಾರು 250 ಟನ್ ಪೂರೈಕೆಯಾಗುತ್ತಿದೆ.

'ಏಲಕ್ಕಿ ಬಾಳೆಹಣ್ಣಿಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇದೆ. ಆದರೆ, ಈ ಬಾರಿ ವರಮಹಾಲಕ್ಷ್ಮಿ ಹಬ್ಬದ ಸಂದರ್ಭದ ಹೊರತುಪಡಿಸಿದರೆ ಉಳಿದ ದಿನಗಳಲ್ಲಿ ಈ ಹಣ್ಣಿನ ದರ ₹ 30 ದಾಟಿಲ್ಲ' ಎಂದು ಬಾಳೆಹಣ್ಣು



ಮಾರಾಟಗಾರರ ಸಂಘದ ಅಧ್ಯಕ್ಷ ಕೆ. ಜಿ. ಪುರುಷೋತ್ತಮ ತಿಳಿಸಿದರು.

'1976ರಿಂದಲೂ ಬಾಳೆಹಣ್ಣು ವ್ಯಾಪಾರ ನೋಡಿಕೊಂಡು ಬಂದಿದ್ದೇನೆ. ಅಂದಿನ ಬೆಲೆಗೆ ಈಗಿನ ಬೆಲೆಯನ್ನು ಹೋಲಿಸಿ ನೋಡಲು ಸಾಧ್ಯ ಇಲ್ಲ. ಸದ್ಯ ಸಗಟು ಮಾರುಕಟ್ಟೆಯಲ್ಲಿ ಪಚ್ಚ ಬಾಳೆಹಣ್ಣು ಕಿಲೋಗೆ ₹ 20ರಂತೆ ಮಾರಾಟ ಆಗುತ್ತಿತ್ತು. ಈಗ ₹ 8ರಿಂದ 12ಕ್ಕೆ ಇಳಿದಿದೆ. ಏಲಕ್ಕಿ ಬಾಳೆಹಣ್ಣಿನ ದರ ₹ 45-50ರಿಂದ ₹ 25-30ರ ಮಧ್ಯೆ ಇದೆ. ನೇಂದ್ರ ಬಾಳೆಹಣ್ಣಿಗೆ ಕಿಲೋಗೆ ₹ 30ರಿಂದ ₹ 40ರ ಮಧ್ಯೆ ಬೆಲೆ ಇದೆ. ಇಷ್ಟೊಂದು ದರ ಕುಸಿತ ಹಿಂದೆಂದೂ ಆಗಿಲ್ಲ' ಎಂದೂ ಅವರು ಹೇಳಿದರು.

'ಕಳೆದ ಎರಡು ವರ್ಷಗಳಲ್ಲಿ ಬಾಳೆಹಣ್ಣು ಮಾರಾಟ ಪ್ರಮಾಣ ಕೂಡಾ ಗಣನೀಯವಾಗಿ ಕುಸಿದಿದೆ. ಕೆ.ಆರ್. ಮಾರ್ಕೆಟ್‌ನಲ್ಲಿ ಹಿಂದೆ 50 ಬಾಳೆ ಹಣ್ಣು ಮಾರಾಟಗಾರರಿದ್ದರು. ಈಗ ಕೇವಲ 30 ಮಂದಿ ಇದ್ದೇವೆ. ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ನಮಗೆಲ್ಲರಿಗೂ ಕಷ್ಟ ಆಗಲಿದೆ' ಎಂದು ಕೆ. ಆರ್. ಮಾರ್ಕೆಟ್‌ನ ಬಾಳೆಹಣ್ಣು ವ್ಯಾಪಾರಿ ಹೇಳಿದರು.

'ಬೆಲೆ ಕುಸಿತದ ಮಧ್ಯೆಯೂ ನೆರೆ ರಾಜ್ಯಗಳಿಂದ ಭಾರಿ ಪ್ರಮಾಣದಲ್ಲಿ ಬಾಳೆಹಣ್ಣು ನಗರಕ್ಕೆ ಬರುತ್ತಿದೆ. ಸದ್ಯ ಯಾವುದೇ ಹಬ್ಬ ಇಲ್ಲದೇ ಇರುವುದರಿಂದ ಬೇಡಿಕೆ ಕುಸಿದಿದೆ. ಅಲ್ಲದೆ, ಬಾಳೆಹಣ್ಣು ತಿನ್ನುವುದರಿಂದ ಶೀತ ಆಗುತ್ತದೆ ಎನ್ನುವ ಭಾವನೆ ಜನರಲ್ಲಿದೆ' ಎಂದು ತೋಟಗಾರಿಕಾ ಇಲಾಖೆಯ ಹೆಚ್ಚುವರಿ ನಿರ್ದೇಶಕ (ಹಣ್ಣುಗಳು) ಕೆ. ದುಂಡಿ ಹೇಳಿದರು.

ಸಂಕ್ಷಿಪ್ತ ಸುದ್ದಿ

ಆರ್‌ಟಿಇ: ಸಲಹಾ ಸಮಿತಿ ಪುನರ್ ರಚನೆ

ಬೆಂಗಳೂರು: ರಾಜ್ಯದಲ್ಲಿ ಶಿಕ್ಷಣ ಹಕ್ಕು ಕಾಯ್ದೆಯ (ಆರ್‌ಟಿಇ) ಸಮರ್ಪಕ ಅನುಷ್ಠಾನಕ್ಕೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಸಲಹಾ ಸಮಿತಿಯನ್ನು ಪುನರ್ ರಚಿಸಲಾಗಿದೆ.

ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಸಮಿತಿಗೆ ಉಪಾಧ್ಯಕ್ಷರು, ಆಯುಕ್ತರು ಸದಸ್ಯ ಕಾರ್ಯದರ್ಶಿ. ಸರ್ವ ಶಿಕ್ಷಣ ಅಭಿಯಾನದ ಯೋಜನಾ ನಿರ್ದೇಶಕರು, ಧಾರವಾಡ, ಕಲಬುರಗಿ ವಿಭಾಗಗಳ ಹೆಚ್ಚುವರಿ ಆಯುಕ್ತರು, ಡಿಎಸ್‌ಇಆರ್‌ಟಿ ನಿರ್ದೇಶಕರು, ಪ್ರಾಥಮಿಕ, ಪ್ರೌಢ ಶಿಕ್ಷಣ ವಿಭಾಗಗಳ ನಿರ್ದೇಶಕರು, ಉರ್ದು ಮತ್ತು ಅಲ್ಪಸಂಖ್ಯಾತ ಶಿಕ್ಷಣದ ನಿರ್ದೇಶಕರು, ಸಮಗ್ರ ಶಿಕ್ಷಣದ (ಕಾರ್ಯಕ್ರಮಗಳು) ನಿರ್ದೇಶಕರು, ಆರ್‌ಎಂಎಸ್‌ಎ ನಿರ್ದೇಶಕರು ಪದನಿಮಿತ್ತ ಸದಸ್ಯರು.

ಉಳಿದಂತೆ, ಶಿಕ್ಷಣ ಇಲಾಖೆಯ ನಿವೃತ್ತ ನಿರ್ದೇಶಕ ಕೆ.ಪಿ.ಹನುಮಂತರಾಯಪ್ಪ, ನಿವೃತ್ತ ಸಹ ನಿರ್ದೇಶಕ ಪಾಲಾಕ್ಷಯ್ಯ, ಚೈಲ್ಡ್ ರೈಟ್ಸ್ ಟ್ರಸ್ಟ್‌ನ ವಾಸುದೇವ ಶರ್ಮ, ಮೂವ್‌ಮೆಂಟ್‌ನ (ಉತ್ತರ ಕರ್ನಾಟಕ) ಪ್ರಾದೇಶಿಕ ಮುಖ್ಯಸ್ಥ ಕೆ.ಎಸ್. ಜಯಂತ್, ಎಂ.ಎಸ್. ರಾಮಯ್ಯ ತಾಂತ್ರಿಕ ಶಿಕ್ಷಣ ಸಂಸ್ಥೆಯ ಪ್ರಾಧ್ಯಾಪಕಿ ಮಾನಸಾ ನಾಗಭೂಷಣ್, ಬೆಂಗಳೂರಿನ ಡಾ. ಗೋವಿಂದರಾಜು, ವಕೀಲರಾದ ಶೌರಿ ಎಚ್.ಆರ್., ಪ್ರಾಧ್ಯಾಪಕಿ ಡಾ. ನಂದಿನಿ ಸದಸ್ಯರು.

ಹಿಂದಿ ಬರಹದ ಮೈಲುಗಲ್ಲಿಗೆ ಕಪ್ಪುಮಸಿ!



ದಾಬಸ್ ಪೇಟೆ: ದಾಬಸ್ ಪೇಟೆ ಮೂಲಕ ಹಾದು ಹೋಗುವ ಕೊರಟಗೆರೆ-ಮಧುಗಿರಿ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿ 3ರ ಹಲವೆಡೆ ಮೈಲುಗಲ್ಲುಗಳ ಮೇಲೆ ಹಿಂದಿ ಬರಹ ಬಳಸಿರುವುದರ ವಿರುದ್ಧ ಕೆಲ ಕನ್ನಡ ಅಭಿಮಾನಿಗಳು ಆಕ್ರೋಶ ವ್ಯಕ್ತಪಡಿಸಿ, ಹಿಂದಿ ಬರಹಕ್ಕೆ ಕಪ್ಪು ಮಸಿ ಬಳಿದಿದ್ದಾರೆ. ನರಸೀಪುರ ತೋಪು ಮತ್ತು ಹಲವೆಡೆ ರಾಜ್ಯ ಹೆದ್ದಾರಿ 3ರ ಮೈಲುಗಲ್ಲುಗಳ ಮೇಲೆ ಹಿಂದಿ ಬರಹ ಬಳಸಿರುವುದು ಗಮನಿಸಿದ ಕೆಲವು ಕನ್ನಡ ಅಭಿಮಾನಿಗಳು ಮುಖಪುಟದಲ್ಲಿ ಹಿಂದಿ ಬರಹದ ಮೈಲುಗಲ್ಲು ಭಾವಚಿತ್ರ ಹಾಕಿಕೊಂಡಿದ್ದರು.

ಮುಖಪುಟದಲ್ಲಿ ಈ ಬಗ್ಗೆ ಫೋಟೊ ವೈರಲ್ ಆಗುತ್ತಿದ್ದಂತೆ ಕೆಲವು ಕನ್ನಡ ಪರ ಸಂಘಟನೆ ಮುಖಂಡರು ಬರಹಗಳಿಗೆ ಕಪ್ಪು ಮಸಿ ಬಳಿದಿದ್ದಾರೆ.

ಕಾಶಿ ವಿಶ್ವನಾಥ ಧಾಮ: 5 ಲಕ್ಷ ಮಂದಿ ಭೇಟಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಈಚೆಗೆ ಉದ್ಘಾಟಿಸಿದ ನವೀಕೃತ ಕಾಶಿ ವಿಶ್ವನಾಥ ಧಾಮಕ್ಕೆ ವರ್ಷದ ಮೊದಲ ದಿನವಾದ ಶನಿವಾರ ಸುಮಾರು 5 ಲಕ್ಷ ಭಕ್ತರು ಭೇಟಿ ನೀಡಿದ್ದಾರೆ ಎಂದು ಅಧಿಕೃತ ಮೂಲಗಳು ಹೇಳಿವೆ.

ವಾರಾಣಸಿಯಲ್ಲಿನ ಶಿವನ ದೇವಸ್ಥಾನಕ್ಕೆ ಮಹಾಶಿವರಾತ್ರಿ ದಿನ ಭೇಟಿ ನೀಡುವುದು ಒಳ್ಳೆಯದು ಎಂದು ಭಕ್ತರು ಭಾವಿಸಿದ್ದಾರೆ. ಆದರೆ, ಇದುವರೆಗೂ ಆ ದಿನ ಭಕ್ತರ ಸಂಖ್ಯೆ 2.5 ಲಕ್ಷ ದಾಟಿಲ್ಲ ಎಂದೂ ತಿಳಿಸಿವೆ.

ಮರಾಠಿ ಮಾಧ್ಯಮದತ್ತ ಮುಖಮಾಡುತ್ತಿರುವ ಅಸಹಾಯಕ ವಿದ್ಯಾರ್ಥಿಗಳು

ಬೆಳಗಾವಿ: ಕನ್ನಡ ಮಾಧ್ಯಮ ಪ್ರೌಢಶಾಲೆಯೇ ಇಲ್ಲ!

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿರುವ ಬೆಳಗಾವಿ ತಾಲ್ಲೂಕಿನ ಪಶ್ಚಿಮಭಾಗದ ಹಳ್ಳಿಗಳಲ್ಲಿ ಕನ್ನಡ ಪ್ರೌಢಶಾಲೆಗಳೇ ಇಲ್ಲ! ಇಲ್ಲಿನ ಕನ್ನಡಿಗರು ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮದಲ್ಲಿ ಓದಿಸುವ ಇಚ್ಛೆ ಹೊಂದಿದ್ದರೂ, ಶಾಲೆಗಳೇ ಇಲ್ಲದ ಕಾರಣ ಅನ್ಯ ಮಾಧ್ಯಮಗಳಿಗೆ ಸೇರಿಸುವ ಅನಿವಾರ್ಯ ಇದೆ. ಕನ್ನಡ ಪ್ರೌಢಶಾಲೆ ತೆರೆಯಲು ನಿಯಮಗಳು ತೊಡಕಾಗಿವೆ.

ಬೆಳಗಾವಿಗೆ ಅಲೆದಾಟ: ತಾಲ್ಲೂಕಿನ ಉಚಗಾವಿ, ಬೆಕ್ಕಿನಕೆರೆ, ಗೋಜಗಾ, ಕುದ್ರೇಮನಿ, ಮಣ್ಣೂರ, ಹಿಂಡಲಗಾ ಮತ್ತಿತರ ಗ್ರಾಮಗಳಲ್ಲಿ ಸರ್ಕಾರಿ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಗಳಿವೆ. ಆದರೆ, ಕನ್ನಡ ಮಾಧ್ಯಮದ ಪ್ರೌಢಶಾಲೆಗಳಿಲ್ಲದ ಕಾರಣ ವಿದ್ಯಾರ್ಥಿಗಳು ಮುಂದಿನ ಹಂತದ ಕಲಿಕೆಗಾಗಿ 10-20 ಕಿ.ಮೀ ದೂರದ ಬೆಳಗಾವಿಗೆ ಬರುವಂತಾಗಿದೆ. ಅದರಲ್ಲೂ ರಾಜ್ಯದ ಕಡೇ ಗ್ರಾಮ ಕುದ್ರೇಮನಿಯ ವಿದ್ಯಾರ್ಥಿಗಳು ನಿತ್ಯವೂ ಮಹಾರಾಷ್ಟ್ರದ ಹಳ್ಳಿಗಳನ್ನು ದಾಟಿ, ಬೆಳಗಾವಿಗೆ ಬರಬೇಕಿದೆ.



ಬೆಳಗಾವಿ ತಾಲ್ಲೂಕಿನ ಕುದ್ರೇಮನಿಯಲ್ಲಿರುವ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ

ಮರಾಠಿ ಮಾಧ್ಯಮದಲ್ಲೇ ಶಿಕ್ಷಣ: 'ನಮ್ಮಲ್ಲಿ ಬಸ್ ಸೌಲಭ್ಯ ಉತ್ತಮವಾಗಿಲ್ಲ. ಆದರೂ, ಕನ್ನಡ ಮಾಧ್ಯಮದಲ್ಲೇ ಮಗಳನ್ನು ಓದಿಸಬೇಕೆನ್ನುವ ಆಸೆಯಿಂದ ಬೆಳಗಾವಿ ಪ್ರೌಢ ಶಾಲೆಗೆ ಕಳುಹಿಸುತ್ತಿದ್ದೇನೆ. ಆರ್ಥಿಕವಾಗಿ ಹಿಂದುಳಿದವರು ಅನಿವಾರ್ಯವಾಗಿ ತಮ್ಮ ಮಕ್ಕಳನ್ನು ಇಲ್ಲಿನ ಮರಾಠಿ ಮಾಧ್ಯಮ ಪ್ರೌಢಶಾಲೆಯಲ್ಲೇ ಓದಿಸುತ್ತಿದ್ದಾರೆ' ಎನ್ನುತ್ತಾರೆ ಕುದ್ರೇಮನಿಯ ರಸೂಲ್ ಮುಲ್ಲಾ.

ಮರಾಠಿ ಪ್ರೌಢಶಾಲೆಗಳಿವೆ: 'ಈ ಭಾಗದಲ್ಲಿ ಮರಾಠಿ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿವೆ. ಆದರೆ, ಕನ್ನಡದಲ್ಲಿ ಪ್ರೌಢ ಶಿಕ್ಷಣ ಪಡೆಯಲು ಅವಕಾಶವಿಲ್ಲದ್ದರಿಂದ ತೊಂದರೆಯಾಗಿದೆ. ಹಾಗಾಗಿ ಹಿಂಡಲಗಾ, ಉಚಗಾವಿ ಅಥವಾ ಕುದ್ರೇಮನಿಯಲ್ಲಿ ಕನ್ನಡ ಪ್ರೌಢಶಾಲೆ ಆರಂಭಿಸಲು ಕ್ರಮ ಕೈಗೊಳ್ಳಬೇಕು. ಇದರಿಂದ ವಿದ್ಯಾರ್ಥಿಗಳಿಗೆ ಪ್ರಯೋಜನವಾಗಲಿದೆ' ಎಂದು ಗ್ರಾಮಸ್ಥರು ಹೇಳುತ್ತಾರೆ.

ಎಷ್ಟು ವಿದ್ಯಾರ್ಥಿಗಳು?: 'ಪ್ರಸ್ತುತ ಹಿಂಡಲಗಾ ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಯಲ್ಲಿ 180, ಮಣ್ಣೂರಿನಲ್ಲಿ 110, ಬೆಕ್ಕಿನಕೆರೆಯಲ್ಲಿ 122, ಉಚಗಾವಿಯಲ್ಲಿ 112, ಕುದ್ರೇಮನಿಯಲ್ಲಿ 63 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ' ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪ್ರೌಢಶಾಲೆ ಶೀಘ್ರ ಆರಂಭ: ಭರವಸೆ

'ಯಾವುದೇ ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆ ಆರಂಭಕ್ಕೆ 70 ವಿದ್ಯಾರ್ಥಿಗಳಿರಬೇಕು. ಸುತ್ತಲಿನ 5 ಕಿ.ಮೀ ವ್ಯಾಪ್ತಿಯಲ್ಲಿ ಬೇರೆ ಪ್ರೌಢಶಾಲೆ ಇರಬಾರದೆನ್ನುವ ನಿಯಮವಿದೆ. ಆದರೆ, ಗಡಿಭಾಗ ಎನ್ನುವ ಕಾರಣಕ್ಕೆ ಈ ನಿಯಮ ಸಡಿಲಿಸಿ ಉಚಗಾವಿ ಅಥವಾ ಹಿಂಡಲಗಾದಲ್ಲಿ ಸರ್ಕಾರಿ ಕನ್ನಡ ಪ್ರೌಢಶಾಲೆ ಆರಂಭಿಸಲು ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಶೀಘ್ರ ಗ್ರಾಮಸ್ಥರ ಬೇಡಿಕೆ ಈಡೇರುವ ವಿಶ್ವಾಸವಿದೆ' ಎಂದು ಬೆಳಗಾವಿ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ರುದ್ರಗೌಡ ಜುಟ್ಟನವರ 'ಪ್ರಜಾವಾಣಿ'ಗೆ ತಿಳಿಸಿದರು.

‘ಭದ್ರಾ ಮೇಲ್ದಂಡೆ ಯೋಜನೆ: ಆಂಧ್ರದ ತಕರಾರಿಗೆ ತಲೆಕೆಡಿಸಿಕೊಳ್ಳೊಲ್ಲ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಭದ್ರಾ ಮೇಲ್ದಂಡೆ ಯೋಜನೆಗೆ ರಾಷ್ಟ್ರೀಯ ಮಾನ್ಯತೆ ನೀಡುವುದಕ್ಕೆ ಆಂಧ್ರಪ್ರದೇಶ ಆಕ್ಷೇಪ ವ್ಯಕ್ತಪಡಿಸಿದೆ. ಇದಕ್ಕೆ ರಾಜ್ಯ ಸರ್ಕಾರ ತಲೆಕೆಡಿಸಿಕೊಳ್ಳುವುದಿಲ್ಲ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದರು.

ಭದ್ರಾ ಮೇಲ್ದಂಡೆ ಯೋಜನೆ ಕುರಿತು ಭಾನುವಾರ ಪ್ರಗತಿ ಪರಿಶೀಲನೆ ನಡೆಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಡಿ.6ರಂದು ಉನ್ನತ ಸಮಿತಿ ಸಭೆ ನಡೆದಿತ್ತು. ಕರ್ನಾಟಕ ಮತ್ತು ಆಂಧ್ರಪ್ರದೇಶ ಸರ್ಕಾರಕ್ಕೆ ಲಿಖಿತ ಅಭಿಪ್ರಾಯ ಸಲ್ಲಿಸಲು ಅವಕಾಶ ಕಲ್ಪಿಸಿತ್ತು. ಆಗ ಆಂಧ್ರಪ್ರದೇಶ ಆಕ್ಷೇಪ ವ್ಯಕ್ತಪಡಿಸಿತು’ ಎಂದು ಹೇಳಿದರು.

‘ಯೋಜನೆ ವಿಚಾರವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜೊತೆಗೂಡಿ ಮೂರು ಬಾರಿ ಜಲಶಕ್ತಿ ಸಚಿವಾಲಯದ ಜೊತೆ ಚರ್ಚಿಸಲಾಗಿದೆ. ಯೋಜನೆಗೆ ರಾಷ್ಟ್ರೀಯ ಮಾನ್ಯತೆ ನೀಡುವ ವಿಚಾರ ಮುಂದಿನವಾರ ಕೇಂದ್ರ ಸಚಿವ ಸಂಪುಟದಲ್ಲಿ ಚರ್ಚೆಗೆ ಬರಲಿದೆ. ಶೀಘ್ರವೇ ರಾಷ್ಟ್ರೀಯ ಯೋಜನೆಯಾಗಿ ಘೋಷಣೆ ಆಗಲಿದೆ’ ಎಂದು ಆಶಿಸಿದರು.


ಗೋವಿಂದ ಕಾರಜೋಳ

‘ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳು ಕರ್ನಾಟಕದ ಪಾಲಿನ ನದಿ ನೀರನ್ನು ಬಳಕೆ ಮಾಡಿಕೊಳ್ಳುತ್ತಿವೆ. ಅನುಮತಿ ಪಡೆಯದೇ ಅನಧಿಕೃತವಾಗಿ ಹಲವು ಯೋಜನೆಗಳನ್ನು ಅಭಿವೃದ್ಧಿಪಡಿಸಿವೆ. ಇದಕ್ಕೆ ತಕರಾರು ಸಲ್ಲಿಸಲು ರಾಜ್ಯದ ಕಾನೂನು ಪರಿಣತರು ಹಾಗೂ ಅಧಿಕಾರಿಗಳ ತಂಡ ಕೆಲಸ ಮಾಡುತ್ತಿದೆ’ ಎಂದರು.

ಹಿಂದೂ ದೇವಾಲಯ ಸ್ವತಂತ್ರಗೊಳಿಸುವ ನಿರ್ಧಾರಕ್ಕೆ ಕಾಂಗ್ರೆಸ್ ವಿರೋಧ

‘ಧಾರ್ಮಿಕ ಮಾಫಿಯಾದ ಹುನ್ನಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದೂ ದೇವಾಲಯಗಳನ್ನು ಸ್ವತಂತ್ರಗೊಳಿಸುವ ರಾಜ್ಯ ಸರ್ಕಾರದ ನಿರ್ಧಾರ, ದೇವರ ಹೆಸರಿನಲ್ಲಿ ದಂಧೆ ನಡೆಸುವ ಧಾರ್ಮಿಕ ಮಾಫಿಯಾದ ಭೀಕರ ಹುನ್ನಾರ. ಶೇ 80ರಷ್ಟು ಹಿಂದೂಗಳ ಆಸ್ತಿ ಕಬಳಿಸಿ ಶೇ 2–3ರಷ್ಟಿರುವ ಜನರ ಅಧೀನಕ್ಕೆ ಪಡೆಯುವ ತಂತ್ರ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.


ಸಿದ್ದರಾಮಯ್ಯ

ಮಾಧ್ಯಮ ಹೇಳಿಕೆಯಲ್ಲಿ ಅವರು, ‘ಒಂದು ವರ್ಗದ ದುಷ್ಟ ಕಣ್ಣು ದೇಗುಲಗಳ ಮೇಲೆ ಬಿದ್ದಿದೆ. ಸರ್ಕಾರ ಇದಕ್ಕೆ ಮುಂದಾದರೆ, ನಾಡಿನ ಸಾವಿರ ವರ್ಷಗಳ ಜನರ ದೀರ್ಘ ಹೋರಾಟವನ್ನು ಅವಮಾನಿಸಿದಂತಾಗುತ್ತದೆ’ ಎಂದಿದ್ದಾರೆ.

‘ಈ ಹಿಂದೂ ವಿರೋಧಿ, ಧಾರ್ಮಿಕ ಬಂಡವಾಳವಾದಿ ಪರ ಧೋರಣೆಯನ್ನು ಬುದ್ಧಿ, ಪ್ರಜ್ಞೆ ಇರುವ ಎಲ್ಲರೂ ವಿರೋಧಿಸಬೇಕು. ಬಿಜೆಪಿಯ ಮೂಲಭೂತ ಸ್ವಭಾವದಲ್ಲಿ ಸಾಮಾಜಿಕ ನ್ಯಾಯವನ್ನು ತುಳಿದು, ಶೂದ್ರರು, ದಲಿತರು, ಮಹಿಳೆಯರನ್ನು ಗುಲಾಮಗಿರಿಗೆ ತಳ್ಳುವ ನೀಚ ಕಾರ್ಯಸೂಚಿಯಿದೆ. ಅದಕ್ಕೆ ಸಂಬಂಧಿಸಿದ ಕಾಯ್ದೆಗಳನ್ನು ಬಿಜೆಪಿಯವರು ರೂಪಿಸುತ್ತಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಹಿಂದೂ ದೇವಾಲಯಗಳನ್ನು ಸ್ವತಂತ್ರಗೊಳಿಸುವ ನಿರ್ಧಾರದ ಮೂಲಕ ಬಹುಸಂಖ್ಯಾತ ಹಿಂದೂ ಸಮಾಜದ ಮೇಲೆ ಬಿಜೆಪಿ ಸಾರಿರುವ ಸಮರದ ವಿರುದ್ಧ ಜಯಗಳಿಸಲು ಪ್ರತಿಯೊಬ್ಬರೂ ಪ್ರಜ್ಞಾವಂತರಾಗಿ, ಪ್ರತಿಭಟಿಸಬೇಕು’ ಎಂದಿದ್ದಾರೆ.

‘ಒಂದು ಸಾವಿರ ವರ್ಷಗಳಿಂದ ನಮ್ಮ ಹಿರಿಯರು ನಡೆಸಿದ ಹೋರಾಟದಿಂದಾಗಿ ಮನುವಾದಿ ವಿಷವೃಕ್ಷದ ಬೇರುಗಳು ದುರ್ಬಲವಾಗಿ, ಶಿಥಿಲಾವಸ್ಥೆಗೆ ತಲುಪಿದ್ದವು. ಬಿಜೆಪಿ ಸರ್ಕಾರ ದೇವಸ್ಥಾನಗಳಿಗೆ ಸ್ವಾಯತ್ತತೆ ಮೂಲಕ ಒಣಗುತ್ತಿದ್ದ ಬೇರುಗಳಿಗೆ ಟಾನಿಕ್ ನೀಡಲು ಹೊರಟಿದೆ. ಮನುವಾದಿ ಸಿದ್ಧಾಂತ ಮತ್ತೆ ಜೀವ ಪಡೆದರೆ ಅದು ರಾಕ್ಷಸ ರೂಪಿಯಾಗುತ್ತದೆ. ಇದನ್ನು ವಿರುದ್ಧ ಪಕ್ಷಾತೀತ, ಪಂಥಾತೀತವಾಗಿ ವಿರೋಧಿಸಬೇಕಿದೆ’ ಎಂದಿದ್ದಾರೆ.

‘ದೇವಸ್ಥಾನಗಳ ಮೇಲಿನ ಹಿಡಿತ ತಪ್ಪಿಸುವುದೆಂದರೆ ಜನ ಸಮುದಾಯಗಳ ಅಧಿಕಾರ ತಪ್ಪಿಸುವುದೆಂದೇ ಅರ್ಥ. ಸರ್ಕಾರ ಈಗಿನ ನಿರ್ಧಾರದ ಮೂಲಕ ಶೇ 80ರಷ್ಟು ಜನ ಮತ್ತೆ ಊಳಿಗಮಾನ್ಯ ಸಮಾಜದಐಐ ಕ್ರೌರ್ಯವನ್ನು ಅನುಭವಿಸಬೇಕೆಂದು ತೀರ್ಮಾನಿಸಿದಂತೆ ಕಾಣುತ್ತಿದೆ’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

‘ಪುರೋಹಿತಶಾಹಿ ಶಕ್ತಿಗಳು, ಬಿಜೆಪಿಯಲ್ಲಿರುವ ಶೂದ್ರ ರಾಜಕಾರಣಿಗಳನ್ನು ಬಳಸಿಕೊಂಡು ದೇಗುಲಗಳನ್ನು ತಮ್ಮ ವಶಕ್ಕೆ ಪಡೆದು ಹಿಂದೂಗಳನ್ನು ಧಾರ್ಮಿಕ ಗುಲಾಮಗಿರಿಯ ಕಡೆಗೆ ತಳ್ಳಲು ಪ್ರಯತ್ನಿಸುತ್ತಿವೆ’ ಎಂದೂ ಅವರು ಹೇಳಿದ್ದಾರೆ.

‘ಔರಂಗಜೇಬ್, ಬ್ರಿಟಿಷ್ ಮನಸ್ಥಿತಿ’

ಬೆಂಗಳೂರು: ‘ಮೊಗಲ್ ದೊರೆ ಔರಂಗಜೇಬ್ ಮತ್ತು ಬ್ರಿಟಿಷರು ಹಣಕ್ಕಾಗಿ ಹಿಂದೂ ದೇವಾಲಯಗಳನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡು, ಹಣವನ್ನು ಬಳಸುತ್ತಿದ್ದರು. ಕಾಂಗ್ರೆಸ್ ಕೂಡ ಅದೇ ಹಾದಿಯನ್ನು ಅನುಸರಿಸಿದೆ’ ಎಂದು ಸಿ.ಟಿ.ರವಿ ಕಿಡಿಕಾರಿದರು. ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳ ಬಳಿಕವೂ ದೇವಾಲಯದ ಆದಾಯ ಮೇಲೆ ಕಣ್ಣಿಡುವುದು ಸ್ವಾತಂತ್ರ್ಯದ ನೈಜ ಅರ್ಥಕ್ಕೆ ವಿರೋಧವಾದುದು ಎಂದರು.


ಸಿ.ಟಿ.ರವಿ

‘ದೇವಸ್ಥಾನಗಳಿಗೆ ಭಕ್ತರು ಕೊಡುವ ಹಣದಲ್ಲಿ ದೇವಾಲಯಗಳ ಅಭಿವೃದ್ಧಿ, ಸಮಾಜಮುಖಿ ಕೆಲಸ ಆಗಬೇಕು. ದೇವಸ್ಥಾನಗಳ ಸ್ವಾಯತ್ತತೆ ಕುರಿತು ಮುಖ್ಯಮಂತ್ರಿ ಸೂಕ್ತ ನಿರ್ಧಾರ ಕೈಗೊಂಡಿದ್ದಾರೆ. ಧರ್ಮಸ್ಥಳದ ಬೆಳವಣಿಗೆ ಮತ್ತು ದೇವಸ್ಥಾನಗಳ ಪುನರುತ್ಥಾನದ ಅಧ್ಯಯನಕ್ಕೆ ಕೆಪಿಸಿಸಿ ಅಧ್ಯಕ್ಷರು ಮುಂದಾಗಲಿ’ ಎಂದು ಅವರು ಹೇಳಿದ್ದಾರೆ.

ಪರಿಹಾರ ನೀಡ್ತೇನೆ, ವೋಟ್ ಕೊಡಿ: ರೇಣುಕಾಚಾರ್ಯ ವಿಡಿಯೊ ವೈರಲ್

ಹೊನ್ನಾಳಿ: ‘ಕೋವಿಡ್ ಸೋಂಕಿನಿಂದ ಮೃತಪಟ್ಟವರ ಕುಟುಂಬಕ್ಕೆ ಸರ್ಕಾರ ₹ 1 ಲಕ್ಷ ಪರಿಹಾರ ನೀಡುತ್ತಿದೆ. ನಾನು ವೈಯಕ್ತಿಕವಾಗಿ ₹ 10 ಸಾವಿರ ಕೊಡುತ್ತೇನೆ. ಮುಂದಿನ ಚುನಾವಣೆಯಲ್ಲಿ ನನಗೇ ಮತ ಹಾಕುತ್ತೇವೆ ಎಂದು ಎರಡೂ ಕೈಗಳನ್ನು ಎತ್ತಿ ಹೇಳಿ’ ಎಂದು ಶಾಸಕ ರೇಣುಕಾಚಾರ್ಯ ಅವರು ಮತದಾರರಿಗೆ ಹೇಳಿರುವ ವಿಡಿಯೊ ಎಲ್ಲೆಡೆ ಹರಿದಾಡುತ್ತಿದೆ. .

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳು, ಮನೆ ಹಾನಿಗೊಳಗಾದವರಿಗೆ ಸರ್ಕಾರದಿಂದ ಪರಿಹಾರ ಕೊಡುವ ಕಾರ್ಯಕ್ರಮ ಹೊನ್ನಾಳಿಯಲ್ಲಿ ಶನಿವಾರ ನಡೆದಿದ್ದು, ಅಲ್ಲಿಯೂ ರೇಣುಕಾಚಾರ್ಯ ಅವರು ಮಂಡಿಯೂರಿ, ಕೈ ಮುಗಿದು, ವೇದಿಕೆಗೆ ಹಣೆ ಹಚ್ಚಿ ‘ಮುಂದಿನ ಚುನಾವಣೆಯಲ್ಲಿ ನನ್ನನ್ನು ಗೆಲ್ಲಿಸಬೇಕು’ ಎಂದಿದ್ದರು.

ಕಾರ್ಯಕ್ರಮದ ನಂತರ ಸಂತ್ರಸ್ತರನ್ನು ಮನೆಗೆ ಕರೆಯಿಸಿಕೊಂಡು, ‘ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಕ್ಕೆ ವೈಯಕ್ತಿಕವಾಗಿ ₹ 10 ಸಾವಿರ, ಮನೆ ಹಾನಿಗೊಳಗಾದವರಿಗೆ ₹ 1 ಸಾವಿರ ಕೊಡುತ್ತೇನೆ’ ಎಂದು ಹೇಳಿದ್ದು, ಮತ ನೀಡುತ್ತೇನೆ ಎಂದು ಅವರಿಂದ ಮಾತು ಪಡೆದುಕೊಳ್ಳಲು ಪ್ರಯತ್ನಿಸಿದ್ದಾರೆ.

‘ಸರ್ಕಾರ ನೀಡುವ ಪರಿಹಾರಕ್ಕೆ ಜನರು ಋಣ ತೀರಿಸಬೇಕು’ ಎಂಬ ಮಾತನ್ನು ಅವರು ಆಡಿದ್ದಾರೆ ಎನ್ನಲಾಗಿದೆ.

‘ಅಭಿವೃದ್ಧಿ ನೆಪ, ಖಾಸಗಿಯವರಿಗೆ ನೆರವು’

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ‘ನವ ಭಾರತ ನಿರ್ಮಾಣದ ಹೆಸರಿನಲ್ಲಿ ಪ್ರಧಾನಿ ಮೋದಿ ಖಾಸಗಿ ಕಂಪನಿಗಳನ್ನು ಆರ್ಥಿಕವಾಗಿ ಬಲಪಡಿಸುವ ಕೆಲಸ ಮಾಡುತ್ತಿದ್ದಾರೆ’ ಎಂದು ಸಿಪಿಎಂ ಪಾಲಿಟ್ ಬ್ಯೂರೊ ಸದಸ್ಯ ಪ್ರಕಾಶ್ ಕಾರಟ್ ಭಾನುವಾರ ಆರೋಪಿಸಿದರು.



ಗಂಗಾವತಿಯಲ್ಲಿ ಭಾನುವಾರ ನಡೆದ ಸಿಪಿಎಂ ರಾಜ್ಯ ಸಮ್ಮೇಳನದಲ್ಲಿ ಪಕ್ಷದ ಪಾಲಿಟ್ ಬ್ಯುರೊ ಸದಸ್ಯ ಪ್ರಕಾಶ್ ಕಾರಟ್ ಮಾತನಾಡಿದರು– ಪ್ರಜಾವಾಣಿ ಚಿತ್ರ

ನಗರದಲ್ಲಿ ನಡೆದ ಭಾರತ ಕಮ್ಯುನಿಸ್ಟ್ ಪಕ್ಷದ (ಮಾರ್ಕ್ಸ್‌ವಾದ) 23ನೇ ರಾಜ್ಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ‘ಕೋವಿಡ್ ಸಂದರ್ಭದಲ್ಲಿ ಜನ ಸಂಕಷ್ಟಕ್ಕೆ ಸಿಲುಕಿದ್ದರೂ ಸರ್ಕಾರಗಳು ಸೂಕ್ತ ಪರಿಹಾರ ನೀಡಲಿಲ್ಲ. ಬೆಲೆ ಏರಿಕೆ ಮಾಡಿ ಜನರಿಗೆ ಆರ್ಥಿಕ ಹೊರೆ ಹೊರಿಸಿವೆ’ ಎಂದರು.

‘ಪ್ರಧಾನಿ ನರೇಂದ್ರ ಮೋದಿ ಅವರು ವಿಮಾನ ನಿಲ್ದಾಣ, ಬಂದರು, ರಸ್ತೆ ಸೇರಿ ಸರ್ಕಾರಿ ಆಸ್ತಿಗಳನ್ನು ಖಾಸಗಿ ಒಡೆತನಕ್ಕೆ ನೀಡಿ, ಹಣ ಪಡೆದು ಪಕ್ಷದ ಆಡಳಿತ ಮುಂದುವರಿಯುವಂತೆ ನೋಡಿಕೊಳ್ಳುತ್ತಿದ್ದಾರೆ’ ಎಂದು ಟೀಕಿಸಿದರು.

‘ರೈತರ ಅಭಿವೃದ್ಧಿ ನೆಪದಲ್ಲಿ ಕೇಂದ್ರ ಸರ್ಕಾರ ಮೂರು ಕೃಷಿ ಕಾಯ್ದೆ ಜಾರಿ ಮಾಡಿತು. ವಿರೋಧವಿದ್ದರೂ ಸಮರ್ಥಿಸಿಕೊಂಡಿತು. ಕೊನೆಗೆ ಕ್ಷಮೆಯಾಚಿಸಿ, ಹಿಂಪಡೆಯಿತು. ಆದರೆ, ಕರ್ನಾಟಕ ಸರ್ಕಾರ ಇನ್ನೂ ಹಿಂಪಡೆದಿಲ್ಲ’ ಎಂದರು.

‘ಆರ್‌ಎಸ್‌ಎಸ್ ಹಾಗೂ ಬಂಡವಾಳಶಾಹಿ ಪಕ್ಷಗಳು ಮುಸ್ಲಿಂ, ಕ್ರೈಸ್ತರು ಹಾಗೂ ಎಡ ಪಕ್ಷಗಳನ್ನು ಗುರಿಯಾಗಿಸಿಕೊಂಡಿದ್ದು, ಈಗ ಮತಾಂತರ ನಿಷೇಧ ಕಾಯ್ದೆ ಜಾರಿ ಮಾಡುತ್ತಿವೆ’ ಎಂದು ಆರೋಪಿಸಿದರು.

ಮಾರ್ಗಸೂಚಿ ದರ ಇಳಿಕೆ: ಲಾಭ ಹೇಗೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ಖರೀದಿ, ಕರಾರು ಪತ್ರ, ಭೋಗ್ಯ ಪತ್ರಗಳನ್ನು ನೋಂದಣಿ ಮಾಡಿಸುವಾಗ ಪಾವತಿಸುವ ನೋಂದಣಿ ಮತ್ತು ಮುದ್ರಾಂಕ ಶುಲ್ಕದಲ್ಲಿ ರಿಯಾಯಿತಿ ಪಡೆಯಲು ಅನುಕೂಲ ಆಗುವಂತೆ ಮಾರ್ಗಸೂಚಿ ದರವನ್ನು ಮೂರು ತಿಂಗಳ ಅವಧಿಗೆ (ಮಾರ್ಚ್ 31ರವರೆಗೆ) ಶೇ 10ರಷ್ಟು ಕಡಿತಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯದಲ್ಲಿ ಸ್ಥಿರಾಸ್ತಿ ಖರೀದಿಗೆ ಸಂಬಂಧಿಸಿದಂತೆ ನೋಂದಣಿ ಮಾಡುವಾಗ ಗ್ರಾಮೀಣ ಪ್ರದೇಶದಲ್ಲಿ ಆಸ್ತಿಯ ಮಾರ್ಗಸೂಚಿ ದರದ (ನೋಂದಣಿ ಮತ್ತು ಮುದ್ರಾಂಕ ಇಲಾಖೆ ನಿಗದಿಪಡಿಸುವ ಮಾರುಕಟ್ಟೆ ದರ) ಶೇ 6.65ರಷ್ಟು (ಮುದ್ರಾಂಕ ಮತ್ತು ನೋಂದಣಿ ಸೇರಿ) ಶುಲ್ಕ ಪಾವತಿಸಬೇಕಾಗಿದೆ. ನಗರ ಪ್ರದೇಶಕ್ಕೆ ಸರ್ ಚಾರ್ಜ್ ಇರುವುದಿಲ್ಲ. ಹೀಗಾಗಿ, ಶೇ 6.6ರಷ್ಟು ಶುಲ್ಕ ಪಾವತಿಸಬೇಕಾಗುತ್ತದೆ.

ಮಾರ್ಗಸೂಚಿ ದರವನ್ನು ಶೇ 10ರಷ್ಟು ಕಡಿತಗೊಳಿಸಿದ್ದರಿಂದ ಖರೀದಿದಾರರಿಗೆ ಲಾಭ ಸಿಗಲಿದೆ. ಹೇಗೆಂದರೆ, 30/40 ಅಳತೆ (1,200 ಚದರಡಿ) ನಿವೇಶನದ ಮಾರ್ಗಸೂಚಿ ದರ ನಗರಪ್ರದೇಶದಲ್ಲಿ ₹ 30 ಲಕ್ಷ ಎಂದಿಟ್ಟುಕೊಳ್ಳೋಣ. ಮಾರ್ಗಸೂಚಿ ದರ ಶೇ 10ರಷ್ಟು ಇಳಿಕೆ ಆಗಿದ್ದರಿಂದ ಪರಿಷ್ಕೃತ ಮಾರ್ಗಸೂಚಿ ದರ ₹ 27 ಲಕ್ಷ ಆಗುತ್ತದೆ. ಈ ಮೊದಲಿನಂತೆ ₹ 30 ಲಕ್ಷ ಮೌಲ್ಯದ ಆಸ್ತಿ ಖರೀದಿಸುವವರು ನೋಂದಣಿ ಮತ್ತು ಮುದ್ರಾಂಕ ಶುಲ್ಕದ ಅನ್ವಯ ₹ 1.98 ಲಕ್ಷ ಕಟ್ಟಬೇಕಾಗುತ್ತಿತ್ತು. ಮಾರ್ಗಸೂಚಿ ದರದಲ್ಲಿ ಕಡಿತ ಆಗಿರುವುದರಿಂದ ಈಗ ₹ 1,78,200 ಕಟ್ಟಿದರೆ ಸಾಕು. ‘ಪ್ರಜಾವಾಣಿ’ಯ ಭಾನುವಾರದ ಸಂಚಿಕೆಯಲ್ಲಿ ಪ್ರಕಟಗೊಂಡಿದ್ದ ಲೆಕ್ಕಾಚಾರ ತಪ್ಪಾಗಿತ್ತು.

ಒಳನೋಟ

ವಿಷವಾಗುತ್ತಿದೆ ಕುಡಿಯುವ ನೀರು

ಬೆಂಗಳೂರು: ‘ಬಯಲುಸೀಮೆ: ಜೀವಜಲಕ್ಕೆ ನಂಜು’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಜ.02) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

‘ನದಿ ನೀರು ಕಲುಷಿತ’



ಕುಡಿಯುವ ನೀರಿಗಾಗಿ ಸರ್ಕಾರ ಸಾವಿರಾರು ಕೋಟಿ ಖರ್ಚು ಮಾಡುತ್ತಿದೆ. ಆದರೂ ನೀರು ವಿಷವಾಗುತ್ತಿದೆ. ಜೀವಜಲವೇ ಜನರಿಗೆ ರೋಗಗಳನ್ನು ಹತ್ತಿರಕ್ಕೆ ತರುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನದಿಗಳು ಹರಿದರೂ ಕುಡಿಯುವ ಶುದ್ಧ ನೀರಿಗೆ ಪರದಾಟ ತಪ್ಪಿದ್ದಲ್ಲ. ಒಳಚರಂಡಿ ನೀರು ನದಿಗಳಿಗೆ ಹರಿಯುತ್ತಿದ್ದು, ನೀರು ಕಲುಷಿತಗೊಳ್ಳುತ್ತಿದೆ. ನೀರನ್ನು ಶುದ್ಧೀಕರಿಸದೆ, ಮನೆಗಳಿಗೆ ಸರಬರಾಜು ಮಾಡಲಾಗುತ್ತಿದ್ದು, ಈ ವಿಚಾರದಲ್ಲಿ ಜಿಲ್ಲಾಡಳಿತ ಮೌನ ಸರಿಯಲ್ಲ.

ಅನನ್ಯಲಕ್ಷ್ಮೀ ಕೋಟೆಕಾರ್, ಮಂಗಳೂರು

‘ಜಲ’ಭಾಗ್ಯ ಕರುಣಿಸಿ’



ಸರ್ಕಾರ ಪ್ರತಿ ಹಳ್ಳಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಬೇಕು. ಜನಪ್ರತಿನಿಧಿಗಳು ಪ್ರಚಾರಕ್ಕೆ ಮಾತ್ರ ಘಟಕಗಳನ್ನು ಉದ್ಘಾಟಿಸಿದರೆ ಸಾಲದು. ಅವುಗಳಿಗೆ ಸಮರ್ಪಕವಾಗಿ ನೀರು ಪೂರೈಸುವ ಹಾಗೂ ಘಟಕಗಳ ನಿರ್ವಹಣೆ ಹೊಣೆಯನ್ನೂ ಹೊರಬೇಕು. ನೀರಿಗೆ ಹಾಹಾಕಾರ ಇರುವ ಬಯಲುಸೀಮೆ ಪ್ರದೇಶದ ಗ್ರಾಮಗಳಿಗೆ ನೀರು ಹರಿಸಲು ಆದ್ಯತೆ ನೀಡಬೇಕು.

ಆಂಜನೇಯ, ಮಧುಗಿರಿ


‘ನಮ್ಮಿಂದಲೇ ನೀರು ಕಲುಷಿತ’



ನೀರು ಜನರಿಗೆ ಜೀವನಾಧಾರ. ಆದರೆ, ನೀರನ್ನು ಜನರೇ ಕಲುಷಿತಗೊಳಿಸಿ, ವಿಷವಾಗಿ ಬದಲಾಯಿಸುತ್ತಿದ್ದಾರೆ. ಕಾರ್ಖಾನೆಗಳ ಕಲುಷಿತವನ್ನು ಜಲಮೂಲಗಳಿಗೆ ಹರಿಸಿ ಹಾಳು ಮಾಡಲಾಗುತ್ತಿದೆ. ಮನಬಂದಂತೆ ಕೊಳವೆಬಾವಿಗಳನ್ನು ಕೊರೆಯಿಸುತ್ತಿರುವುದರಿಂದ ಅಂತರ್ಜಲ ಮಟ್ಟವೂ ಕುಸಿಯುತ್ತಿದೆ. ಈ ಎಲ್ಲ ಕಾರಣಗಳಿಂದ ನೀರು ಜನರಿಗೆ ಮಾರಕವಾಗುತ್ತಿದೆ.

ಹಾಲೇಶ್, ವಿಜಯನಗರ

‘ನಾವೇ ಆಹ್ವಾನಿಸಿದ ವಿಷ’



ವಿಷಯುಕ್ತ ನೀರನ್ನು ನಾವೇ ಆಹ್ವಾನಿಸಿದ್ದೇವೆ. ನೀರು ಶುದ್ಧವಾಗಿರಿಸಲು ಪೂರಕ ಕೆಲಸ ಮಾಡದೆ, ಸಂರಕ್ಷಣೆಯ ಜವಾಬ್ದಾರಿ ಮರೆತಿದ್ದೇವೆ. ಬೇಜವಾಬ್ದಾರಿ ನಡೆಯಿಂದ ನೀರನ್ನು ವಿಷವಾಗಿಸಿದ್ದೇವೆ. ಜಲಮೂಲಗಳು ಬತ್ತುವ ಸ್ಥಿತಿಯಲ್ಲಿವೆ. ಬೇಸಿಗೆ ಸಮೀಪಿಸುತ್ತಿದೆ. ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲಿದೆ. ಇರುವ ನೀರು ಸಂರಕ್ಷಿಸಿದರೆ ಆಪತ್ಕಾಲದಲ್ಲಿ ನೆರವಾಗಲಿದೆ.

ಮಹಾಂತೇಶ ಕೋಳಿವಾಡ, ಹುಬ್ಬಳ್ಳಿ

‘ಅಂತರ್ಜಲ ಮರುಪೂರಣಕ್ಕೆ ಆದ್ಯತೆ ಸಿಗಲಿ’



ಉತ್ತರ ಕರ್ನಾಟಕ ಭಾಗದಲ್ಲಿ ವರ್ಷವಿಡೀ ನೀರಿಗೆ ಹಾಹಾಕಾರ. ನೀರಿನ ಗುಣಮಟ್ಟವಾಗಿದ್ದರೆ ಮಾತ್ರ ಆರೋಗ್ಯದಿಂದ ಇರಲು ಸಾಧ್ಯ. ಕುಡಿಯುವ ನೀರೂ ಇಲ್ಲದ ಸ್ಥಿತಿಯನ್ನು ಊಹಿಸಿಕೊಳ್ಳುವುದೂ ಕಷ್ಟ. ಅಂತರ್ಜಲ ಮರುಪೂರಣ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ಸಿಗಬೇಕು. ಸಮಸ್ಯೆ ಬಿಗಡಾಯಿಸುವ ಮೊದಲೇ ಪರಿಹಾರ ಕಂಡುಕೊಳ್ಳುವುದು ಒಳ್ಳೆಯದು.

ದೀಪಾ ರೆಡ್ಡಿ, ಬಾಗಲಕೋಟೆ

‘ಶುದ್ಧ ನೀರು ಮರೀಚಿಕೆ’



ಸರ್ಕಾರಗಳು ಬದಲಾಗುತ್ತಲೇ ಇವೆ. ಆದರೆ, ಬಯಲುಸೀಮೆ ಪ್ರದೇಶಕ್ಕೆ ಶುದ್ಧ ಕುಡಿಯುವ ನೀರು ಮರೀಚಿಕೆಯಾಗಿಯೇ ಉಳಿದಿದೆ. ಜನಪ್ರತಿನಿಧಿಗಳು ಜನರನ್ನು ರಾಜಕೀಯಕ್ಕೆ ಬಳಸಿಕೊಂಡು ಅಭಿವೃದ್ಧಿ ಹೊಂದಿದ್ದಾರೆ. ದುಬಾರಿ ನೀರಿನ ಬಾಟಲಿ ಖರೀದಿಸಿ ಬಳಸುತ್ತಾರೆ. ಆದರೆ, ಕುಡಿಯುವ ನೀರಿಗಾಗಿ ಪರದಾಡುತ್ತಿರುವ ಜನಸಾಮಾನ್ಯರ ಸಂಕಷ್ಟಗಳಿಗೆ ಪರಿಹಾರವೇ ಸಿಗುವುದಿಲ್ಲ. ಎತ್ತಿನಹೊಳೆ ಯೋಜನೆಯ ಅನುಕೂಲ ಬಯಲುಸೀಮೆಗೆ ಶೀಘ್ರವಾಗಿ ತಲುಪಲಿ.

ಕಿರಣ್, ದೊಡ್ಡಬಳ್ಳಾಪುರ

‘ಘಟಕದ ನೀರೂ ಶುದ್ಧವಲ್ಲ’



ಶುದ್ಧ ನೀರಿನ ಘಟಕಗಳ ಸ್ಥಾಪನೆ ಬಡವರು, ಗ್ರಾಮೀಣ ಜನರಿಗೆ ನೀರು ಪೂರೈಸುವ ಮಹತ್ವದ ಯೋಜನೆ. ಈ ಯೋಜನೆಯಡಿ ನಿರ್ಮಾಣವಾಗಿರುವ ಘಟಕಗಳಲ್ಲಿ ಹಲವು ಘಟಕಗಳು ಕೆಟ್ಟು ನಿಂತಿವೆ. ಕೆಲವು ಹೆಸರಿಗೆ ಮಾತ್ರ ಶುದ್ಧೀಕರಣ ಘಟಕವಾಗಿವೆ. ಅಲ್ಲಿಂದ ತರುವ ಹಾಗೂ ಬೋರ್‌ವೆಲ್‌ನಲ್ಲಿ ಬರುವ ನೀರಿಗೆ ಯಾವುದೇ ವ್ಯತ್ಯಾಸ ಇರುವುದಿಲ್ಲ. ಘಟಕದ ನೀರನ್ನು ಶುದ್ಧ ಎಂದು ಭಾವಿಸಿ, ಜನರು ಕಾಯಿಲೆಗಳಿಗೆ ಒಳಗಾಗುತ್ತಿದ್ದಾರೆ.

ಬಿ.ಎಸ್.ಚೈತ್ರಾ, ಚಿತ್ರದುರ್ಗ


‘ನೀರಿನ ಹೆಸರಿನಲ್ಲಿ ಲೂಟಿ’



ಸರ್ಕಾರ ಬಯಲುಸೀಮೆ ಪ್ರದೇಶದ ಜಿಲ್ಲೆಗಳಿಗೆ ನೀರಾವರಿ ಯೋಜನೆಗಳ ಮೂಲಕ ಶುದ್ಧ ನೀರು ಪೂರೈಸಬೇಕು. ಫ್ಲೋರೈಡ್‌ಯುಕ್ತ ನೀರಿನಿಂದ ಅದೆಷ್ಟೋ ಮಂದಿ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಗ್ರಾಮೀಣ ಭಾಗದಲ್ಲಿ ಶುದ್ಧ ನೀರಿನ ಘಟಕಗಳ ಹೆಸರಿನಲ್ಲಿ ಲೂಟಿ ನಡೆದಿದೆ. ಘಟಕಗಳಿದ್ದರೂ ನೀರು ಬರುತ್ತಿಲ್ಲ. ಹಳ್ಳಿಗಳ ಕುರಿತಂತೆ ಸರ್ಕಾರ, ಜನಪ್ರತಿನಿಧಿಗಳ ನಿರ್ಲಕ್ಷ್ಯ ಖಂಡನೀಯ.

ಹನುಮಂತ, ಹಂಪಿ

ಭವಿಷ್ಯವನ್ನು ಊಹಿಸುವ ಮೊದಲು ಸೃಷ್ಟಿಸುವ ಮನೋಭಾವ ಬೇಕು.



ಬಾಹ್ಯಾಕಾಶ ಅಧ್ಯಯನ ಪದವಿಗೆ ಅವಕಾಶ

ಮಹೇಶ್ ಎಚ್. ನಾಯಕ್

ಖಗೋಳ ವಿಜ್ಞಾನದ ಬಗ್ಗೆ ಆಸಕ್ತಿ ಇರುವವರಿಗೆ ಬಾಹ್ಯಾಕಾಶ ವಿಜ್ಞಾನದಲ್ಲಿ ಪದವಿ, ಸ್ನಾತಕೋತ್ತರ ಪದವಿ ಮತ್ತು ಡಾಕ್ಟರೇಟ್ ಪಡೆಯಲು ಭಾರತೀಯ ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೇಸ್ ಸೈನ್ಸ್ ಅಂಡ್ ಟೆಕ್ನಾಲಜಿ –ಐಐಎಸ್‌ಟಿ) ಅವಕಾಶ ಕಲ್ಪಿಸಿದೆ. ಇದು ಈ ವಿಷಯದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ನೀಡುವ ಭಾರತದ ಏಕೈಕ ಸ್ವಾಯತ್ತ ಸಂಸ್ಥೆಯೂ ಹೌದು ಎಂಬುದು ವಿಶೇಷ.

> ಐಐಎಸ್‌ಟಿ ಸಂಸ್ಥೆ ಖಗೋಳ ವಿಜ್ಞಾನದಲ್ಲಿ ಆಸಕ್ತಿಯಿರುವವರಿಗೆ ಪದವಿ, ಸ್ನಾತಕೋತ್ತರ ಪದವಿ, ಪಿಎಚ್‌ಡಿ ಮಾಡುವಂತಹ ಅವಕಾಶವನ್ನು ಒದಗಿಸಿದೆ. ನಿಗದಿಪಡಿಸಿದ ಅಂಕಗಳೊಂದಿಗೆ ಇಸ್ರೊ ಸಂಸ್ಥೆಯಲ್ಲಿ ಉದ್ಯೋಗವನ್ನೂ ಕಲ್ಪಿಸುತ್ತಿದೆ.

ಕೇಂದ್ರ ಬಾಹ್ಯಾಕಾಶ ಇಲಾಖೆ ವ್ಯಾಪ್ತಿಗೆ ಬರುವ ಐಐಎಸ್‌ಟಿಯನ್ನು 2007 ಕೇರಳದ ತಿರುವನಂತಪುರದಲ್ಲಿ ಪ್ರಾರಂಭಿಸಲಾಯಿತು. ಇಸ್ರೊ ಅಧ್ಯಕ್ಷರು ಈ ಐಐಎಸ್‌ಟಿ ಗೌರ್ನಿಂಗ್ ಕಮಿಟಿಯ ಅಧ್ಯಕ್ಷರಾಗಿರುತ್ತಾರೆ. ಇಸ್ರೊ ಹಾಗೂ ಡಿಆರ್‌ಡಿಒ ಮತ್ತಿತರ ಪ್ರತಿಷ್ಠಿತ ಸಂಸ್ಥೆಗಳಿಗೆ ಬೇಕಾದ ತಾಂತ್ರಿಕ ಕೌಶಲವುಳ್ಳ ಸಿಬ್ಬಂದಿಯನ್ನು ನೇಮಿಸಬೇಕೆಂಬ ಉದ್ದೇಶದಿಂದ ಐಐಎಸ್‌ಟಿ ಪ್ರಾರಂಭಿಸಲಾಗಿದೆ. ಉತ್ತಮ ಗುಣಮಟ್ಟದ ಬೋಧಕ ಸಿಬ್ಬಂದಿ,



ಅಂತರರಾಷ್ಟ್ರೀಯ ಗುಣಮಟ್ಟದ ಮೂಲ ಸೌಲಭ್ಯ, ಆಧುನಿಕ ಪ್ರಯೋಗಾಲಯವನ್ನು ಹೊಂದಿರುವ ಐಐಎಸ್‌ಟಿ ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯ ಪ್ರಕಟಿಸಿರುವ ಎಂಜಿನಿಯರಿಂಗ್ ಸಂಬಂಧಿತ ಎನ್‌ಐಆರ್‌ಎಫ್ ರ್‍ಯಾಂಕಿಂಗ್‌ನಲ್ಲಿ 40ನೇ ಸ್ಥಾನದಲ್ಲಿದೆ.

ಪದವಿ ಕೋರ್ಸ್‌ಗಳು: ಐಐಎಸ್‌ಟಿಯಲ್ಲಿ ಪೂರ್ಣಾವಧಿಯ ವಸತಿಯುತ (ರೆಸಿಡೆನ್ಶಿಯಲ್) ನಾಲ್ಕು ವರ್ಷ ಅವಧಿಯ ಬಿಟೆಕ್ ಪದವಿಯ ಜತೆಗೆ, ಐದು ವರ್ಷದ ದ್ವಿಪದವಿಯ ಬಿಟೆಕ್ + ಎಂಟೆಕ್ ಕೋರ್ಸ್ ಪ್ರವೇಶಕ್ಕೆ ಅವಕಾಶವಿದೆ. ಬಿಟೆಕ್‌ಗೆ ಪ್ರವೇಶ ಪಡೆಯಲು 10 + 2 ಪರೀಕ್ಷೆಯಲ್ಲಿ ಪಾಸಾದ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಶೇ 75 ರಷ್ಟು ಅಂಕ ಮತ್ತು ಪರಿಶಿಷ್ಟ ಜಾತಿ(ಎಸ್‌ಸಿ) ಮತ್ತು ಪರಿಶಿಷ್ಟ ವರ್ಗದ(ಎಸ್‌ಟಿ) ಅಭ್ಯರ್ಥಿಗಳು ಕನಿಷ್ಠ ಶೇ 65 ಅಂಕ ಪಡೆದಿರಬೇಕು. (2020-21ನೇ ಸಾಲಿನಲ್ಲಿ ಕೋವಿಡ್-19 ಕಾರಣದಿಂದಾಗಿ ಸಾಮಾನ್ಯ ಅರ್ಹತೆಯಲ್ಲಿ ಅಂಕದ ಮಾನದಂಡವನ್ನು ಕೈಬಿಟ್ಟು ಜೆಇಇ ಅಡ್ವಾನ್ಸ್‌ನಲ್ಲಿ ಗಳಿಸಿದ ಅಂಕವನ್ನು ಮಾತ್ರ ಆಯ್ಕೆಗೆ ಪರಿಗಣಿಸಲಾಗಿತ್ತು).

ಅಭ್ಯರ್ಥಿಯ ದ್ವಿತೀಯ ಪಿಯುಸಿಯೊಂದಿಗೆ ಎನ್‌ಟಿಎ ಆಯೋಜಿಸುವ ಜೆಇಇ ಅಡ್ವಾನ್ಸ್ ಪರೀಕ್ಷೆಯಲ್ಲಿ ಈ ಕೆಳಗೆ ನೀಡಿರುವಂತೆ ಕನಿಷ್ಠ ಅಂಕಗಳನ್ನು ಪಡೆದಿರಬೇಕು.

1. ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಜೆಇಇ ಅಡ್ವಾನ್ಸ್‌ನಲ್ಲಿ ಕನಿಷ್ಠ ಶೇ 16 ಅಂಕ ಗಳಿಸಬೇಕು. ಭೌತ, ಗಣಿತ ಮತ್ತು ರಸಾಯನಶಾಸ್ತ್ರ ವಿಷಯದಲ್ಲಿ ತಲಾ ಕನಿಷ್ಠ ಶೇ 14 ಅಂಕ ಗಳಿಸಬೇಕು.
2. ಹಿಂದುಳಿದ ವರ್ಗದ ವಿದ್ಯಾರ್ಥಿಗಳು, ಕನಿಷ್ಠ ಶೇ 14.4ರಷ್ಟು ಅಂಕವನ್ನು ಗಳಿಸಬೇಕು ಮತ್ತು ಭೌತ, ಗಣಿತ ಮತ್ತು ರಸಾಯನಶಾಸ್ತ್ರ ವಿಷಯದಲ್ಲಿ ಕನಿಷ್ಠ ಶೇ 3.6 ಅಂಕ ಗಳಿಸಬೇಕು.
3. ಪರಿಶಿಷ್ಟ ಜಾತಿ ಮತ್ತು ವರ್ಗ ಕನಿಷ್ಠ ಶೇ 8ರಷ್ಟು ಅಂಕವನ್ನು ಗಳಿಸಬೇಕು ಮತ್ತು ಭೌತ, ಗಣಿತ ಮತ್ತು ರಸಾಯನಶಾಸ್ತ್ರ ಪ್ರತಿ ವಿಷಯದಲ್ಲಿ ತಲಾ ಕನಿಷ್ಠ ಶೇ 2.00 ಅಂಕ ಗಳಿಸಿರಬೇಕು.

ಐಐಎಸ್‌ಟಿ ವೆಬ್‌ಸೈಟ್ ಮೂಲಕ ಪರೀಕ್ಷಾ ಶುಲ್ಕ ಪಾವತಿಸಿ, ಹೆಸರು ನೋಂದಾಯಿಸಿದ ಅಭ್ಯರ್ಥಿಗಳು ಮಾತ್ರ ಆಯ್ಕೆಗೆ ಅರ್ಹರಾಗುತ್ತಾರೆ. ಜೆಇಇ ಅಡ್ವಾನ್ಸ್ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ರ್‍ಯಾಂಕ್ ಪಟ್ಟಿಯನ್ನು ಮೀಸಲಾತಿ ಅನುಸಾರ ಪ್ರಕಟಿಸಲಾಗುತ್ತದೆ.

ಪದವಿ ಕೋರ್ಸ್‌ಗಳು

ಪದವಿಯಲ್ಲಿ ಮೂರು ವಿಭಾಗಗಳಿವೆ. ಒಟ್ಟು 154 ಸ್ಥಾನಗಳ ಭರ್ತಿಗೆ ಅವಕಾಶವಿದೆ. ಬಿಟೆಕ್ ಏರೋಸ್ಪೇಸ್‌ನಲ್ಲಿ 66, ಬಿಟೆಕ್ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್‌ನಲ್ಲಿ 66, ದ್ವಿಪದವಿಯ ಬಿಟೆಕ್ ಮತ್ತು ಎಂಟೆಕ್ ಫಿಸಿಕಲ್ ಸೈನ್ಸ್ / ಡ್ಯೂಯಲ್ ಡಿಗ್ರಿಯಲ್ಲಿ 22 ಸ್ಥಾನಗಳಿವೆ.

ವರ್ಗವಾರು ಮೀಸಲು

ಕೇಂದ್ರ ಸರ್ಕಾರದ ಮೀಸಲಾತಿ ನಿಯಮಾನುಸಾರವಾಗಿ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಶೇ 10, ಪರಿಶಿಷ್ಟ ಜಾತಿಯವರಿಗೆ ಶೇ 15, ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ಶೇ 7.5, ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ಶೇ 27ರಷ್ಟು ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ಶೇ 5ರಷ್ಟು ಸ್ಥಾನಗಳನ್ನು ಮೀಸಲಿಡಲಾಗಿದೆ.

ಸ್ನಾತಕೋತ್ತರ ಪದವಿ

ಐಐಎಸ್‌ಟಿಯ ಈ ಪದವಿಯಲ್ಲಿ ಪವರ್ ಎಲೆಕ್ಟ್ರಾನಿಕ್ಸ್, ಜಿಯೊ ಇನ್‌ಫಾರ್ಮೆಟಿಕ್ಸ್, ಆಪ್ಟಿಕಲ್ ಎಂಜಿನಿಯರಿಂಗ್, ಸ್ಟ್ರಕ್ಚರ್ ಅಂಡ್ ಡಿಸೈನ್, ವಿಎಲ್‌ಎಸ್‌ಐ ಅಂಡ್ ಮೈಕ್ರೋಸಿಸ್ಟಂ, ಕಂಟ್ರೋಲ್ ಸಿಸ್ಟಂ, ಏರೋಡೈನಾಮಿಕ್ಸ್ ಅಂಡ್ ಫ್ಲೈಟ್ ಮೆಕ್ಯಾನಿಸಂ ಮೊದಲಾದ 16 ವಿವಿಧ ಸ್ಪೆಷಲೈಸೇಷನ್ ಕೋರ್ಸ್ ಕಲಿಯಲು ಅವಕಾಶವಿರುತ್ತದೆ.

ವಯಸ್ಸಿನ ಅರ್ಹತೆ

ಅಭ್ಯರ್ಥಿಯು ಭಾರತೀಯ ಪ್ರಜೆಯಾಗಿರಬೇಕು. ಕನಿಷ್ಠ 32 ವರ್ಷದೊಳಗಿರಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ವಯೋಮಿತಿಯ ಸಡಿಲಿಕೆ ಇದೆ.

ಶೈಕ್ಷಣಿಕ ಅರ್ಹತೆ

ಆಯಾ ಶಾಖೆ (ಬ್ರಾಂಚ್)ಗಳಿಗೆ ನಿರ್ದಿಷ್ಟಪಡಿಸಲಾದ ವಿಷಯದಲ್ಲಿ ಪದವಿ ಪೂರ್ಣಗೊಳಿಸಿರಬೇಕು. ಸಾಮಾನ್ಯ ವರ್ಗ ಹಾಗೂ ಹಿಂದುಳಿದ ವರ್ಗದ ಅಭ್ಯರ್ಥಿಗಳು ಶೇಕಡ 60 ರಷ್ಟು ಅಂಕ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಪದವಿಯಲ್ಲಿ ಶೇ 55 ರಷ್ಟು ಅಂಕವನ್ನು ಗಳಿಸಿರಬೇಕು. ಅದರೊಂದಿಗೆ ಗೇಟ್ (GATE) ಪ್ರವೇಶ ಪರೀಕ್ಷೆಯಲ್ಲಿ ಅರ್ಹತಾ ಅಂಕವನ್ನು ಗಳಿಸಿರಬೇಕು. ಗೇಟ್ ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಅಂಕದ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ಉದ್ಯೋಗಾವಕಾಶ

ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಸಿಜಿಪಿಎ 10ಕ್ಕೆ 7.5 ಕ್ಕಿಂತ ಹೆಚ್ಚಿನ ಅಂಕಗಳಿಸಿದವರಿಗೆ ನೇರವಾಗಿ ಇಸ್ರೊ ಸಂಸ್ಥೆಯಲ್ಲಿ ವಿಜ್ಞಾನಿಯಾಗಿ ಉದ್ಯೋಗ ಅವಕಾಶ ನೀಡಲಾಗುತ್ತದೆ. ಅಲ್ಲದೆ ಎಚ್‌ಎಎಲ್, ಬಿಎಚ್‌ಇಎಲ್ ಸೇರಿದಂತೆ ಸರ್ಕಾರಿ ಸ್ವಾಮ್ಯದ ಹಾಗೂ ವಿವಿಧ ಖಾಸಗಿ ಕಂಪನಿಗಳಲ್ಲಿಯೂ ಉದ್ಯೋಗಕ್ಕೆ ಸೇರುವ ಅವಕಾಶವಿರುತ್ತದೆ.

ಖಗೋಳ ವಿಜ್ಞಾನದ ಬಗ್ಗೆ ಕುತೂಹಲ ಹೊಂದಿದವರು ತಮ್ಮ ಆಸಕ್ತಿದಾಯಕ ವಿಷಯದಲ್ಲಿ ಪದವಿ ಗಳಿಸಲು ಹಾಗೂ ತಾವು ಪದವಿ ಪಡೆದ ವಿಷಯದಲ್ಲಿ ವೃತ್ತಿ ಕೈಗೊಳ್ಳುವ ವಿಶೇಷ ಅವಕಾಶವನ್ನು ಐಐಎಸ್‌ಟಿ ಒದಗಿಸುತ್ತದೆ.

ಹೆಚ್ಚಿನ ಮಾಹಿತಿಗಾಗಿ admission@iist.ac.in ಗೆ ಸಂಪರ್ಕಿಸಬಹುದು.

ಪಿಎಚ್‌ಡಿ ಪ್ರವೇಶ

ಸಾಮಾನ್ಯವಾಗಿ ಪ್ರತಿ ವರ್ಷ ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಪಿ.ಎಚ್.ಡಿ ಪ್ರವೇಶಕ್ಕಾಗಿ ಬಾಹ್ಯಾಕಾಶ ಸಂಬಂಧಿತ ಕೋರ್ಸ್‌ಗಳನ್ನು ಅಧ್ಯಯನ ಮಾಡಿದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗುತ್ತದೆ. ಅಭ್ಯರ್ಥಿಯು ಭಾರತೀಯ ನಾಗರೀಕನಾಗಿದ್ದು, 35 ವರ್ಷದೊಳಗಿರಬೇಕು. ಸ್ನಾತಕೋತ್ತರ ಪದವಿಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರಬೇಕು. ಜೊತೆಯಲ್ಲಿ ಯು.ಜಿ.ಸಿ/ ಎನ್‌ಇ.ಟಿ/ಸಿಎಸ್‌ಐಆರ್/ ಜೆಇಎಸ್‌ಟಿ ಯಲ್ಲಿ ಅರ್ಹತಾದಾಯಕ ಅಂಕವನ್ನು ಗಳಿಸಿರಬೇಕು.

ವಿದ್ಯಾರ್ಥಿ ವೇತನ ಕೈಪಿಡಿ

ಐಐಟಿ ಬಿಎಚ್‌ಯು ವಾರಾಣಸಿ ಡಿಪಾರ್ಟ್‌ಮೆಂಟ್ ಆಫ್ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಜೂನಿಯರ್ ರಿಸರ್ಚ್ ಫೆಲೋಶಿಪ್ 2022

- **ವಿವರ:** ಐಐಟಿ ಬಿಎಚ್‌ಯು ವಾರಾಣಸಿ ಡಿಪಾರ್ಟ್‌ಮೆಂಟ್ ಆಫ್ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಜೂನಿಯರ್ ರಿಸರ್ಚ್ ಫೆಲೋಶಿಪ್ 2022, ಬಿಇ, ಬಿಟೆಕ್ ಅಥವಾ ಎಂಇ, ಎಂಟೆಕ್ ಪದವಿ ಪಡೆದವರು ಈ ವಿದ್ಯಾರ್ಥಿವೇತನಕ್ಕೆ ಅರ್ಹರು.
- **ಅರ್ಹತೆ:** ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಶನ್ ಎಂಜಿನಿಯರಿಂಗ್‌ನಲ್ಲಿ ಕನಿಷ್ಠ ಶೇ 55 ಅಂಕಗಳು ಮತ್ತು ಗೇಟ್ ಪರೀಕ್ಷೆ ತೇರ್ಗಡೆ ಹೊಂದಿ ಬಿಇ, ಬಿಟೆಕ್ ಪದವಿ ಅಥವಾ ಆರ್‌ಎಫ್ ಅಂಡ್ ಮೈಕ್ರೋವೇವ್ ಎಂಜಿನಿಯರಿಂಗ್‌ನಲ್ಲಿ ಕನಿಷ್ಠ ಶೇ 55 ಅಂಕಗಳು ಮತ್ತು ಗೇಟ್ ಅರ್ಹತೆಯೊಂದಿಗೆ ಎಂಇ, ಎಂಟೆಕ್ ಪದವಿ ಪಡೆದಿರುವ 28 ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಭ್ಯರ್ಥಿಗಳಿಗೆ ಫೆಲೋಶಿಪ್ ಮುಕ್ತವಾಗಿದೆ.
- **ಆರ್ಥಿಕ ನೆರವು:** ತಿಂಗಳಿಗೆ ₹ 31,000 ಹಾಗೂ ಮನೆ ಬಾಡಿಗೆ ಭತ್ಯೆಯ ಮೇಲೆ ಶೇ 16 ರಷ್ಟನ್ನು ನೀಡಲಾಗುತ್ತದೆ.
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಜನವರಿ 08, 2022
- **ಅರ್ಜಿ ಸಲ್ಲಿಕೆ ವಿಧಾನ:** ತೊಟ್ಟಪ್ಪನ್, ಪ್ರಿನ್ಸಿಪಾಲ್ ಇನ್ವೆಸ್ಟಿಗೇಟರ್, ಡಿಆರ್‌ಡಿಓ ಸ್ಪಾನ್ಸರ್ಡ್ ರಿಸರ್ಚ್ ಪ್ರಾಜೆಕ್ಟ್, ಡಿಪಾರ್ಟ್‌ಮೆಂಟ್ ಆಫ್ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್, ಐಐಟಿಬಿಎಚ್‌ಯು, ವಾರಾಣಸಿ – 221005 ಯುಪಿ
- **ಹೆಚ್ಚಿನ ಮಾಹಿತಿಗೆ:** www.b4s.in/praja/VEF2

ಎಚ್‌ಡಿಎಫ್‌ಸಿ ಲಿಮಿಟೆಡ್ಸ್ ಬಡ್ತೆ ಕದಮ್ ಸ್ಕಾಲರ್‌ಶಿಪ್ 2021-22

- **ವಿವರ:** ಎಚ್‌ಡಿಎಫ್‌ಸಿ ಲಿಮಿಟೆಡ್ಸ್ ಬಡ್ತೆ ಕದಮ್ ಸ್ಕಾಲರ್‌ಶಿಪ್ – 2021-22, 9 ನೇ ತರಗತಿಯಿಂದ ಪದವಿ ಹಂತದವರೆಗಿನ (ಸಾಮಾನ್ಯ ಮತ್ತು ವೃತ್ತಿಪರ) ವಿಶೇಷವಾಗಿ ಕೋವಿಡ್-19 ನಿಂದ ಪ್ರಭಾವಿತರಾದ ವಿದ್ಯಾರ್ಥಿಗಳಿಗೆ ತಮ್ಮ ಶಿಕ್ಷಣವನ್ನು ಮುಂದುವರಿಸಲು ಹಣಕಾಸಿನ ನೆರವು ನೀಡುವುದು ಈ ವಿದ್ಯಾರ್ಥಿವೇತನದ ಉದ್ದೇಶ.
- **ಅರ್ಹತೆ:** ಕೋವಿಡ್– 19 ನಿಂದ ಪೋಷಕರು ಅಥವಾ ಕುಟುಂಬದಲ್ಲಿ ದುಡಿಯುವ ಸದಸ್ಯರನ್ನು ಕಳೆದುಕೊಂಡಿರುವ ಭಾರತೀಯ ವಿದ್ಯಾರ್ಥಿಗಳು ಈ ವಿದ್ಯಾರ್ಥಿವೇತನಕ್ಕೆ ಅರ್ಹರು. ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 6 ಲಕ್ಷ ಮೀರಿರಬಾರದು.
- **ಆರ್ಥಿಕ ನೆರವು:** ₹ 1 ಲಕ್ಷದವರೆಗೆ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಫೆಬ್ರುವರಿ 15, 2022
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್ ಮೂಲಕ
- **ಹೆಚ್ಚಿನ ಮಾಹಿತಿಗೆ:** www.b4s.in/praja/HTPF1

ಕಡಿಮೆ ಶುಲ್ಕದ ಏರ್‌ಕ್ರಾಫ್ಟ್ ಡಿಸೈನ್ ಕೋರ್ಸ್

ಕೋರ್ಸ್ ಕಾರ್ನರ್

ಗುರುರಾಜ್ ಎಸ್. ದಾವಣಗೆರೆ

ವಿಮಾನ ಪ್ರಯಾಣ ಮಾಡಬಯಸುವ ಪ್ರತಿಯೊಬ್ಬರಿಗೂ ‘ಅಷ್ಟೊಂದು ಜನರನ್ನು ಹೊತ್ತ ವಿಮಾನ ಅದು ಹೇಗೆ ರೆಕ್ಕೆ ತೆರೆದ ಹಕ್ಕಿಯ ಹಾಗೆ ನಿರಂತರ ಹಾರುತ್ತದೆ’ ಎಂಬ ಕುತೂಹಲ ಸದಾ ಇರುತ್ತದೆ. ಮೊದಲ ಬಾರಿಗೆ ಪ್ರಯಾಣಿಸುವವರಂತೂ ಅದು ಟೇಕ್ ಆಫ್ ಆಗುವಾಗ, ಲ್ಯಾಂಡ್ ಆಗುವಾಗ ಜೀವ ಕೈಯಲ್ಲಿ ಹಿಡಿದು ಕೂತಿರುತ್ತಾರೆ.

ಸಾಮಾನ್ಯವಾಗಿ ದೇಶೀಯ ವಿಮಾನಗಳು ಏರಿಳಿಯುವಾಗ ಟರ್ಬುಲೆನ್ಸ್ ಹೆಚ್ಚು. ಆದರೆ ವಿದೇಶಿ ಕಂಪನಿಯ ವಿಮಾನಗಳ ಏರಿಳಿತ ನಯವಾಗಿರುತ್ತದೆ. ಈ ವ್ಯತ್ಯಾಸಕ್ಕೆ ವಿಮಾನಗಳಲ್ಲಿರುವ ಅತ್ಯುತ್ತಮ ವಿನ್ಯಾಸವೇ ಕಾರಣ ಎನ್ನುತ್ತಾರೆ ತಜ್ಞರು.

ಇಂಥ ವಿನ್ಯಾಸವೂ ಸೇರಿದಂತೆ, ವಿಮಾನಯಾನ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಗಳಾಗುತ್ತಿವೆ. ಈಗ ಪ್ರಯಾಣ ದುದ್ದಕ್ಕೂ ಸುಖಾನುಭವ ಮತ್ತು ಭದ್ರತೆಯ ಭಾವ ನೀಡುವ ಸಾಮಾನ್ಯ ವಿಮಾನಗಳಿಂದ ಹಿಡಿದು ಎರಡಂತಸ್ತಿನ ಐಶಾರಾಮಿ ವಿಮಾನಗಳೂ ಆಕಾಶದಲ್ಲಿ ಹಾರಾಡುತ್ತಿವೆ. ಇನ್ನೇನು ಚಾಲಕರಿಲ್ಲದ ಆಟೊಪೈಲಟ್ ವಿಮಾನಗಳೂ ಬರಲಿವೆ. ಅಂಥ ವಿಮಾನಗಳ ವಿನ್ಯಾಸ ಮಾಡುವುದು ಹೇಗೆ ಎನ್ನುವುದನ್ನು ಕಲಿಯಲು ಕೇಂದ್ರ ಸರ್ಕಾರ (SWAYAM – Study Webs of Active – Learning for Young Aspiring Minds) ಆನ್‌ಲೈನ್ ಕೋರ್ಸ್ ಪ್ರಾರಂಭಿಸಿದೆ.

ವಿದ್ಯಾರ್ಹತೆ: ಅಂಗೀಕೃತ ವಿವಿಯಲ್ಲಿ ಎಂಜಿನಿಯರಿಂಗ್, ಪದವಿ, ಸ್ನಾತಕೋತ್ತರ ಪದವಿ ಹಾಗೂ ಪಿಎಚ್‌ಡಿ ಅಧ್ಯಯನ ಕೈಗೊಂಡಿರುವ ವಿದ್ಯಾರ್ಥಿಗಳು ಈ ಕೋರ್ಸ್ ಕಲಿಯಲು ಅರ್ಹರು.

ಅವಧಿ: 12 ವಾರಗಳು

ಪ್ರಾರಂಭ: 24 ಜನವರಿ 2022

ಪರೀಕ್ಷೆ: 23 ಏಪ್ರಿಲ್ 2022

ದಾಖಲಾತಿಗೆ ಕೊನೆಯ ದಿನಾಂಕ: 31 ಜನವರಿ 2022

ಪರೀಕ್ಷಾ ಶುಲ್ಕ: ₹1,000

ಏರೋಸ್ಪೇಸ್ ಎಂಜಿನಿಯರಿಂಗ್ ಮತ್ತು ಫ್ಲೈಟ್ ಮೆಕಾನಿಕ್ಸ್ ಶಾಖೆಗಳಡಿ ಬರುವ ಈ ಕೋರ್ಸ್‌ನಲ್ಲಿ ಒಟ್ಟು 12 ಮಾಡ್ಯೂಲ್‌ಗಳಿವೆ. ಆನ್‌ಲೈನ್ ಕೋರ್ಸ್ ಕಲಿಕೆಗೆ ಯಾವುದೇ ಶುಲ್ಕವಿರುವುದಿಲ್ಲ. ಎಂಜಿನಿಯರಿಂಗ್ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ 3 ಕ್ರೆಡಿಟ್ ಪಾಯಿಂಟ್ ಸಿಗುತ್ತವೆ. ಡಿಆರ್‌ಡಿಓ, ಎಚ್‌ಎಎಲ್, ಬೋಯಿಂಗ್, ಏರ್‌ಬಸ್, ಬೆಲ್, ಮೆಕ್‌ಡೊನೆಲ್ ಡೌಗ್ಲಸ್, ಯುಎವಿ ಫ್ಯಾಕ್ಟರಿ, ಲಾಕ್‌ಹೀಡ್ ಮಾರ್ಟಿನ್ ಕಂಪನಿಗಳು ಈ ಕೋರ್ಸ್‌ಗೆ ಮಾನ್ಯತೆ ನೀಡಿ ಉದ್ಯೋಗಾವಕಾಶ ಕಲ್ಪಿಸುತ್ತವೆ.

ಪ್ರಯಾಣಿಕ ಸುರಕ್ಷತೆ, ಪೇಲೋಡ್, ಗಾತ್ರ, ಇಂಧನ ಸರಬರಾಜು ವ್ಯವಸ್ಥೆ, ಪ್ರೊಪೆಲ್ಶನ್, ದೌರ್ಬಲ್ಯ, ಸ್ಥಿರತೆ, ನಿಯಂತ್ರಣ ಮತ್ತು ಸುಲಭ ಚಾಲನಾ ತಂತ್ರಗಳಿಗೆ ಸಂಬಂಧಿಸಿದಂತೆ ಅನೇಕ ವಿಷಯಗಳನ್ನು ಈ ಕೋರ್ಸ್‌ನಲ್ಲಿ ಕಲಿಸಲಾಗುತ್ತದೆ. ಒಟ್ಟು 12 ಅಸೈನ್‌ಮೆಂಟ್ ಗಳಿರುತ್ತವೆ. ₹1,000 ಪರೀಕ್ಷಾ ಶುಲ್ಕ ಭರಿಸಿ, ಯಾವುದಾದರೂ ಆಯ್ದ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆಯಬೇಕು. ಪರೀಕ್ಷೆಯ ಅವಧಿ ಮೂರು ಗಂಟೆಗಳು. ಕೋರ್ಸ್ ಪಾಸಾದ ನಂತರ, ಐಐಟಿ ಕಾನ್ಪುರ ಮತ್ತು NPTEL (National Program on Technology Enhanced Learning) ಗಳು ಜಂಟಿಯಾಗಿ ಪ್ರಮಾಣ ಪತ್ರವನ್ನು ನೀಡುತ್ತವೆ.

ಕೋರ್ಸ್ ಕುರಿತ ಹೆಚ್ಚಿನ ಮಾಹಿತಿಗೆ ಈ ಲಿಂಕ್ ನೋಡಿ: **https://onlinecourses.nptel.ac.in**



ಬಿಟೆಕ್ (ಸಿಎಸ್) ಮತ್ತು ಬಿಸಿಎ/ ಎಂಸಿಎ ನಡುವಿನ ವ್ಯತ್ಯಾಸಗಳೇನು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

- **1. ಬಿಎಸ್‌ಸಿ (ಸಿಎಸ್), ಬಿಸಿಎ ಮತ್ತು ಎಂಸಿಎ ಕೋರ್ಸ್‌ಗಳಲ್ಲೂ ಕಂಪ್ಯೂಟರ್ ವಿಜ್ಞಾನ (ಸಿಎಸ್), ಮಾಹಿತಿ ವಿಜ್ಞಾನ (ಐಎಸ್) ವಿಷಯಗಳನ್ನು ಕಲಿಸಲಾಗುತ್ತದೆ. ಹಾಗಾಗಿ ಈ ಕೋರ್ಸ್‌ಗಳಿಗೂ ಎಂಜಿನಿಯರಿಂಗ್ (ಸಿಎಸ್/ಐಎಸ್) ಕೋರ್ಸ್‌ಗಳಿಗೂ ಇರುವ ವ್ಯತ್ಯಾಸಗಳೇನು?**

ಕಿರಣ್ ರಾಜ್, ಊರು ತಿಳಿಸಿಲ್ಲ.

ಎಂಜಿನಿಯರಿಂಗ್ (ಸಿಎಸ್/ಐಎಸ್), ಬಿಎಸ್‌ಸಿ (ಸಿಎಸ್), ಬಿಸಿಎ ಮತ್ತು ಎಂಸಿಎ ಕೋರ್ಸ್‌ಗಳಲ್ಲಿ ಕಲಿಸುವ ಮೂಲ ವಿಷಯ ಒಂದೇ ಆದರೂ ವ್ಯತ್ಯಾಸಗಳಿವೆ.

ಎಂಜಿನಿಯರಿಂಗ್ ಕೋರ್ಸ್‌ಗಳು ಕಂಪ್ಯೂಟರ್ ವಿಜ್ಞಾನದ ತಾಂತ್ರಿಕತೆಯತ್ತ ಹೆಚ್ಚು ಕೇಂದ್ರೀಕೃತವಾಗಿರುತ್ತದೆ. ಮೊದಲ ಎರಡು ಸೆಮಿಸ್ಟರ್‌ಗಳಲ್ಲಿ ಮೂಲ ಎಂಜಿನಿಯರಿಂಗ್ ಕೋರ್ಸ್‌ಗಳ ವಿಷಯಸೂಚಿಯಿರುತ್ತದೆ. ಮೂರನೇ ಸೆಮಿಸ್ಟರ್‌ನಿಂದ ನೀವು ಆಯ್ಕೆ ಮಾಡಿರುವ ವಿಷಯದ ಕಲಿಕೆ ಪ್ರಾರಂಭವಾಗುತ್ತದೆ.

ಎಂಸಿಎ ಕೋರ್ಸ್, ಕಂಪ್ಯೂಟರ್ ವಿಜ್ಞಾನದ ಸಿದ್ಧಾಂತಗಳು ಮತ್ತು ಅಪ್ಲಿಕೇಷನ್ಸ್ ಕುರಿತು ಹೆಚ್ಚು ಕೇಂದ್ರೀಕೃತವಾಗಿರುತ್ತವೆ. ಎಂಸಿಎ ಕೋರ್ಸ್ ಅರ್ಹತೆಗೆ ಯಾವುದಾದರೂ ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ಪದವಿ ಅಥವಾ ಪಿಯುಸಿ ಪರೀಕ್ಷೆಯಲ್ಲಿ ಗಣಿತವನ್ನು ಓದಿರಬೇಕು. ಬಿಎಸ್‌ಸಿ (ಸಿಎಸ್) ಅಥವಾ ಬಿಸಿಎ ನಂತರ ಎಂಸಿಎ ಮಾಡುವುದರಿಂದ ಕಂಪ್ಯೂಟರ್ ವಿಜ್ಞಾನದ ಅರಿವು, ಪರಿಣತಿ ಸ್ವಲ್ಪ ಮಟ್ಟಿಗಿದ್ದು ಎಂಸಿಎ ಕೋರ್ಸ್ ಸುಲಭವಾಗುತ್ತದೆ. ಎಂಜಿನಿಯರಿಂಗ್ ಮಾಡಲು ನಾಲ್ಕು ವರ್ಷಗಳು ಬೇಕಾದರೆ, ಪದವಿ ಕೋರ್ಸ್ ನಂತರ ಎಂಸಿಎ ಮಾಡಲು ಐದು ವರ್ಷಗಳಾಗುತ್ತವೆ. ಉದ್ಯಮ ವಲಯದಲ್ಲಿ ಸಾಮಾನ್ಯವಾಗಿ ಹೆಚ್ಚಿನ ಮಹತ್ವವನ್ನು ಎಂಜಿನಿಯರಿಂಗ್ ಪದವಿಗೆ ನೀಡುವುದು ಸಾಮಾನ್ಯ.

ಒಟ್ಟಾರೆ ಹೇಳುವುದಾದರೆ, ಪಿಯುಸಿ ನಂತರ ಎಂಜಿನಿಯರಿಂಗ್ ಮಾಡುವುದು ಉತ್ತಮ ಆಯ್ಕೆ. ಆದರೆ, ಈಗಾಗಲೇ ಪದವಿ ಕೋರ್ಸ್ ಮಾಡುತ್ತಿರುವ ವಿದ್ಯಾರ್ಥಿಗಳು ಎಂಸಿಎ ಮಾಡಿ ಎಂಜಿನಿಯರಿಂಗ್ ಕೋರ್ಸ್‌ಗೆ ಸರಿಸಮಾನ ಎನ್ನಬಹುದಾದ ತಜ್ಞತೆಯನ್ನು ಪಡೆದುಕೊಳ್ಳಬಹುದು.

- **2. ನಾನು ಡಿಪ್ಲೊಮಾ (ಅನಿಮೇಷನ್) ಮುಗಿಸಿ ನಂತರ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿದ್ದೇನೆ. ಈಗ ನನಗೆ ಬಿಎಸ್‌ಸಿ ಮಾಡುವ ಆಸೆ; ಆದರೆ ಮನೆಯಲ್ಲಿ ಒಪ್ಪುತ್ತಿಲ್ಲ. ಕೆಲಸಕ್ಕೆ ಸೇರೋಣವೆಂದರೆ, ಅಷ್ಟಾಗಿ ಇಂಗ್ಲಿಷ್ ಬರುವುದಿಲ್ಲ. ದಯವಿಟ್ಟು ಪರಿಹಾರ ತಿಳಿಸಿ.**

ಮೇಘಶ್ರೀ, ಬೆಂಗಳೂರು.

ಮುಂದೆ ವಿದ್ಯಾಭ್ಯಾಸವನ್ನು ಮುಂದುವರೆಸಬೇಕೇ ಅಥವಾ ಕೆಲಸಕ್ಕೆ ಸೇರಬೇಕೇ ಎನ್ನುವುದನ್ನು ನಿರ್ಧರಿಸಿ, ಅದರಂತೆ ಮುಂದುವರಿಯಿರಿ. ಇಂಗ್ಲಿಷ್ ಕಲಿಕೆ ಕುರಿತ ಮಾರ್ಗದರ್ಶನವನ್ನು ಕಳೆದ ತಿಂಗಳ 27ನೇ ತಾರೀಖಿನ ಪ್ರಶ್ನೋತ್ತರದಲ್ಲಿ ಉತ್ತರಿಸಲಾಗಿದೆ. ದಯವಿಟ್ಟು ಓದಿಕೊಳ್ಳಿ.

- **3. ನಾನು ಈಗ ಪೊಲೀಸ್ ಇಲಾಖೆಯಲ್ಲಿ ಕಾನ್‌ಸ್ಟೇಬಲ್. ಬಿಎಸ್‌ಸಿ ಮುಗಿಸಿದ್ದು, ಶಿಕ್ಷಕನಾಗುವ ಆಸೆ. ಮುಂದಿನ ದಾರಿ ತಿಳಿಸಿ.**


ದೇವರಾಜ್, ಊರು ತಿಳಿಸಿಲ್ಲ.

ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರಾಗಲು ಪದವಿಯ ನಂತರ ಬಿಇಡಿ ಮಾಡಿ ಟಿಇಟಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಇದಕ್ಕೂ ಮುನ್ನ, ಖಾಸಗಿ ಶಾಲೆಗಳಲ್ಲಿ ಅಥವಾ ಟ್ಯೂಷನ್ ಕೇಂದ್ರಗಳಲ್ಲಿ ಶಿಕ್ಷಕರಾಗಲು ಪ್ರಯತ್ನಿಸಿ, ಈ ವೃತ್ತಿ ನಿಮಗೆ ಸರಿಹೊಂದುವುದೇ ಎಂದು ಪರೀಕ್ಷಿಸಿ.

- **4. ನಾನು ಬಿಕಾಂ ಪದವಿ ಮುಗಿಸಿದ್ದೇನೆ. ಪಿಎಸ್‌ಐ ಆಗಬೇಕು ಅಂತ ಅಂದುಕೊಂಡಿದ್ದೇನೆ ಹಾಗೂ ಅದರ ತಯಾರಿಯ ಜೊತೆಗೆ ಎಂಕಾಂ ಮಾಡಬೇಕು ಎಂದುಕೊಂಡಿದ್ದೇನೆ. ಈ ನಿರ್ಧಾರ ಸರಿಯೇ ಅಥವಾ ನನ್ನ ಪಿಎಸ್‌ಐ ಆಗುವ ಗುರಿಗೆ ಅಡ್ಡವಾಗಲಿದೆಯೇ? ಎಂಕಾಂ ಮಾಡುವುದರಿಂದ ಬೇರೆ ಯಾವ ಅವಕಾಶಗಳು ಸಿಗಲಿವೆ, ದಯಮಾಡಿ ತಿಳಿಸಿ.**

ಶಿವಕುಮಾರ್, ಊರು ತಿಳಿಸಿಲ್ಲ.

ವೃತ್ತಿಯೋಜನೆಯಂತೆ ಪಿಎಸ್‌ಐ ಪರೀಕ್ಷೆಗೆ ತಯಾರಾಗುತ್ತಿರುವ ನಿಮಗೆ ಎಂಕಾಂ ಅಗತ್ಯವಿದೆಯೇ ಎಂದು ಇನ್ನೊಮ್ಮೆ ಯೋಚಿಸಿ. ಆದರೆ, ಎರಡನ್ನೂ ಮಾಡಬೇಕೆನಿಸಿದರೆ ಸಮಯವನ್ನು ನಿಭಾಯಿಸುವುದು ಕಷ್ಟವೇನಲ್ಲ. ಎಂಕಾಂ ನಂತರ ಬ್ಯಾಂಕಿಂಗ್, ಇನ್ಶೂರೆನ್ಸ್, ಇನ್ವೆಸ್ಟ್‌ಮೆಂಟ್ಸ್, ಕಸ್ಟಮ್ಸ್, ಅಕೌಂಟಿಂಗ್, ಟ್ಯಾಕ್ಸೇಷನ್ ಇತ್ಯಾದಿ ವಲಯಗಳಲ್ಲಿ ಉದ್ಯೋಗಾವಕಾಶಗಳಿವೆ. ಸಮಯದ ನಿರ್ವಹಣೆ ಕುರಿತ ಹೆಚ್ಚಿನ ಮಾರ್ಗದರ್ಶನಕ್ಕೆ ಈ ವೀಡಿಯೊ ವೀಕ್ಷಿಸಿ: https://www.youtube.com/watch?v=AnAbzbLsFvM



- **5. ನಾನು ಬಿಎ ಓದುತ್ತಿದ್ದೇನೆ. ಬ್ಯಾಂಕ್ ಕೆಲಸಗಳ ಬಗ್ಗೆ ತಿಳಿಸಿ.**

ಅರ್ಪಿತಾ ಆರ್, ಊರು ತಿಳಿಸಿಲ್ಲ.

- **6. ನಾನು ಮೊದಲನೇ ವರ್ಷದ ಬಿಎ ಓದುತ್ತಿದ್ದೇನೆ. ನನಗೆ ಬ್ಯಾಂಕ್‌ನಲ್ಲಿ ಕೆಲಸ ಮಾಡಲು ಇಷ್ಟ. ಆದರೆ ಬಿಎ ನಂತರ ಬ್ಯಾಂಕ್‌ನಲ್ಲಿ ಕೆಲಸ ಮಾಡಲು ಸಾಧ್ಯವಾಗುವುದೇ? ಈ ಬಗ್ಗೆ ದಯವಿಟ್ಟು ತಿಳಿಸಿಕೊಡಿ.**

ರಕ್ಷಿತ ರವಿಚಂದ್ರ, ಮೈಸೂರು

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಆಸಕ್ತಿಯಿದ್ದರೆ, ಬಿಎ ಪದವಿಯ ನಂತರ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕಿಂಗ್ ಪರ್ಸನಲ್ ಸೆಲೆಕ್ಷನ್ (ಐಬಿಪಿಎಸ್) ನಡೆಸುವ ಪ್ರೊಬೆಷನರಿ ಆಫೀಸರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬ್ಯಾಂಕಿಂಗ್ ವೃತ್ತಿಯನ್ನು ಅನುಸರಿಸಬಹುದು. ಐಬಿಪಿಎಸ್ ಪರೀಕ್ಷೆಯಲ್ಲಿ ಸಾಮಾನ್ಯವಾಗಿ ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಮತ್ತು ವೈಯಕ್ತಿಕ ಸಂದರ್ಶನದಂತೆ ಮೂರು ಹಂತಗಳಿರುತ್ತವೆ. ಬಿಎ ಪದವಿಯನ್ನು ಮುಗಿಸುವುದರೊಳಗೆ ಬ್ಯಾಂಕಿಂಗ್ ಮತ್ತು ಫೈನಾನ್ಸ್ ಸಂಬಂಧಿತ ಅರೆಕಾಲಿಕ ಕೋರ್ಸ್‌ಗಳನ್ನು ಮಾಡುವುದರಿಂದ ಈ ಕ್ಷೇತ್ರದಲ್ಲಿನ ಸವಾಲುಗಳು ಮತ್ತು ಅವಕಾಶಗಳ ಅರಿವಾಗಿ ನೇಮಕಾತಿ ಪ್ರಕ್ರಿಯೆಯಲ್ಲಿ ನೆರವಾಗುತ್ತದೆ. ಹೆಚ್ಚಿನ ವಿವರಗಳಿಗಾಗಿ ಗಮನಿಸಿ: https://ibps.in/

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.



ಸುಭಾಷಿತ

ಕಟ್ಟಡದ ಭದ್ರತೆಯಿರುವುದು ಕಣ್ಮರೆಯ ಅಡಿಪಾಯದಲ್ಲಿ,
ಮೆರೆದು ಕಂಗೊಳಿಸುವ ಗೋಪುರದಲ್ಲಿ ಅಲ್ಲ.
-ಕೆ.ಎಸ್.ನಿಸಾರ್ ಅಹಮದ್

ಚುನಾವಣಾ ಬಾಂಡ್: ಸಿಂಧುತ್ವದ ಪ್ರಶ್ನೆ ತ್ವರಿತವಾಗಿ ಬಗೆಹರಿಯಲಿ

ಸಂವಿಧಾನ ಪೀಠದ ಮುಂದೆ ದೀರ್ಘ ಕಾಲದಿಂದ ಬಾಕಿ ಇರುವ ಮಹತ್ವದ ಪ್ರಕರಣಗಳನ್ನು ಬೇಗ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು ಎಂದು ಕೋರಿ ನಿವೃತ್ತ ಅಧಿಕಾರಿಗಳು, ವಕೀಲರು, ವಿದ್ವಾಂಸರು ಸೇರಿ ಹಲವು ಮಂದಿ ಗಣ್ಯ ನಾಗರಿಕರು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರಿಗೆ ಇತ್ತೀಚೆಗೆ ಪತ್ರ ಬರೆದಿದ್ದಾರೆ. ಚುನಾವಣಾ ಬಾಂಡ್ ಯೋಜನೆಯ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿರುವ ಒಂದು ಅರ್ಜಿಯೂ ಬಾಕಿಯಿರುವ ಅರ್ಜಿಗಳಲ್ಲಿ ಸೇರಿದೆ. ಈ ಅರ್ಜಿ ಸುಮಾರು ನಾಲ್ಕು ವರ್ಷಗಳಿಂದ ಬಾಕಿ ಇದೆ. ಈ ಪ್ರಕರಣವನ್ನು ವಿಚಾರಣೆಗೆ ಆಯ್ದುಕೊಂಡಿದ್ದರೂ ಇನ್ನೂ ವಿಚಾರಣೆ ಆರಂಭ ಆಗಿಲ್ಲ. ಚುನಾವಣಾ ಬಾಂಡ್‌ಗಳ ಕಾನೂನುಬದ್ಧತೆ ಮತ್ತು ಸಾಂವಿಧಾನಿಕ ಸಿಂಧುತ್ವದ ಬಗ್ಗೆ ಬೇಗ ತೀರ್ಮಾನಕ್ಕೆ ಬರುವುದು ಚುನಾವಣಾ ವ್ಯವಸ್ಥೆಯ ಉತ್ತಮ ಆರೋಗ್ಯಕ್ಕೆ ಬಹಳ ಮುಖ್ಯ. ಹಲವಾರು ಕಾನೂನುಗಳಿಗೆ ಹಲವು ತಿದ್ದುಪಡಿಗಳನ್ನು ಮಾಡಿ 2018ರಲ್ಲಿ ಚುನಾವಣಾ ಬಾಂಡ್ ಯೋಜನೆಯ ಅಧಿಸೂಚನೆ ಹೊರಡಿಸಲಾಗಿತ್ತು. ರಾಜಕೀಯ ಪಕ್ಷಗಳಿಗೆ ಅನಾಮಧೇಯವಾಗಿ ಮತ್ತು ಅಮಿತವಾದ ದೇಣಿಗೆ ನೀಡುವುದನ್ನು ವಿವಿಧ ತಿದ್ದುಪಡಿಗಳ ಮೂಲಕ ಕಾನೂನುಬದ್ಧಗೊಳಿಸಲಾಗಿದೆ. ಸರ್ಕಾರದ ಈ ನಡೆಯ ಬಗ್ಗೆ ವಿರೋಧವೂ ವ್ಯಕ್ತವಾಗಿತ್ತು.



ಚುನಾವಣಾ ವ್ಯವಸ್ಥೆಯ ಉತ್ತಮ ಆರೋಗ್ಯದ ಸಲುವಾಗಿ, ದೇಣಿಗೆ ನೀಡಿಕೆ ವ್ಯವಸ್ಥೆಯು ನ್ಯಾಯಯುತ, ಪಾರದರ್ಶಕ ಮತ್ತು ಸರಿಯಾಗಿ ಇರುವುದು ಬಹಳ ಮುಖ್ಯ

ಚುನಾವಣಾ ಬಾಂಡ್‌ಗಳು ಅಂದರೆ, ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವುದಕ್ಕಾಗಿ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯು ಬ್ಯಾಂಕ್‌ನಿಂದ ಖರೀದಿಸಬಹುದಾದ ಬಾಂಡ್. ಹೀಗೆ ಬಾಂಡ್ ಖರೀದಿಸುವವರು ದೇಣಿಗೆ ನೀಡುವವರು ತಮ್ಮ ಗುರುತನ್ನು ಬಹಿರಂಗಪಡಿಸಬೇಕಿಲ್ಲ. ಇಂತಹ ದೇಣಿಗೆ ವ್ಯವಸ್ಥೆಯು ರಾಜಕೀಯ ಪಕ್ಷಗಳಿಗೆ ನೀಡುವ ದೇಣಿಗೆಯನ್ನು ಕಪ್ಪುಹಣದಿಂದ ಮುಕ್ತಗೊಳಿಸುತ್ತದೆ ಎಂಬುದು ಸರ್ಕಾರದ ಪ್ರತಿಪಾದನೆ. ಆದರೆ, ಈ ಪ್ರತಿಪಾದನೆಯನ್ನು ಹಲವು ರೀತಿಯಲ್ಲಿ ಪ್ರಶ್ನಿಸಲಾಗಿದೆ. ಈ ಯೋಜನೆಯು ಪಾರದರ್ಶಕವಾಗಿಲ್ಲ, ದೇಣಿಗೆ ನೀಡಿದವರು ಅನಾಮಧೇಯರಾಗಿಯೇ ಉಳಿಯುತ್ತಾರೆ; ಅದಲ್ಲದೆ, ಮೇಲ್ನೋಟಕ್ಕೆ ಕಾಣಿಸುವ ಮತ್ತು ಕಾಣಿಸದ ವಿವಿಧ ಕಾರಣಗಳಿಂದಾಗಿ ದೇಣಿಗೆದಾರರು ಆಡಳಿತ ಪಕ್ಷದ ಪಕ್ಷಪಾತಿಯಾಗುತ್ತಾರೆ. ಸಂದಾಯವಾಗಿರುವ ಒಟ್ಟು ದೇಣಿಗೆಯಲ್ಲಿ ಶೇ 92ರಷ್ಟು ₹ 1 ಕೋಟಿ ಮೌಲ್ಯದ ಬಾಂಡ್‌ಗಳಾಗಿವೆ. ಇದರಲ್ಲಿ ಶೇ 70ಕ್ಕಿಂತ ಹೆಚ್ಚು ಬಿಜೆಪಿಗೆ ಸಿಕ್ಕಿದೆ. ಕೋಟ್ಯಂತರ ರೂಪಾಯಿಗಳನ್ನು ಬಾಂಡ್‌ಗಳ ಮೂಲಕ ಬಿಜೆಪಿ ಸಂಗ್ರಹಿಸಿದೆ. ದೇಣಿಗೆ ಕೊಟ್ಟವರು ಯಾರು ಮತ್ತು ಅವರು ಯಾವ ಪಕ್ಷಕ್ಕೆ ಕೊಟ್ಟಿದ್ದಾರೆ ಎಂಬುದು ಮತದಾರರಿಗೆ ತಿಳಿಯುವುದಿಲ್ಲ. ಆದರೆ, ಈ ಮಾಹಿತಿ ಸರ್ಕಾರಕ್ಕೆ ತಿಳಿಯುತ್ತದೆ. ಸರ್ಕಾರದ ನೀತಿಗಳ ಮೇಲೆ ದೇಣಿಗೆಯು ಪ್ರಭಾವ ಬೀರಿದೆಯೇ ಎಂಬುದು ಮತದಾರರಿಗೆ ಸ್ಪಷ್ಟವಾಗುವುದಿಲ್ಲ. ಹಾಗಾಗಿ, ಇದು ಮತದಾರರ ಹಕ್ಕಿನ ಉಲ್ಲಂಘನೆ ಎನಿಸಿಕೊಳ್ಳುತ್ತದೆ. ಚುನಾವಣೆಯಲ್ಲಿ ಹಣವು ನಿರ್ಣಾಯಕ ಪಾತ್ರ ವಹಿಸುತ್ತದೆ ಎಂಬುದು, ಭಾರತದಲ್ಲಿ ಹೇಗೆ ಚುನಾವಣೆ ನಡೆಯುತ್ತದೆ ಎಂಬುದು ಬಲ್ಲವರಿಗೆ ಗೊತ್ತು. ಹಾಗಾಗಿಯೇ, ದೇಣಿಗೆ ನೀಡಿಕೆ ವ್ಯವಸ್ಥೆಯು ನ್ಯಾಯಯುತವಾಗಿ, ಪಾರದರ್ಶಕವಾಗಿ ಮತ್ತು ಸರಿಯಾಗಿ ಇರುವುದು ಬಹಳ ಮುಖ್ಯ. ಚುನಾವಣಾ ಆಯೋಗಕ್ಕೆ ಚುನಾವಣಾ ಬಾಂಡ್ ಯೋಜನೆಯ ಬಗ್ಗೆ ಸಮ್ಮತಿ ಇರಲಿಲ್ಲ. ಆದರೆ, ಅದಕ್ಕಿಂತ ಭಿನ್ನವಾದ ನಿಲುವನ್ನು ಆಯೋಗವು ನ್ಯಾಯಾಲಯದಲ್ಲಿ ತಳೆಯಲು ಕಾರಣವೇನು ಎಂಬುದು ಗೊತ್ತಿಲ್ಲ.

ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ 2018ರ ಬಳಿಕ ಹಲವಾರು ಚುನಾವಣೆಗಳು ನಡೆದಿವೆ. ಚುನಾವಣಾ ಬಾಂಡ್ ಯೋಜನೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯು ಈ ಅವಧಿಯಲ್ಲಿ ವಿಚಾರಣೆಗೆ ಬರಲೇ ಇಲ್ಲ. ಬಾಂಡ್ ಮಾರಾಟಕ್ಕೆ ತಡೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿತ್ತು. ಕೆಲವು ರಾಜ್ಯಗಳ ಚುನಾವಣೆಗೆ ಮೊದಲು, 2021ರ ಏಪ್ರಿಲ್‌ನಲ್ಲಿ ಬಾಂಡ್ ಮಾರಾಟಕ್ಕೆ ತಡೆ ನೀಡಬೇಕು ಎಂದು ಕೋರಿ ತುರ್ತು ಅರ್ಜಿಯೊಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಕೆ ಆಗಿತ್ತು. ಕಾನೂನಿನ ಯಾವುದೇ ಅಡ್ಡಿ ಇಲ್ಲದೆ ಚುನಾವಣಾ ಬಾಂಡ್ ಮಾರಾಟಕ್ಕೆ ಹಿಂದಿನ ವರ್ಷಗಳಲ್ಲಿ ಅನುಮತಿ ನೀಡಲಾಗಿತ್ತು; ಹಾಗಾಗಿ, ಬಾಂಡ್ ಮಾರಾಟಕ್ಕೆ ತಡೆ ನೀಡುವುದಕ್ಕೆ ಯಾವ ಸಮರ್ಥನೆಯೂ ಇಲ್ಲ ಎಂದು ಅಂದಿನ ಮುಖ್ಯ ನ್ಯಾಯಮೂರ್ತಿ ಎಸ್.ಎ.ಬೋಬಡೆ ಹೇಳಿದ್ದರು. ಕೆಲವೇ ತಿಂಗಳುಗಳಲ್ಲಿ ಐದು ರಾಜ್ಯಗಳಲ್ಲಿ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಚುನಾವಣಾ ಬಾಂಡ್ ಮಾರಾಟದ ಹತ್ತು ದಿನಗಳ ಅವಧಿಯು ಜನವರಿ 1ರಂದು ಶುರುವಾಗಿದೆ. ಬಾಂಡ್ ಯೋಜನೆಯು ಸಾಂವಿಧಾನಿಕವಾಗಿ ಸಿಂಧುವೇ ಎಂಬ ಪ್ರಶ್ನೆಗೆ ದೇಶ ಆದಷ್ಟು ಬೇಗ ಉತ್ತರ ಕಂಡುಕೊಳ್ಳಬೇಕಿದೆ. ಚುನಾವಣಾ ಬಾಂಡ್ ಯೋಜನೆಯಲ್ಲಿ 'ದೇಶದ ಚುನಾವಣಾ ಪ್ರಕ್ರಿಯೆಯ ಪಾವಿತ್ರ್ಯದ ಮೇಲೆ ಭಾರಿ ಪರಿಣಾಮ ಬೀರಬಲ್ಲ ಮಹತ್ವದ ವಿಚಾರಗಳು ಅಡಗಿವೆ' ಎಂದು ಸುಪ್ರೀಂ ಕೋರ್ಟ್ ಈ ಹಿಂದೆ ಹೇಳಿತ್ತು ಎಂಬುದು ಗಮನಾರ್ಹ.

ಭಾರತವು ಗೋವಾ ವಿಮೋಚನೆಗೆ ತರಾತುರಿಯಲ್ಲಿ ಸೇನೆ ಬಳಸಿದ್ದರ ಹಿಂದಿತ್ತು ರಾಜಕೀಯ

ಗೋವಾ ವಿಮೋಚನೆ ಆದದ್ದು ಹೇಗೆ?



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಡಿಸೆಂಬರ್ 19ರಂದು 'ಗೋವಾ ವಿಮೋಚನಾ ದಿನ'ದ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು 'ಸರ್ದಾರ್ ಪಟೇಲರು ಇನ್ನಷ್ಟು ಕಾಲ ಬದುಕಿದ್ದಿದ್ದರೆ ಗೋವಾದ ವಿಮೋಚನೆ ಬಹುಬೇಗನೇ ಆಗುತ್ತಿತ್ತು' ಎಂಬ ಮಾತನ್ನಾಡಿದರು. ಇತಿಹಾಸದ ಘಟನೆಗಳನ್ನು ರಾಜಕೀಯಗೊಳಿಸಿದಾಗ ಅಂತಹ ಮಾತು ಬರಬಹುದು. ವಿವೇಚಿಸಿ ನೋಡಿದರೆ, ಗೋವಾದ ಪರಿಸ್ಥಿತಿ ಕೊಂಚ ಭಿನ್ನವಾಗಿತ್ತು ಮತ್ತು ವಿಲೀನಕ್ಕಾಗಿ ಕಾಯುವುದು ಅನಿವಾರ್ಯವಾಗಿತ್ತು ಎನಿಸುತ್ತದೆ.

ಜುನಾಗಡ ಅಥವಾ ಹೈದರಾಬಾದ್‌ನಷ್ಟು ಗೋವಾದ ಸಮಸ್ಯೆ ನೇರ ಮತ್ತು ಸರಳವಾಗಿರಲಿಲ್ಲ. ಗೋವಾವು ಪೋರ್ಚುಗಲ್ ಪ್ರಾಂತ್ಯವಾಗಿತ್ತು. ಸೇನಾ ಕಾರ್ಯಾಚರಣೆಗೆ ಹಲವು ಅಡ್ಡಿಗಳಿದ್ದವು. ಶೀತಲ ಸಮರದ ದಿನಗಳಲ್ಲಿ ಭಾರತವನ್ನು ಬಗ್ಗಿಸುವ ದಾಳವಾಗಿ ಗೋವಾವನ್ನು ಬಳಸಿಕೊಳ್ಳಲು ಅಮೆರಿಕ ನೋಡುತ್ತಿತ್ತು. ಆದರೆ 1961ರ ಹೊತ್ತಿಗೆ ರಾಜತಾಂತ್ರಿಕವಾಗಿ ಪರಿಸ್ಥಿತಿ ಹದಗೊಳ್ಳುತ್ತಿದ್ದಂತೆ ಗೋವಾ ವಿಮೋಚನೆಗೆ ಸೇನೆಯನ್ನು ತರಾತುರಿಯಲ್ಲಿ ಬಳಸಿದ್ದರ ಹಿಂದೆಯೂ ಒಂದು ರಾಜಕೀಯ ಇತ್ತು.


ಬ್ರಿಟಿಷರ ವಿರುದ್ಧದ ಚಳವಳಿ ತೀವ್ರಗೊಂಡ ಕಾಲಘಟ್ಟದಲ್ಲಿ, ಗೋವಾದಲ್ಲಿ ಪೋರ್ಚುಗೀಸರ ವಿರುದ್ಧ ಅಲ್ಲಿನ ನಾಗರಿಕರು ಹರತಾಳ ಆರಂಭಿಸಿದ್ದರು. 1928ರಲ್ಲಿ ಡಾ. ಕುನ್ಹಾ ನೇತೃತ್ವದಲ್ಲಿ ಗೋವಾ ನ್ಯಾಷನಲ್ ಕಾಂಗ್ರೆಸ್ ಸ್ಥಾಪನೆಯಾದಾಗ ಆ ಹೋರಾಟಕ್ಕೆ ಸ್ಪಷ್ಟ ದಿಕ್ಕೊಂದು ಕಾಣಿಸಿತು. ರಾಮಮನೋಹರ್ ಲೋಹಿಯಾ 1946ರಲ್ಲಿ ಗೋವಾದಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದರು. ಅವರನ್ನು ಗೋವಾದಿಂದ ಗಡಿಪಾರು ಮಾಡಲಾಯಿತು. 1947ರಲ್ಲಿ ಭಾರತ ಸ್ವತಂತ್ರಗೊಂಡರೂ ಗೋವಾ ವಿಷಯದಲ್ಲಿ ಭಾರತ ಸರ್ಕಾರಕ್ಕೆ ಹಿಂಜರಿಕೆ ಇತ್ತು.

'ನ್ಯಾಟೊ' ಸದಸ್ಯ ರಾಷ್ಟ್ರ ಎಂಬ ಕಾರಣಕ್ಕೆ ಅಮೆರಿಕವು ಪೋರ್ಚುಗಲ್ ಬೆಂಬಲಕ್ಕಿತ್ತು. 'ಒಂದೊಮ್ಮೆ ಸಶಸ್ತ್ರ ಹೋರಾಟವಾದಲ್ಲಿ ಹಳೆಯ ಒಪ್ಪಂದದನ್ವಯ ಪೋರ್ಚುಗಲ್ ಬೆಂಬಲಕ್ಕೆ ನಿಲ್ಲುವುದು ಅನಿವಾರ್ಯವಾಗುತ್ತದೆ' ಎಂದು ಇಂಗ್ಲೆಂಡ್ ಹೇಳಿತ್ತು. ಅಷ್ಟಲ್ಲದೇ, ಅಂತರರಾಷ್ಟ್ರೀಯ ಸಂಬಂಧಗಳ ನಿರ್ವಹಣೆಗೆ ಮಾತುಕತೆ ಬುನಾದಿಯಾಗಬೇಕೇ ವಿನಾ ಯುದ್ಧಗಳಲ್ಲ ಎಂಬುದನ್ನು ಜಾಗತಿಕ ವೇದಿಕೆಗಳಲ್ಲಿ ಪ್ರತಿಪಾದಿಸುತ್ತಿದ್ದ ಪ್ರಧಾನಿ ಜವಾಹರಲಾಲ್ ನೆಹರೂ, ಸೈನಿಕ ಕಾರ್ಯಾಚರಣೆ ತಮ್ಮ ನಿಲುವಿಗೆ ವಿರುದ್ಧ ಎಂದು ಭಾವಿಸಿದ್ದರು. ತಾವು ಪ್ರತಿಪಾದಿಸಿದ ವಿದೇಶಾಂಗ ನೀತಿಯ ಕಾರಣದಿಂದಾಗಿ ನೆಹರೂ ಕೈಕಟ್ಟಿ ನಿಲ್ಲಬೇಕಾಯಿತು.

1955ರಲ್ಲಿ ಭಾರತಕ್ಕೆ ಸೋವಿಯತ್ ನಾಯಕ ಕ್ರುಶ್ಚೇವ್ ಮತ್ತು ಬಲ್ಗನಿನ್ ಭೇಟಿ ಕೊಟ್ಟರು. ಭಾರತದಲ್ಲಿ ಅವರು ಮಾಡಿದ ಭಾಷಣದಿಂದ ಅಮೆರಿಕ ಸಿಟ್ಟಾಯಿತು. ಅಮೆರಿಕದ ವಿದೇಶಾಂಗ ಸಚಿವ ಜಾನ್ ಎಫ್. ಡಲಸ್, ಪೋರ್ಚುಗಲ್ ವಿದೇಶಾಂಗ ಸಚಿವರ ಜೊತೆ ಸೇರಿ 'ಗೋವಾವು ಏಷ್ಯಾದಲ್ಲಿರುವ ಪೋರ್ಚುಗಲ್ ಪ್ರಾಂತ್ಯ' ಎಂದು ಜಂಟಿ ಹೇಳಿಕೆಯನ್ನು ಹೊರಡಿಸಿದರು. ಇದರ ಬೆನ್ನಿಗೇ ಭಾರತದಲ್ಲಿ ಗೋವಾ ವಿಮೋಚನೆಯ ಕೂಗು ಗಟ್ಟಿಯಾಯಿತು. ಸಾವಿರಾರು ಜನ ಗೋವಾಕ್ಕೆ ತೆರಳಿ ವಿಮೋಚನೆಯ ಆಂದೋಲನದಲ್ಲಿ ಭಾಗಿಯಾಗತೊಡಗಿದರು. 1955ರ ಜೂನ್ 13ರಂದು 'ಕರ್ನಾಟಕ ಕೇಸರಿ' ಜಗನ್ನಾಥರಾವ್ ಜೋಷಿ ಅವರ ನೇತೃತ್ವದಲ್ಲಿ 3,000 ಕಾರ್ಯಕರ್ತರು ಗೋವಾಕ್ಕೆ ತೆರಳಿ ಸತ್ಯಾಗ್ರಹ ನಡೆಸಿದ್ದರು. ಆಗಸ್ಟ್ 15ರಂದು ದೇಶದ ವಿವಿಧ ಭಾಗಗಳಿಂದ ಬಂದ ಜನ ಸಾಮೂಹಿಕ ಸತ್ಯಾಗ್ರಹಕ್ಕೆ ಮುಂದಾದರು. ಗೋವಾ ಆಡಳಿತ ತುಪಾಕಿಗಳ ಮೂಲಕ ಉತ್ತರಿಸಿತು. ಸತ್ಯಾಗ್ರಹ ನಡೆಸುತ್ತಿದ್ದ 32 ಜನ ಪ್ರಾಣತ್ಯಾಗ ಮಾಡಿದರು. ಸತ್ಯಾಗ್ರಹಿಗಳ ಮೇಲೆ ಪೋರ್ಚುಗೀಸರು ದಾಳಿ ನಡೆಸಿದ್ದನ್ನು ಖಂಡಿಸಿ ದೆಹಲಿಯ ರಾಜೇಂದ್ರ ನಗರದಲ್ಲಿ ಸಾರ್ವಜನಿಕ ಸಭೆಯೊಂದು ಏರ್ಪಟ್ಟಿತು. ಆ ಸಭೆಯನ್ನು ಉದ್ದೇಶಿಸಿ ಜನಸಂಘದ ಮುಂದಾಳು ದೀನದಯಾಳ್ ಉಪಾಧ್ಯಾಯ ಮಾತನಾಡಿದರು. ಇದರಿಂದಾಗಿ ಸೇನಾ ಕಾರ್ಯಾಚರಣೆಗೆ ಸರ್ಕಾರದ ಮೇಲೆ ಒತ್ತಡ ಹೆಚ್ಚಿತು. ಆದರೂ ಆ ನಿರ್ಣಯಕ್ಕೆ ಸಮಯ ಕೂಡಿಬಂದಿರಲಿಲ್ಲ.

ಈ ನಡುವೆ ಭಾರತದ ಗಡಿಯಲ್ಲಿ ಚೀನಾ ತಂಟೆ ತೆಗೆದಿತ್ತು. ಚೀನಾ ವಿಷಯದಲ್ಲಿ ಭಾರತದ ನಿಷ್ಕ್ರಿಯತೆ ಟೀಕೆಗೆ ಗುರಿಯಾಯಿತು. 1961ರ ಏಪ್ರಿಲ್ 11ರಂದು ಸಂಸತ್ತಿನಲ್ಲಿ ಆಚಾರ್ಯ ಕೃಪಲಾನಿ ಮಹತ್ವದ ಭಾಷಣವೊಂದನ್ನು ಮಾಡಿದರು. 'ಕೃಷ್ಣ ಮೆನನ್ ಅವರು ರಕ್ಷಣಾ ಸಚಿವರಾದ ಮೇಲೆ ಅವರ ಬೇಜವಾಬ್ದಾರಿಯಿಂದಾಗಿ ಭಾರತ 12 ಸಾವಿರ ಚದರ ಮೈಲು ವಿಸ್ತೀರ್ಣದ ಭೂಭಾಗವನ್ನು ಕಳೆದುಕೊಂಡಿತು. ಸೇನೆಯ ಉನ್ನತ ಹುದ್ದೆಗಳಿಗೆ ನೇಮಕಾತಿ ಮತ್ತು ಬಡ್ತಿಯ ಮಾನದಂಡ ಬದಲಾಯಿತು. ತಮಗೆ ಪ್ರಿಯರಾದವರನ್ನೇ ಆ ಸ್ಥಾನಗಳಿಗೆ ತರಲಾಯಿತು. ಸೈನಿಕರ ನೈತಿಕ ಸ್ಥೈರ್ಯ ಕುಗ್ಗುವಂತಾಯಿತು. ಹಸಿವಿನಿಂದ ನರಳುತ್ತಿರುವ ಈ ಬಡ ರಾಷ್ಟ್ರದ ಹಣವನ್ನು ಮೆನನ್ ಅನಗತ್ಯ ಯೋಜನೆಗಳಿಗೆ ಬಳಸಿದರು' ಎಂಬ ಆರೋಪ ಮಾಡಿದರು.

'ಮುಂದಿನ ಚುನಾವಣೆಯಲ್ಲಿ ಮೆನನ್ ವಿರುದ್ಧ ಕಣಕ್ಕಿಳಿಯುತ್ತೇನೆ' ಎಂದು ಸವಾಲು ಹಾಕಿದರು ಮತ್ತು 1962ರ ಫೆಬ್ರುವರಿಯಲ್ಲಿ ನಡೆಯಲಿದ್ದ ಚುನಾವಣೆಯಲ್ಲಿ ಮೆನನ್ ವಿರುದ್ಧ ಉತ್ತರ ಬಾಂಬೆಯಿಂದ ಸ್ಪರ್ಧಿಸಿದರು.



ಚುನಾವಣೆಯಲ್ಲಿ ಗೆಲ್ಲಬೇಕು ಎಂಬುದು ಮೆನನ್ ಅವರಿಗೂ ಮತ್ತು ಮೆನನ್ ಅವರನ್ನು ಗೆಲ್ಲಿಸಿಕೊಳ್ಳಲೇಬೇಕು ಎಂಬುದು ನೆಹರೂ ಅವರಿಗೂ ಪ್ರತಿಷ್ಠೆಯ ವಿಷಯವಾಯಿತು.


ಚುನಾವಣೆಗೆ ಕೆಲವು ವಾರಗಳಿರುವಾಗ ಒಂದು ದೊಡ್ಡ ಯಶಸ್ಸು ಕೃಷ್ಣ ಮೆನನ್ ಅವರಿಗೆ ಬೇಕಿತ್ತು. ಉತ್ತರ ಬಾಂಬೆ ಪ್ರದೇಶದಲ್ಲಿ ಗೋವಾ ಮೂಲದ ಜನ ಇದ್ದರು ಮತ್ತು ಅವರು ಗೋವಾ ವಿಮೋಚನೆಗೆ ಆಗ್ರಹಿಸುತ್ತಿದ್ದರು. ಸೇನಾ ಕಾರ್ಯಾಚರಣೆಗೆ ಸಮ್ಮತಿಸುವಂತೆ ನೆಹರೂ ಅವರ ಮೇಲೆ ಮೆನನ್ ಒತ್ತಡ ಹೇರಲಾರಂಭಿಸಿದರು. ಈ ಕುರಿತು ಸ್ವತಃ ನೆಹರೂ ಅವರ ತಂಗಿ ವಿಜಯಲಕ್ಷ್ಮಿ ಪಂಡಿತ್ ಅವರು ಬ್ರಿಟಿಷ್ ಅಧಿಕಾರಿ ಗೋರ್-ಬೂತ್ ಅವರಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಸೇನಾ ಕಾರ್ಯಾಚರಣೆಯ ಕುರಿತು ಭಾರತ ಯೋಚಿಸತೊಡಗಿದಾಗ ಅಮೆರಿಕದ ಭಾರತ ರಾಯಭಾರಿಯು ವಿಶ್ವಸಂಸ್ಥೆಗೆ ಹೋಗುವಂತೆ ನೆಹರೂ ಅವರಿಗೆ ಸಲಹೆ ನೀಡಿದ್ದರು. ಕಾಶ್ಮೀರದ ವಿಷಯದಲ್ಲಿ ವಿಶ್ವಸಂಸ್ಥೆಗೆ ಹೋದದ್ದೇ ತಪ್ಪಾಯಿತು ಎಂದು ಅರಿತಿದ್ದ ನೆಹರೂ, ವಿಶ್ವಸಂಸ್ಥೆಗೆ ಗೋವಾದ ವಿಷಯವನ್ನು ಕೊಂಡೊಯ್ಯುವ ತಪ್ಪು ಮಾಡಲಿಲ್ಲ. ಈ ಹೊತ್ತಿಗೆ ಅಮೆರಿಕದ ಅಧ್ಯಕ್ಷರು ಬದಲಾದರು. ನೂತನ ಅಧ್ಯಕ್ಷರಾಗಿ ಶ್ವೇತ ಭವನಕ್ಕೆ ಬಂದಿದ್ದ ಜಾನ್ ಎಫ್. ಕೆನಡಿ, ಪೋರ್ಚುಗಲ್ ವಸಾಹತುಶಾಹಿ ಮನಃಸ್ಥಿತಿ ಬಿಡಬೇಕು ಎಂಬ ನಿಲುವು ಹೊಂದಿದ್ದರು. ಜಾಗತಿಕ ಬೆಳವಣಿಗೆಗಳಿಂದಾಗಿ ರಾಜತಾಂತ್ರಿಕವಾಗಿ ಕಾಲ ಪಕ್ವಗೊಂಡಿತ್ತು ಮತ್ತು 62ರ ಚುನಾವಣೆ ಗೆಲ್ಲಲೇಬೇಕೆಂಬ ರಾಜಕೀಯ ಸ್ವಾರ್ಥವೂ ಸೇರಿದಾಗ, ಗೋವಾ ವಿಮೋಚನೆಗೆ ಕಾಲ ಕೂಡಿಬಂತು.

1961ರ ಡಿಸೆಂಬರ್ 17ರಂದು ಭಾರತದ ಸೇನೆ ಗೋವಾ ವಶಕ್ಕೆ ಮುಂದಡಿಯಿಟ್ಟಿತು. ಸಾವಂತವಾಡಿ, ಕಾರವಾರ ಮತ್ತು ಬೆಳಗಾವಿಯ ಭಾಗದಿಂದ ಭಾರತದ ಸೇನೆ ಗೋವಾ ಪ್ರವೇಶಿಸಿತು. ಯುದ್ಧಸಾಮಗ್ರಿಗಳನ್ನು ಹೊತ್ತು ತರುತ್ತಿದ್ದ ಪೋರ್ಚುಗಲ್ ಯುದ್ಧನೌಕೆಗೆ ಗಿಬ್ರಾಲ್ಟರ್ ಮೂಲಕ ಹಾದುಹೋಗಲು ಇಂಗ್ಲೆಂಡ್ ಅನುಮತಿಸಿತ್ತು. ಆದರೆ ಸುಯೇಜ್ ಕಾಲುವೆ ಮೂಲಕ ಹಾದುಬರುವಾಗ ಅದನ್ನು ಈಜಿಪ್ಟ್ ಅಧ್ಯಕ್ಷ ನಾಸರ್ ತಡೆದರು. ನಾಸರ್ ಜೊತೆಗಿನ ನೆಹರೂ ಗೆಳೆತನ ಕೆಲಸ ಮಾಡಿತ್ತು. 14 ವರ್ಷಗಳ ಕ್ಲಿಷ್ಟ ಸಮಸ್ಯೆಯನ್ನು ನಮ್ಮ ಸೇನೆ ಕೇವಲ 26 ಗಂಟೆಗಳ ಅವಧಿಯಲ್ಲಿ ಪರಿಹರಿಸಿತ್ತು. 'ಆಪರೇಷನ್ ವಿಜಯ್' ಕಾರ್ಯಾಚರಣೆಯು 450 ವರ್ಷಗಳ ಪೋರ್ಚುಗಲ್ ಆಡಳಿತದಿಂದ ಗೋವಾ, ದಮನ್-ದಿಯುಗಳನ್ನು ಮುಕ್ತಗೊಳಿಸಿತ್ತು. ಸೇನೆಯ ಯಶಸ್ಸು 1962ರ ಚುನಾವಣೆಯಲ್ಲಿ ಮೆನನ್ ಅವರ ಗೆಲುವಿಗೆ ಸಹಕಾರಿಯಾಯಿತು.

ಆದರೆ ದೊಡ್ಡ ಪೆಟ್ಟು ಕೊಡಲು ಚೀನಾ ಕಾದು ನಿಂತಿದೆ ಎಂಬುದು ಆಳುವವರ ಗಮನಕ್ಕೆ ಬರಲಿಲ್ಲ. ಗೋವಾ ವಿಮೋಚನೆಯ ಯಶಸ್ಸು, 1962ರ ಚುನಾವಣೆಯ ಗೆಲುವು, ಸೈದ್ಧಾಂತಿಕ ಕಾರಣದಿಂದ ಬೆಳೆದಿದ್ದ ಚೀನಾದೆಡೆಗಿನ ಒಲವು, ಇವುಗಳಿಂದ ನೆಹರೂ- ಕೃಷ್ಣ ಮೆನನ್‌ದ್ವಯರ ಕಣ್ಣಿಗೆ ಪೊರೆ ಆವರಿಸಿಕೊಂಡಿತ್ತು. ಯುದ್ಧಸಾಮಗ್ರಿ ಹಾಗೂ ಮೂಲ ಸೌಕರ್ಯದ ಸೇನೆಯ ಬೇಡಿಕೆಗೆ ಸರ್ಕಾರ ಕಿವುಡಾಯಿತು. ಪ್ರಧಾನಿ ಮತ್ತು ರಕ್ಷಣಾ ಸಚಿವರು ಎಚ್ಚರಗೊಳ್ಳುವಷ್ಟರಲ್ಲಿ ಚೀನಾದ ಸೇನೆ ಗಡಿಯಲ್ಲಿ ಕೇಕೆ ಹಾಕುತ್ತಿತ್ತು.

ಚುರುಮುರಿ



ಹೊಸ ಪುಣ್ಯ ಸಂಪಾದನೆ

• ಸುಮಂಗಲಾ

'ನನಗ ಹೊಸ ವರ್ಸಕ್ಕ ಹೊಸಾ ಸೈಕಲ್ಲಾದ್ರೂ ಕೊಡಿಸು' ಎಂದು ಬೆಕ್ಕಣ್ಣ ಒಂದೇ ಸಮನೆ ವರಾತ ಹಚ್ಚಿತ್ತು. 'ನಿನಗ್ಯಾಕಲೇ ಸೈಕಲ್ಲು? ನಮ್ಮನಿ ಸುತ್ತಮುತ್ತ ರಸ್ತೇನೇ ಇಲ್ಲ. ಎಲ್ಲಾ ಕಡಿಗಿ ಬರೀ ಗುಂಡಿ... ನೀ ಸೈಕಲ್ ಸವಾರಿ ಹೋದ್ರ ಗುಂಡೀಲಿ ವಳಗ ಬೀಳತೀ ಅಷ್ಟೆ' ಎಂದೆ.

'ಮೋದಿ ಮಾಮಾನ ಓಡಾಟಕ್ಕೆ ಅಂತ ಎಸ್ಪಿಜಿಯವರು 12 ಕೋಟಿದು ಮರ್ಸಿಡಿಸ್ ಕಾರು ತಗಂಡಾರಂತ. ನನಗ ನೋಡಿದ್ರ ಒಂದ್ ಸೈಕಲ್ಲಿಗೂ ಗತಿ ಇಲ್ಲ' ಎಂದು ಅಳುಮೋರೆ ಮಾಡಿತು.

'ಸರಿ, ಅವರು ಬಳಸಿಬಿಟ್ಟ ಆ ಹಳೇ ಕಾರು ಕೊಡು ಅಂತ ನಿನ್ನ ಮೋದಿಮಾಮಾಗೇ ಕೇಳು' ನಾ ನಕ್ಕೆ.

'ನೀ ಏನರ ಒಂದ್ ಅಡ್ಡಮಾತು ಹೇಳತೀ...' ಎಂದು ಮೂತಿ ಉಬ್ಬಿಸಿತು.

'ಮೋದಿಮಾಮಾನ ಹೊಸ 'ಕಾರುಬಾರು' ವಿಷಯ ಬಿಡು. ನೋಡಿಲ್ಲಿ, ಭೂಮಿ ಹುಟ್ಟಿದಾಗಿನಿಂದಲೂ ಅರುಣಾಚಲ ಪ್ರದೇಶ ನಮ್ಮದಾಗಿತ್ತು ಅಂತ್ಹೇಳಿ ಚೀನಾದವ್ರು ಹದಿನೈದು ಸ್ಥಳಕ್ಕೆ ಹೊಸ ಹೆಸರು ಇಟ್ಟಾರಂತ' ಎಂದು ವಿಷಯ ಬದಲಿಸಿದೆ.

'ಇಡಲೇಳು... ಹೆಸರಿಟ್ಟಾಕ್ಷಣ ಅದ್ ಅವರಿದ್ದು ಆಗಂಗಿಲ್ಲ. ಹೆಸರಿನಲ್ಲೇನಿದೆ ಅಂತ ಶೇಕ್ಸ್‌ಪಿಯರ್ ಹೇಳಿಲ್ಲೇನು. ಅವರ್ ನಮ್ಮ ಭೂಪ್ರದೇಶದ ಹೆಸರು ಏನರ ಬ್ಯಾರೆ ಇಡಲಿ, ನಾವು ನಮ್ಮದೇ ನಗರಗಳ ಹೆಸರನ್ನು ಬದಲೀ ಮಾಡಿ, ಶುದ್ಧ ಹೆಸರು ಇಡೂದನ್ನು ಈ ವರ್ಷನೂ ಮುಂದುವರೆಸೂಣು' ಎಂದು ಉಡಾಫೆಯಿಂದ ಹೇಳಿ ಪೇಪರು ಓದತೊಡಗಿತು. ಮರುಕ್ಷಣದಲ್ಲೇ ಹೊಸ ಪ್ಲಾನು ಹಾಕಿತು.

'ನನಗ ಒಂದು ಕೋಟಿ ರೂಪಾಯಿ ಕೊಡು' ಎಂದಿತು. 'ನನ್ನ ಹತ್ರ ಒಂದ್ ದಮ್ಮಡಿ ಇಲ್ಲ. ಎದಕ್ಕ ಅಷ್ಟುಕೊಂದು ರೊಕ್ಕ' ಗಾಬರಿಯಾದೆ.

'ತಿರುಪತಿವಳಗ ಉದಯಾಸ್ತಮಾನ ಸೇವೆ ಶುರುವಾಗತೈತಿ. ಸುಪ್ರಭಾತದಿಂದ ರಾತ್ರಿ ತಿಮ್ಮಪ್ಪನ್ನ ಏಕಾಂತದಾಗೆ ಮಲಗಿಸೂತನಕ ಮಾಡೂ ಎಲ್ಲಾ ಪೂಜೇನೂ ಅಲ್ಲೇ ಹತ್ತಿರದಾಗೆ ಕುಂತು ನೋಡಬೌದಂತೆ. ಹೊಸಾ ವರ್ಸದಾಗೆ ಹೊಸ ಪುಣ್ಯ ಸಂಪಾದನೆ ಮಾಡತೀನಿ' ಎಂದು ಮುಸಿಮುಸಿ ನಕ್ಕಿತು!

ದಿನದ ಟ್ವೀಟ್



ದುರ್ಬಳಕೆ ನಿಲ್ಲಲಿ

ಸರ್ಕಾರಿ ಅಧಿಕಾರಿಗಳು ಮತ್ತು ಅವರ ಕುಟುಂಬ ಸದಸ್ಯರು ಶಾಪಿಂಗ್ ಮಾಲ್‌ಗಳು, ವಿವಾಹ ಸಮಾರಂಭಗಳಿಗೆ ತೆರಳುವಂತಹ ವೈಯಕ್ತಿಕ ಕಾರ್ಯಗಳಿಗೆ ಸರ್ಕಾರಿ ವಾಹನಗಳನ್ನು ಬಳಸುವುದೇಕೆ? ದಯವಿಟ್ಟು ಇಂತಹ ಕೆಲಸವನ್ನು ನಿಲ್ಲಿಸಿ. ಜನರ ತೆರಿಗೆ ಹಣವನ್ನು ಪೋಲು ಮಾಡಬೇಡಿ.

ಡಾ. ರವಿ ಕೃಷ್ಣಪ್ಪ, ಸಹಪ್ರಾಧ್ಯಾಪಕ

ಕಿಡಿನುಡಿ



ಮೇಕೆದಾಟು ಯೋಜನೆಯ ಬಗ್ಗೆ ರಾಜ್ಯ ಸರ್ಕಾರದ ನಿಲುವು ಸ್ಪಷ್ಟವಾಗಿದ್ದು, ನಮ್ಮ ಸರ್ಕಾರದ ಅವಧಿಯಲ್ಲೇ ಅನುಷ್ಠಾನಗೊಳ್ಳಲಿದೆ. ಪರಿಸರ ಅನುಮೋದನೆ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಯೋಜನೆಗೆ ಚಾಲನೆ ನೀಡಲಾಗುವುದು. ಆದರೆ, ಇದರ ರಾಜಕೀಯ ಲಾಭ ಪಡೆಯಲು ಮುಂದಾಗಿರುವ ರಾಜ್ಯ ಕಾಂಗ್ರೆಸ್ ನಾಯಕರ ನಾಟಕ ಹಾಸ್ಯಾಸ್ಪದ.

ಡಾ. ಸಿ.ಎನ್.ಅಶ್ವತ್ಥನಾರಾಯಣ, ಉನ್ನತ ಶಿಕ್ಷಣ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 3-1-1997

• 'ವಿಮಾನ ಸಂಚಾರ ವೇಳೆ ಕಾಡುವ ಯಲಹಂಕ ನೆನಪು'

ಬೆಂಗಳೂರು, ಜ. 2– 'ಬದುಕೆಂದರೆ ಹಲವು ಅಚ್ಚರಿಗಳು ಮತ್ತು ಕುತೂಹಲಗಳ ಸಂಗಮ. ನಾನು ವಾಯುಪಡೆ ಸೇವೆಯಲ್ಲಿ ಯಶಸ್ವಿಯಾಗದೇ ಇದ್ದಿದ್ದರೆ ಇಂದು ನನ್ನ ಬದುಕೇ ಬೇರೆಯಾಗುತ್ತಿತ್ತು. ವಿಮಾನದಲ್ಲಿ ಸಂಚರಿಸುವಾಗ ಸದಾ ಯಲಹಂಕ ನನ್ನ ನೆನಪಿಗೆ ಬರುತ್ತದೆ'.

ಇಲ್ಲಿಗೆ 20 ಕಿ.ಮೀ. ದೂರದಲ್ಲಿ ಇರುವ ಯಲಹಂಕ ವಾಯುಪಡೆ ಕೇಂದ್ರವನ್ನು ಇಸ್ರೇಲ್ ಅಧ್ಯಕ್ಷ ಇಜರ್ ವೈಜಮನ್ ಅವರು ನೆನಪಿಸಿಕೊಂಡದ್ದು ಹೀಗೆ. ಅವರು ಪತ್ನಿ ಜತೆ ಈ ಕೇಂದ್ರಕ್ಕೆ ಇಂದು ಭೇಟಿ ನೀಡಿದರು.

ವೈಜಮನ್ ಅವರು ಎರಡನೇ ಮಹಾಯುದ್ಧದ ಸಮಯದಲ್ಲಿ ಯಲಹಂಕದ ವಾಯುಪಡೆ ಕೇಂದ್ರದಲ್ಲಿ ಸುಮಾರು 6 ತಿಂಗಳು ಇದ್ದರು. ಇಲ್ಲಿ ವಾಯುಯಾನ ತರಬೇತಿ ಪಡೆದಿದ್ದರು. ಇಂದಿನ ಸುಮಾರು 90 ನಿಮಿಷಗಳ ಭೇಟಿ ಅವರಿಗೆ ಹಳೆಯ ನೆನಪುಗಳನ್ನು ಕೆದಕಿತು. ವಾಯುಪಡೆಯ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡುತ್ತ, ಅಂದಿನ ದಿನಗಳು, ತಮ್ಮ ಅನುಭವಗಳನ್ನು ಹಂಚಿಕೊಂಡರು.

'ನನ್ನ ಪತ್ನಿ 47 ವರ್ಷಗಳಿಂದ ಯಲಹಂಕ, ಬೆಂಗಳೂರು, ವಾಯುಪಡೆಯ ಜೀವನದ ನನ್ನ ನೆನಪುಗಳನ್ನು ಕೇಳಿಸಿಕೊಳ್ಳುತ್ತಿದ್ದಳು' ಎಂದು ಎದುರಿಗೆ ಕುಳಿತಿದ್ದ ಪತ್ನಿ ರೋಮಾ ಅವರತ್ತ ತಿರುಗಿ, 'ಅದೆಲ್ಲ ಇಲ್ಲಿದೆ ನೋಡು' ಎಂದು ಹೇಳಿದಾಗ ಇಡೀ ಸಭಾಂಗಣದಲ್ಲಿ ನಗೆಯ ಅಲೆ ಎದ್ದಿತು.

ತಾವು ತರಬೇತಿ ಪಡೆಯುತ್ತಿದ್ದಾಗಿನ ರಸಮಯ ಘಟನೆಗಳು, ಒಂದು ವಿಮಾನದ ರೆಕ್ಕೆಗೆ ಹಾನಿ ಮಾಡಿದ್ದೂ ಸೇರಿದಂತೆ ಆಗಿನ ಪ್ರಮಾದಗಳನ್ನು ಇಸ್ರೇಲ್ ಅಧ್ಯಕ್ಷ ಇಜರ್ ನೆನಪಿಸಿಕೊಂಡರು.

50 ವರ್ಷಗಳ ಹಿಂದೆ

ಸೋಮವಾರ, 3-1-1972

• ರಾಮಾವತಾರ

ನವದೆಹಲಿ, ಜ. 2– ದೆಹಲಿ ಪೌರರು ಇಂದು ಇಲ್ಲಿ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರ ಗೌರವಾರ್ಥ ಏರ್ಪಡಿಸಿದ್ದ ಸನ್ಮಾನ ಸಭೆಯು, ರಾಮಾಯಣದ ಕಾಲದಿಂದಲೂ ಭಾರತೀಯ ಪರಂಪರೆಯನ್ನು ಉಳಿಸಿಕೊಂಡು ಬಂದಿರುವ ಭಗವಾನ್ ಶ್ರೀರಾಮಚಂದ್ರ ಮೂರ್ತಿಗೆ ಇಂದಿರಾ ಗಾಂಧಿ ಅವರನ್ನು ಹೋಲಿಸಿತು.

ಶ್ರೀರಾಮನು ಲಂಕಾ ಜನರನ್ನು ರಾಕ್ಷಸ ರಾವಣನ ದುರಾಡಳಿತದಿಂದ ಬಿಡುಗಡೆ ಮಾಡಿದ ನಂತರ ಪ್ರಭುತ್ವವನ್ನು ರಾವಣನ ಸಹೋದರ ವಿಭೀಷಣನಿಗೆ ಒಪ್ಪಿಸಿದ. ಅದೇ ರೀತಿಯಲ್ಲಿ ಇಂದಿರಾ ಗಾಂಧಿ ಅವರು ಬಾಂಗ್ಲಾ ದೇಶದ ಜನರನ್ನೆಲ್ಲಾ ಜನರಲ್ ಯಾಹ್ಯಾ ಖಾನರ ಅಕೃತ್ಯಗಳಿಂದ ಪಾರು ಮಾಡಿದ ನಂತರ ಚುನಾಯಿತ ಪ್ರತಿನಿಧಿಗಳಿಗೆ ಅಧಿಕಾರ ವರ್ಗಾಯಿಸಿದರೆಂದು ಬಿನ್ನವತ್ತಳೆಯಲ್ಲಿ ಬಣ್ಣಿಸಲಾಯಿತು.

ರಾಜಧಾನಿಯಲ್ಲಿ 286 ಸಂಘ– ಸಂಸ್ಥೆಗಳನ್ನು ಪ್ರತಿನಿಧಿಸಿದ್ದ 'ಇಂದಿರಾ ಗಾಂಧಿ ಅಭಿನಂದನಾ ಸಮಿತಿ' ಪರವಾಗಿ ದೆಹಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ರಾಧಾರಾಯನ್ ಅವರು ಬಿನ್ನವತ್ತಳೆ ಅರ್ಪಿಸಿದರು.

ಸಂಗತ

ಕನ್ನಡದಲ್ಲಿ ತಾಂತ್ರಿಕ ಶಿಕ್ಷಣ: ಆಗಿದ್ದೇನು?

ತಾಂತ್ರಿಕ ಶಿಕ್ಷಣವನ್ನು ಕನ್ನಡದ ಮೂಲಕ ಪಡೆದುಕೊಳ್ಳಲು ಪೂರಕ ಸಂಪನ್ಮೂಲಗಳನ್ನು ಸೃಷ್ಟಿಸುವತ್ತ ಗಮನಹರಿಸಬೇಕಿದೆ

• ಎಚ್.ಕೆ.ಶರತ್

ಕನ್ನಡ ಮಾಧ್ಯಮದಲ್ಲಿ ಎಂಜಿನಿಯರಿಂಗ್ ಶಿಕ್ಷಣ ನೀಡುವ ರಾಜ್ಯ ಸರ್ಕಾರದ ಪ್ರಯೋಗಕ್ಕೆ ಒಳಪಡಲು ವಿದ್ಯಾರ್ಥಿಗಳು ಮುಂದೆ ಬಾರದ ಕಾರಣ, ಹಲವರು ಈ ಮೊದಲೇ ನಿರೀಕ್ಷಿಸಿದ್ದು ನಿಜವಾಗಿದೆ. ಕನ್ನಡ ಮಾಧ್ಯಮದಲ್ಲಿ ತಾಂತ್ರಿಕ ಶಿಕ್ಷಣವೆಂಬುದು ಆಶಯವಾಗಿಯೇ ಉಳಿದಿದೆ.


ಸೂಕ್ತ ಪೂರ್ವಸಿದ್ಧತೆ ನಡೆಸದೆ, ವಿದ್ಯಾರ್ಥಿಗಳಲ್ಲಿ ಭರವಸೆ ತುಂಬುವ ಪ್ರಯತ್ನವನ್ನೂ ಮಾಡದೆ ತರಾತುರಿಯಲ್ಲಿ ಎಂಜಿನಿಯರಿಂಗ್ ಶಿಕ್ಷಣವನ್ನು ಸಂಪೂರ್ಣವಾಗಿ ಕನ್ನಡದಲ್ಲಿ ನೀಡಲು ಹೊರಟಿದ್ದು ಇಲ್ಲಿ ಮುಳುವಾಗಿದೆ ಎನ್ನಲು ಸಕಾರಣಗಳಿವೆ.

ಎಂಜಿನಿಯರಿಂಗ್ ಪಠ್ಯ ಪದೇಪದೇ ಬದಲಾವಣೆಗೆ ಒಳಪಡುವುದರಿಂದ ಹಾಗೂ ಯಾವುದೇ ವಿಷಯಕ್ಕಾದರೂ ವಿವಿಧ ಪುಸ್ತಕಗಳನ್ನು ಆಧರಿಸಿ ಪಠ್ಯಕ್ರಮ ರೂಪಿಸುವುದರಿಂದ ಎಲ್ಲವನ್ನೂ ಕನ್ನಡದಲ್ಲಿ ಲಭ್ಯವಾಗಿಸುವುದು ಕಷ್ಟಸಾಧ್ಯ. ಬಹುತೇಕ ಎಂಜಿನಿಯರಿಂಗ್ ಪುಸ್ತಕಗಳು ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗುವುದರಿಂದ ಇಂಗ್ಲಿಷ್ ಮಾಧ್ಯಮದಲ್ಲಿ ಪಠ್ಯ ಪರಿಷ್ಕರಣೆ ಮತ್ತು ಹೊಸ ವಿಷಯಗಳ ಸೇರ್ಪಡೆ ಸುಲಭ ಮತ್ತು ಸರಳ. ಅದೇ ಕನ್ನಡ ಮಾಧ್ಯಮದಲ್ಲಿ ಅಗತ್ಯಕ್ಕೆ ತಕ್ಕಂತೆ ಪಠ್ಯ ಪರಿಷ್ಕರಣೆ ಮಾಡಲು ಮತ್ತು ಹೊಸ ವಿಷಯಗಳನ್ನು ಸೇರಿಸುವ ಮೊದಲು ಕನ್ನಡದಲ್ಲಿ ಅದನ್ನು ಲಭ್ಯವಾಗಿಸುವ ಸವಾಲೂ ಎದುರಾಗಲಿದೆ.

ಇಂಗ್ಲಿಷ್‌ನಲ್ಲಿ ಒಂದೇ ವಿಷಯಕ್ಕೆ ಸಂಬಂಧಿಸಿದ ವಿವಿಧ ಲೇಖಕರ ಪುಸ್ತಕಗಳು ಲಭ್ಯವಿರುವುದರಿಂದ ವಿದ್ಯಾರ್ಥಿಗಳ ಎದುರು ಹತ್ತು ಹಲವು ಆಯ್ಕೆಗಳಿವೆ. ಆದರೆ ಕನ್ನಡದಲ್ಲಿ ಇಂತಹ ಆಯ್ಕೆಗಳು ಸದ್ಯಕ್ಕಂತೂ ಅಸಾಧ್ಯವೇ ಸರಿ. ತಾಂತ್ರಿಕ ವಿಷಯಗಳ ಕುರಿತು ಕನ್ನಡದಲ್ಲಿ ಮೂಡಿಬರಲಿರುವ ಪಠ್ಯ ಪುಸ್ತಕಗಳ ಗುಣಮಟ್ಟವೂ ಪ್ರಶ್ನಾರ್ಹವೇ. ವಿದ್ಯಾರ್ಥಿಗಳ ಮುಂದೆ ಆಯ್ಕೆಗಳು ಇಲ್ಲದೇ ಹೋದರೆ, ಕನ್ನಡ ಮಾಧ್ಯಮವನ್ನು ಆರಿಸಿಕೊಂಡ ತಪ್ಪಿಗೆ ಕಳಪೆ ಗುಣಮಟ್ಟದ ಪಠ್ಯಪುಸ್ತಕವನ್ನೇ ಆಶ್ರಯಿಸಬೇಕಾದ ಅನಿವಾರ್ಯ ಎದುರಾಗುವ ಸಾಧ್ಯತೆಯೂ ಇದೆ. ಈ ಸವಾಲುಗಳ ಕುರಿತು ಮೊದಲೇ ಚಿಂತಿಸಿ ಸಂಪೂರ್ಣ ಪದವಿ ಕೋರ್ಸನ್ನೇ ಕನ್ನಡದಲ್ಲಿ ಬೋಧಿಸುವ ನಿರ್ಧಾರ ಕೈಗೊಳ್ಳುವ ಬದಲು, ಎಂಜಿನಿಯರಿಂಗ್ ಶಿಕ್ಷಣದಲ್ಲಿ ಹಂತಹಂತವಾಗಿ ಕನ್ನಡ ಬಳಕೆಯನ್ನು ಉತ್ತೇಜಿಸುವ ಕ್ರಮಗಳನ್ನು ಕೈಗೊಂಡಿದ್ದರೆ ಈ ರೀತಿ ಮುಗ್ಗರಿಸುವ ಪ್ರಮೇಯ ಉದ್ಭವಿಸುತ್ತಿರಲಿಲ್ಲ.

ರಾಜ್ಯ ಸರ್ಕಾರ ಇನ್ನು ಮುಂದಾದರೂ ಸಂಪೂರ್ಣ ಕನ್ನಡ ಮಾಧ್ಯಮದ ಬದಲಿಗೆ, ತಾಂತ್ರಿಕ ಶಿಕ್ಷಣವನ್ನು ಕೊಂಚಮಟ್ಟಿಗಾದರೂ ಕನ್ನಡದ ಮೂಲಕ ಪಡೆದುಕೊಳ್ಳಲು ಪೂರಕ ಸಂಪನ್ಮೂಲಗಳನ್ನು ಸೃಷ್ಟಿಸುವತ್ತ ಗಮನಹರಿಸಬೇಕಿದೆ. ಆ ದಿಸೆಯಲ್ಲಿ ಈ ಬಾರಿ ಕನ್ನಡ ಮಾಧ್ಯಮದಲ್ಲಿ ತಾಂತ್ರಿಕ ಶಿಕ್ಷಣ ನೀಡುವ ಸಲುವಾಗಿ ಸಿದ್ಧಪಡಿಸಿರುವ ಸಂಪನ್ಮೂಲಗಳೆಲ್ಲವೂ ಮುಕ್ತವಾಗಿ ಸದಾಕಾಲ ಎಲ್ಲರಿಗೂ ಕೈಗೆಟಕುವಂತೆ ಮಾಡಬೇಕಿದೆ.

ಇಡೀ ಪದವಿಯನ್ನೇ ಕನ್ನಡ ಮಾಧ್ಯಮದಲ್ಲಿ ಬೋಧಿಸುವ ಬದಲು, ವಿದ್ಯಾರ್ಥಿ ಇಚ್ಛಿಸಿದರೆ ತನಗೆ ಬೇಕಾದ ಕೆಲ ವಿಷಯಗಳನ್ನು ಕನ್ನಡದಲ್ಲಿ ಕಲಿಯುವ ಮತ್ತು ಪರೀಕ್ಷೆ ಬರೆಯುವ ಅವಕಾಶ ನೀಡಬೇಕಾಗಿದೆ. ಹೀಗೆ ಮಾಡಲು ಮೊದಲಿಗೆ ಕನ್ನಡಕ್ಕೆ ಅನುವಾದಗೊಂಡಿರುವ ಮತ್ತು ಮುಂದೆ ಅನುವಾದಗೊಳ್ಳಲಿರುವ ಅಥವಾ ಕನ್ನಡದಲ್ಲೇ ಬರೆದಿರುವ ತಾಂತ್ರಿಕ ಶಿಕ್ಷಣ ಪಠ್ಯಗಳೆಲ್ಲವೂ ಸುಲಭವಾಗಿ ಲಭ್ಯವಾಗುವಂತಿರಬೇಕು. ತಾಂತ್ರಿಕ ವಿಷಯಗಳನ್ನು ಕನ್ನಡ ಮಾಧ್ಯಮದಲ್ಲಿ ಕಲಿಸುವ ವಿಡಿಯೊ ಸಂಪನ್ಮೂಲದ ಸೃಷ್ಟಿಗೆ ವಿಶೇಷ ಒತ್ತು ನೀಡಬೇಕಿದೆ. ಒಂದುವೇಳೆ ಕ್ಲಿಷ್ಟ ವಿಷಯಗಳನ್ನು ತಾಯಿನುಡಿಯಲ್ಲಿ ಅರಿತುಕೊಳ್ಳಬಹುದಾದ ಆಯ್ಕೆ ಸಿಕ್ಕರೆ, ಅದರ ಸದುಪಯೋಗ ಪಡಿಸಿಕೊಳ್ಳಲು ತುದಿಗಾಲಲ್ಲಿ ನಿಂತಿರುವ ವಿದ್ಯಾರ್ಥಿ ಸಮೂಹವೇ ನಮ್ಮಲ್ಲಿದೆ.



ಕನ್ನಡ ಬಲ್ಲ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರುವ ತರಗತಿಗಳಲ್ಲಿ ಕೆಲ ಕ್ಲಿಷ್ಟ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಸರಳವಾಗಿ ತಿಳಿಸಿಕೊಡುವ ಸಲುವಾಗಿ ಅಧ್ಯಾಪಕರು ಕನ್ನಡದಲ್ಲೂ ಒಮ್ಮೆ ವಿವರಿಸುವ ಪರಿಪಾಟ ರಾಜ್ಯದ ಬಹುತೇಕ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಮೊದಲಿನಿಂದಲೂ ಇದೆ. ಹೀಗೆ ವಿವರಿಸುವಾಗ ತಾಂತ್ರಿಕ ಪದಗಳನ್ನು ಕನ್ನಡಕ್ಕೆ ಭಾಷಾಂತರಿಸುವ ಗೋಜಿಗೆ ಯಾರೂ ಹೋಗುವುದಿಲ್ಲ. ಹಾಗೆ ಮಾಡಿದರೆ ವಿದ್ಯಾರ್ಥಿಗಳಿಗೆ ಏನೊಂದೂ ಅರ್ಥವಾಗುವುದಿಲ್ಲವೆಂಬ ವಾಸ್ತವ ಬೋಧಿಸುವವರಿಗೆ ತಿಳಿದಿದೆ. ಹಾಗಾಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಈಗ ಅನೌಪಚಾರಿಕವಾಗಿ ನಡೆಯುವ ಕನ್ನಡ ಬೋಧನೆಯ ಬದಲಿಗೆ, ನಿಯಮಾನುಸಾರವಾಗಿಯೇ ಸಾಧ್ಯವಿರುವೆಡೆ ಅಗತ್ಯವಿರುವ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಬೋಧಿಸಲು ಅನುವು ಮಾಡಿಕೊಡಬೇಕಿದೆ. ವಿದ್ಯಾರ್ಥಿಗಳು ಬಯಸಿದರೆ ಅವರ ಇಚ್ಛೆಗನುಗುಣವಾಗಿ ಮಿಶ್ರ ಮಾಧ್ಯಮದಲ್ಲಿ ಉತ್ತರಿಸುವ ಆಯ್ಕೆಯನ್ನೂ ಅವರ ಮುಂದೆ ಇರಿಸಬಹುದು.

ಹೀಗೆ ಪ್ರಯೋಗಾತ್ಮಕವಾಗಿ ಕನ್ನಡ ಬಳಕೆಯನ್ನು ಪ್ರೋತ್ಸಾಹಿಸಿ, ಸಾಧಕ-ಬಾಧಕ ಕುರಿತು ವಾಸ್ತವಿಕ ನೆಲೆಗಟ್ಟಿನಲ್ಲಿ ಪರಾಮರ್ಶಿಸುತ್ತ ಹೋದಲ್ಲಿ ಎಂಜಿನಿಯರಿಂಗ್ ಶಿಕ್ಷಣವನ್ನು ಕನ್ನಡದಲ್ಲಿ ನೀಡಲು ಇರುವ ಸಾಧ್ಯತೆಗಳು ತೆರೆದುಕೊಳ್ಳುತ್ತ ಹೋಗಲಿವೆ. ವಾಸ್ತವಕ್ಕೆ ಬೆನ್ನು ತೋರಿ ಅತಿ ಉತ್ಸಾಹದಿಂದ ಮುನ್ನುಗ್ಗಿದರೆ ಅಂತಿಮವಾಗಿ ಸಾಧಿಸಲು ಸಾಧ್ಯವಾಗುವುದಾದರೂ ಏನು ಎಂಬ ಪ್ರಶ್ನೆಗೆ ಉತ್ತರವೀಗ ಕಣ್ಣೆದುರೇ ಇದೆ.

ಕನ್ನಡ ಮಾಧ್ಯಮ ಪ್ರಯೋಗಕ್ಕೆ ಈ ಕ್ಷಣಕ್ಕೆ ಸರಿಯಾದ ಸ್ಪಂದನ ದೊರೆತಿಲ್ಲ ಎಂಬ ಕಾರಣಕ್ಕೆ ತಾಂತ್ರಿಕ ಶಿಕ್ಷಣದಲ್ಲಿ ಕನ್ನಡದ ಬಳಕೆಯನ್ನು ಉತ್ತೇಜಿಸುವ ಪ್ರಯತ್ನ ಹಿನ್ನೆಲೆಗೆ ಸರಿಯಬಾರದು.

ವಾಚಕರ ವಾಣಿ

ತಪ್ಪು ನಡೆ ಪ್ರಶ್ನಿಸಲು ಬೇರೆ ವೇದಿಕೆ ಇದೆ

ಮಹಾರಾಷ್ಟ್ರದ ನಾಸಿಕ್‌ನಲ್ಲಿ ಶಿವಸೇನಾ ಸಂಸದ ಸಂಜಯ್ ರಾವುತ್ ಅವರು ಮಾಸ್ಕ್ ಧರಿಸದೇ ಇದ್ದುದಕ್ಕೆ 'ಪ್ರಧಾನಿಯನ್ನು ಅನುಸರಿಸುತ್ತಿದ್ದೇನೆ' ಎಂಬ ಬೇಜವಾಬ್ದಾರಿಯ ಉತ್ತರ ನೀಡಿದ್ದಾರೆ. ನರೇಂದ್ರ ಮೋದಿಯವರ ತಪ್ಪು ನಡೆಯನ್ನು ಪ್ರಶ್ನಿಸಲು ಸಂಸದರಾದ ಅವರಿಗೆ ಬೇರೆ ಬೇರೆ ಅವಕಾಶಗಳಿವೆ. ಸಂಸತ್ತಿನಲ್ಲಿಯೇ ಅವರು ನೇರವಾಗಿ ಪ್ರಧಾನಿಯವರನ್ನು ಆ ಬಗ್ಗೆ ಪ್ರಶ್ನಿಸಿ ತರಾಟೆಗೆ ತೆಗೆದುಕೊಳ್ಳುವ ಅವಕಾಶ ಇರುತ್ತದೆ. ಅದು ಬಿಟ್ಟು ಸಾರ್ವಜನಿಕ ಸಭೆಗಳಲ್ಲಿ ತಾನೂ ಅದೇ ತಪ್ಪನ್ನು ಮಾಡಿ, ಅದನ್ನು ಸಮರ್ಥಿಸಿಕೊಳ್ಳಲು ಬೇರೆಯವರ ಕಡೆ ಕೈ ತೋರಿಸಿದರೆ ತಾನು ಮಾಡಿದ ತಪ್ಪು ಸರಿಯಾಗಿಬಿಡುತ್ತದೆ ಎಂಬ ಭ್ರಮೆ ನಮ್ಮ ಜನಪ್ರತಿನಿಧಿಗಳಿಂದ ಆಗಾಗ್ಗೆ ಪ್ರಕಟವಾಗುತ್ತಲೇ ಇರುತ್ತದೆ! ಇದರಿಂದ ಜನರಿಗೆ ಏನು ಸಂದೇಶ ಹೋಗುತ್ತದೆ ಎಂಬ ಕನಿಷ್ಠ ಜ್ಞಾನವಾದರೂ ಅವರಿಗೆ ಇರಬೇಡವೇ?!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರ್, ಕೊಪ್ಪ

ಶೋಷಣೆಯಲ್ಲದೆ ಮತ್ತೇನು?

ಅತಿಥಿ ಉಪನ್ಯಾಸಕರು 'ಶೋಷಣೆ' ಎಂಬ ಪದ ಬಳಸಿದ್ದಕ್ಕೆ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಆಕ್ಷೇಪಿಸಿ, ಸಿಟ್ಟಾಗಿದ್ದಾರೆ (ಪ್ರ.ವಾ., ಜ. 1). ಸಮಾನ ಕೆಲಸಕ್ಕೆ ಸಮಾನ ವೇತನ ನೀಡದಿದ್ದರೆ, ಐದಾರು ತಿಂಗಳಿಗೊಮ್ಮೆ ವೇತನ ನೀಡುತ್ತಿದ್ದರೆ, ಅದನ್ನು 'ಶೋಷಣೆ' ಎನ್ನದೆ ಇನ್ನೇನಂತ ಕರೆಯಬೇಕು, ಅದಕ್ಕೆ ಮತ್ತ್ಯಾವ ಪದ ಬಳಸಬೇಕು ಎಂಬುದನ್ನು ಅವರೇ ಹೇಳಬೇಕು.

'ನಾವು ನಿಮ್ಮ ಬಾಗಿಲಿಗೆ ಬಂದು ಬಲವಂತವಾಗಿ ಈ ಕೆಲಸ ಮಾಡಿ ಎಂದು ಕೇಳಿದ್ದೆವಾ?' ಎಂದೂ ಅವರು ಕೇಳಿದ್ದಾರೆ. ಆದರೆ ಪ್ರತಿವರ್ಷ ಕಾಲೇಜು ಶಿಕ್ಷಣ ಇಲಾಖೆಯು ಅತಿಥಿ ಉಪನ್ಯಾಸಕ ಹುದ್ದೆಗೆ ಅರ್ಜಿ ಆಹ್ವಾನಿಸುತ್ತದೆ, ಅರ್ಹತೆಯ ಆಧಾರದ ಮೇಲೆ ನೇಮಕ ಮಾಡಿಕೊಳ್ಳುತ್ತದೆ. ಅವಶ್ಯಕತೆ ಇದ್ದರೆ ಮಾತ್ರ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳುತ್ತದೆ. ಹಾಗೆ ನೇಮಕವಾಗಿ ಅತಿಥಿ ಉಪನ್ಯಾಸಕರು ಸೇವೆ ಸಲ್ಲಿಸುತ್ತಿದ್ದಾರೆ. ಹಾಗಿದ್ದಮೇಲೆ ಸರ್ಕಾರ ಕರೆದಾಗ ತಾನೇ ಅತಿಥಿ ಉಪನ್ಯಾಸಕರು ಸೇವೆಗೆ ಹಾಜರಾಗುವುದು?

ಸರ್ಕಾರ ನೀಡುವ ಅಲ್ಪ ಸಂಬಳವನ್ನು ನಂಬಿಕೊಂಡು ಹಲವಾರು ಅತಿಥಿ ಉಪನ್ಯಾಸಕರು ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಬೇರೆ ಬೇರೆ ರಾಜ್ಯಗಳಲ್ಲಿ ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ನೀಡಲಾಗಿದೆ. ಅದನ್ನು ಕೇಳುವುದರಲ್ಲಿ ತಪ್ಪೇನಿದೆ?

ಅಶೋಕ ಓಜಿನಹಳ್ಳಿ, ಕೊಪ್ಪಳ

ಭವಿಷ್ಯದ ಬಗ್ಗೆ ಅರಿಯುವ ಕೆಟ್ಟ ಕುತೂಹಲ

ಅನಾವೃಷ್ಟಿ ಸಂಭವಿಸುತ್ತದೆ, ದೇಶ ದೇಶಗಳ ಮಧ್ಯೆ ಹಾಗೂ ರಾಜ್ಯಗಳ ನಡುವೆ ವೈಮನಸ್ಸು ಹೆಚ್ಚಾಗುತ್ತದೆ, ದೇಶ ಆಳುವ ರಾಜನಿಗೆ ಬೆಲೆಯೇ ಇಲ್ಲದಂತಾಗುತ್ತದೆ, ವೈರಾಣುಗಳ ಕಾಟ ಹೆಚ್ಚಾಗುತ್ತಲೇ ಹೋಗುತ್ತದೆ: ಖಾಸಗಿ ಟಿ.ವಿ ವಾಹಿನಿಯೊಂದರಲ್ಲಿ ಜ್ಯೋತಿಷಿಯೊಬ್ಬರು ಹೇಳುತ್ತಿದ್ದ ದೇಶದ ವರ್ಷಭವಿಷ್ಯ ಇದು!

ಈ ರೀತಿಯ ಭವಿಷ್ಯ ಕೇಳುವುದರಿಂದ ಯಾರಿಗೆ ಏನೂ ಲಾಭವಿಲ್ಲ (ಜ್ಯೋತಿಷಿ ಒಬ್ಬರಿಗೆ ಬಿಟ್ಟು). ಆದರೂ ಭವಿಷ್ಯದ ಬಗ್ಗೆ ತಿಳಿದುಕೊಳ್ಳುವ ಕೆಟ್ಟ ಕುತೂಹಲ ನಮ್ಮಲ್ಲಿ ಇದೆ. ಶತಾಯುಷಿ ಅಜ್ಜನೊಬ್ಬ ಜ್ಯೋತಿಷಿಯೊಬ್ಬನಿಗೆ ತನ್ನ ಹಸ್ತ ತೋರಿಸುತ್ತಿದ್ದ ಚಿತ್ರವೊಂದು ಪತ್ರಿಕೆಯಲ್ಲಿ ಪ್ರಕಟವಾಗಿತ್ತು! ಕತ್ತಲಿನಿಂದ ಬೆಳಕಿಗೆ ಬೆಲೆ, ಕಷ್ಟಗಳಿಂದ ಸುಖದ ಅನುಭವಕ್ಕೆ ಬೆಲೆ. ನಮ್ಮಲ್ಲಿಯ ವೈರತ್ವದ ಭಾವನೆಗಳನ್ನು ಕಡಿಮೆ ಮಾಡಿಕೊಂಡು ಆಶಾಭಾವ ಮತ್ತು ಸಮರಸವೇ ಜೀವನ ಎಂಬ ಕವಿವಾಣಿಯಂತೆ ನವ ಹಾಗೂ ದೃಢ ಸಂಕಲ್ಪದೊಂದಿಗೆ ಭವಿಷ್ಯದ ಕಡೆಗೆ ಹೆಜ್ಜೆ ಹಾಕಬೇಕಾಗಿದೆ.

ಟಿ.ಎಸ್.ಪ್ರತಿಭಾ, ಚಿತ್ರದುರ್ಗ

ದೇವರೂ ದುಬಾರಿ...!

ತಿರುಮಲ ತಿರುಪತಿಯ ವೆಂಕಟೇಶ್ವರ ದೇವಸ್ಥಾನದಲ್ಲಿನ ₹ 1 ಕೋಟಿಯಿಂದ 1.5 ಕೋಟಿ ಬೆಲೆಯ ಉದಯಾಸ್ತಮಾನ ಸೇವೆಯು ವಿಶ್ವದಲ್ಲೇ ಅತ್ಯಂತ ದುಬಾರಿ ಸೇವೆಯಾಗಲಿದೆ ಎಂದು ವರದಿಯಾಗಿದೆ (ಪ್ರ.ವಾ., ಜ. 2). ಆ ಸೇವೆಯಲ್ಲಿ ಐವರಿಗೆ ಗರ್ಭಗುಡಿ ಪ್ರವೇಶ ಮತ್ತು ನಿಗದಿಪಡಿಸಿದ ಸ್ಥಳಗಳಲ್ಲಿ ಕುಳಿತು ಎಲ್ಲ ಕಾರ್ಯಕ್ರಮಗಳನ್ನೂ ವೀಕ್ಷಿಸುವ ಅವಕಾಶ ಕೂಡಾ ಲಭ್ಯವಿದೆ. ಈ ದುಬಾರಿ ಸೇವೆ ಪಡೆಯಲು ಅನೇಕ ಸಿರಿವಂತ ಭಕ್ತರು ಕಾತರರಾಗಿರಬಹುದು. ಅಂದರೆ, ಹಣ ಇದ್ದವರಿಗೆ ಮಾತ್ರ ಇಂತಹ ಸೇವೆಗಳು ಲಭ್ಯವಾದರೆ ಬಯಕೆ ಉಳ್ಳ ಇತರರನ್ನು ಹಣದಿಂದ ಅಳೆದು ದೂರ ಇರಿಸಿದಂತೆ ಅಲ್ಲವೇ? ಹಣ ಇದ್ದವರು ಎಲ್ಲವನ್ನೂ ಪಡೆಯಬಹುದಾದರೆ ಸಾಮಾಜಿಕ ನ್ಯಾಯ ಎಲ್ಲಿಗೆ ಬಂತು? ದೇವರ ದರ್ಶನಕ್ಕೂ ಈ ಪರಿ ದುಬಾರಿ ದರ ವಿಧಿಸುವುದು ವ್ಯಾಪಾರ ಮಾಡಿದಂತೆಯೇ ಅಲ್ಲವೇ? ಇದು ಸಹ ಒಂದು ಉದ್ಯಮವಾಯಿತೇ? ದೇವರು ಬಡವನ ಕೈಗೆಟುಕದಿರೆ ಆತ ದೇವರು ಅಂತ ಹೇಗೆ ಆದಾನು? ಎಲ್ಲರಿಗೂ ದೇವನೊಬ್ಬನೇ ಆಗಿರುವಾಗ ಅವನ ಭಕ್ತರಲ್ಲಿ ಭೇದಭಾವ ಮಾಡದೆ ಒಂದೇ ರೀತಿಯಲ್ಲಿ ಪರಿಗಣಿಸಿದರೆ ಸಮಾನಭಾವ ಮೂಡುತ್ತದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಸೂರ್ಯ ನಮಸ್ಕಾರ: ನಿಯಮಬದ್ಧವಾಗದಿದ್ದರೆ...

ಕರ್ನಾಟಕ ಸರ್ಕಾರವು ರಾಜ್ಯದ ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿ ಸಮೂಹದ ಏಕಾಗ್ರತೆಯ ದೃಷ್ಟಿಯಿಂದ 'ಸೂರ್ಯ ನಮಸ್ಕಾರ' ಅಭ್ಯಸಿಸಲು ಆದೇಶ ಹೊರಡಿಸಿದೆ. ಸೂರ್ಯ ನಮಸ್ಕಾರ ವಾಸ್ತವವಾಗಿ ಮೂಲ ಯೋಗಾಸನಗಳಲ್ಲಿ ಒಂದಾಗದಿದ್ದರೂ ಅವುಗಳ ಮೂಲ ತತ್ವಗಳನ್ನೊಳಗೊಂಡಿರುವ ಕಾರಣ ಇದನ್ನು 'ಸಕಲ ಯೋಗ ಸಾರ' ಎಂದು ಗುರುತಿಸಲಾಗಿದೆ. ಇದು ಸರಿಯೇ ಸರಿ. 12 ಬಗೆಯ ದೈಹಿಕ ಅಂಗವಿನ್ಯಾಸಗಳಿಂದ ಕೂಡಿದ ಇದು ಮನುಷ್ಯ ದೇಹದ ಎಲ್ಲ ಅಂಗಗಳಿಗೂ ಪೂರಕವಾದ ವ್ಯಾಯಾಮವನ್ನು ನೀಡುತ್ತದೆ. ವ್ಯಕ್ತಿಯ ದೇಹ ಮತ್ತು ಮನಸ್ಸುಗಳಿಗೆ ಆರೋಗ್ಯ ಭದ್ರತೆಯನ್ನು ತಂದುಕೊಡುತ್ತದೆ ಎಂಬ ಬಗ್ಗೆಯೂ ಭಿನ್ನಮತವಿಲ್ಲ. ಆದರೆ, ಸೂರ್ಯ ನಮಸ್ಕಾರ ಮಾಡುವುದಕ್ಕೆ ಅತ್ಯಂತ ಪ್ರಶಸ್ತ ಸಮಯವೆಂದರೆ, ಪ್ರಾತಃಕಾಲ ಉದಯಿಸುತ್ತಿರುವ ಸೂರ್ಯನಿಗೆ ಎದುರಾಗಿ ಖಾಲಿ ಹೊಟ್ಟೆಯಲ್ಲಿ, ಕನಿಷ್ಠ ವಸ್ತ್ರ ಧರಿಸಿ ಅದನ್ನು ಮಾಡಬೇಕು.

ಈ ನಿಯಮಗಳಿಗೆ ಬದ್ಧವಾಗಿ ವಿದ್ಯಾರ್ಥಿ ಸಮೂಹ ನಡೆದುಕೊಳ್ಳಲು ಹೇಗೆ ಸಾಧ್ಯ? ಬೆಳಿಗ್ಗೆ ಆರು ಗಂಟೆಗೆಲ್ಲ ಕಾಲೇಜುಗಳು ಪ್ರಾರಂಭವಾಗುವುದಾದರೆ ಈ ಕ್ರಮ ಆಗಬಹುದು. ಇಲ್ಲವಾದರೆ, ಸರ್ಕಾರದ ಈ ಕ್ರಮವು ಸೂರ್ಯ ನಮಸ್ಕಾರದ ಅಪಭ್ರಂಶವಾಗುವುದರಲ್ಲಿ ದುಸರ ಮಾತಿಲ್ಲ. ಅಸಲಿ ಬದಲು ನಕಲಿ (ನ-ಕಲಿ) ಆಗುತ್ತದೆ.

ಹೊರೆಯಾಲ ದೊರೆಸ್ವಾಮಿ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಎನ್‌ಜಿಒಗಳ ನಿಧಿಗೆ ಸರ್ಕಾರದ ಕತ್ತರಿ

● ಹಮೀದ್ ಕೆ., ಜಯಸಿಂಹ ಆರ್., ಅಮೃತ್ ಕಿರಣ್ ಬಿ. ಎಂ.



ಆಕ್ಸ್‌ಫಾಮ್ ಇಂಡಿಯಾವು ಸರ್ಕಾರ, ಸಮುದಾಯಗಳ ಜೊತೆಗೂಡಿ ಸಾರ್ವಜನಿಕ ಹಿತಾಸಕ್ತಿಯ ಕೆಲಸಗಳನ್ನು ದಶಕಗಳಿಂದ ಮಾಡಿಕೊಂಡು ಬರುತ್ತಿದೆ. ಗೃಹ ಸಚಿವಾಲಯವು ನೋಂದಣಿಯನ್ನು ನವೀಕರಣ ಮಾಡಲು ಒಪ್ಪಿಲ್ಲ. ಈ ನಿರ್ಧಾರದಿಂದಾಗಿ ಸಂಕಷ್ಟದಲ್ಲಿರುವ ಎಷ್ಟೋ ಜನರಿಗೆ ನೆರವು ನೀಡುವ ಸಂಘಟಿತ ಯತ್ನಗಳಿಗೆ ಭಾರಿ ಪ್ರಮಾಣದ ಹಿನ್ನಡೆ ಉಂಟಾಗಲಿದೆ

ಅಮಿತಾಭ್ ಬೆಹರ್, ಆಕ್ಸ್‌ಫಾಮ್ ಸಿಇಒ



ಮದರ್ ತೆರೆಸಾ ಮಿಷನರೀಸ್ ಆಫ್ ಚಾರಿಟಿಯ ಬ್ಯಾಂಕ್ ಖಾತೆಗಳನ್ನು ಕೇಂದ್ರ ಗೃಹ ಸಚಿವಾಲಯವು ನಿರ್ಬಂಧಿಸಿದ್ದು ಆಘಾತ ಮೂಡಿಸಿದೆ. ಅಲ್ಲಿನ 22 ಸಾವಿರ ರೋಗಿಗಳು, ನೌಕರರು ಆಹಾರ, ಔಷಧಗಳಿಂದ ವಂಚಿತರಾಗಿದ್ದಾರೆ. ಕಾನೂನು ಅತಿಮುಖ್ಯವಾಗಿದ್ದರೂ, ಮಾನವೀಯ ಪ್ರಯತ್ನಗಳಿಗೆ ಧಕ್ಕೆಯಾಗಬಾರದು

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

‘ಭಾರತದಲ್ಲಿ ನಾವು ಹಿಂದೆಂದೂ ಎದುರಿಸಿಲ್ಲದಂತಹ ಪರಿಸ್ಥಿತಿ ಎದುರಿಸುತ್ತಿದ್ದೇವೆ. ‘ಆಮ್ನೆಸ್ಟಿ ಇಂಟರ್‌ನ್ಯಾಷನಲ್ ಇಂಡಿಯಾ’ ಮೇಲೆ ಸರ್ಕಾರದಿಂದ ವ್ಯವಸ್ಥಿತವಾದ ದಾಳಿ, ಬೆದರಿಕೆ ಮತ್ತು ಕಿರುಕುಳ ನಡೆಯುತ್ತಿದೆ. ಮಾನವ ಹಕ್ಕುಗಳ ಕುರಿತು ನಾವು ನಡೆಸುತ್ತಿರುವ ಕೆಲಸವೇ ಇದಕ್ಕೆ ಕಾರಣ. ದೆಹಲಿಯಲ್ಲಿ ನಡೆದ ಗಲಭೆಯ ಬಗ್ಗೆ ಆಗಿರಲಿ, ಜಮ್ಮು ಮತ್ತು ಕಾಶ್ಮೀರದಲ್ಲಿ ಧ್ವನಿ ದಮನದ ಬಗ್ಗೆ ಆಗಿರಲಿ, ನಾವು ಎತ್ತಿರುವ ಪ್ರಶ್ನೆಗಳಿಗೆ ಉತ್ತರಿಸಲು ಸರ್ಕಾರಕ್ಕೆ ಇಷ್ಟ ಇಲ್ಲ’. ಇದು ಆಮ್ನೆಸ್ಟಿ ಇಂಟರ್‌ನ್ಯಾಷನಲ್ ಎನ್‌ಜಿಒದ ಸಂಶೋಧನೆ, ಪ್ರತಿಪಾದನೆ ಮತ್ತು ನೀತಿ ವಿಭಾಗದ ಹಿರಿಯ ನಿರ್ದೇಶಕ ಆಗಿದ್ದ ರಜತ್ ಖೋಸ್ಲಾ ಅವರು ಬಿಬಿಸಿ ಸುದ್ದಿ ವಾಹಿನಿಗೆ 2020ರ ಸೆಪ್ಟೆಂಬರ್‌ನಲ್ಲಿ ನೀಡಿದ್ದ ಹೇಳಿಕೆ. ಎನ್‌ಜಿಒ ಮತ್ತು ಸರ್ಕಾರದ ನಡುವಣ ಸಂಘರ್ಷದ ಸ್ಪಷ್ಟ ಚಿತ್ರಣವನ್ನು ಈ ಹೇಳಿಕೆಯು ಕಟ್ಟಿಕೊಡುತ್ತದೆ.

ಭಾರತ ಸರ್ಕಾರದ ದಮನಕಾರಿ ನೀತಿಯಿಂದಾಗಿ ಭಾರತದಲ್ಲಿ ಕಾರ್ಯಾಚರಣೆಯನ್ನು ನಿಲ್ಲಿಸಲೇಬೇಕಾದ ಸನ್ನಿವೇಶ ಸೃಷ್ಟಿಯಾಗಿದೆ ಎಂದು ಆಮ್ನೆಸ್ಟಿ ಇಂಟರ್‌ನ್ಯಾಷನಲ್ 2020ರಲ್ಲಿ ಹೇಳಿತ್ತು ಎಂಬುದನ್ನೂ ಬಿಬಿಸಿ ವರದಿ ಮಾಡಿತ್ತು. 2020ರ ಸೆಪ್ಟೆಂಬರ್‌ನಲ್ಲಿ ಈ ಎನ್‌ಜಿಒ ಭಾರತದಲ್ಲಿನ ತನ್ನ ಕಾರ್ಯಾಚರಣೆಯನ್ನು ನಿಲ್ಲಿಸಿತು. ಸಂಸ್ಥೆಯ ಬ್ಯಾಂಕ್ ಖಾತೆಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ಸ್ಥಗಿತಗೊಳಿಸಿದ್ದು ಕಾರ್ಯಾಚರಣೆ ನಿಲ್ಲಿಸಲು ತಕ್ಷಣದ ಕಾರಣವಾಗಿತ್ತು. ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯನ್ನು (ಎಫ್‌ಸಿಆರ್‌ಎ) ಉಲ್ಲಂಘಿಸಿದ ಆರೋಪದಲ್ಲಿ ಸಂಸ್ಥೆಯ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿಕೊಂಡಿತ್ತು. ಅದರ ಆಧಾರದಲ್ಲಿ, ಇ.ಡಿ ಕೂಡ ಸಂಸ್ಥೆಯ ವಿರುದ್ಧ 2019ರ ನವೆಂಬರ್‌ನಲ್ಲಿ ತನಿಖೆ ಆರಂಭಿಸಿತ್ತು. ತನಿಖೆಯ ಬಳಿಕ ಸಂಸ್ಥೆಯ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲಾಗಿತ್ತು.

ಆಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಸ್ಥೆಯು ಎಡಪಂಥೀಯ ಉಗ್ರವಾದಕ್ಕೆ ಬೆಂಬಲ ನೀಡುವುದು ಎಲ್ಲರಿಗೂ ಗೊತ್ತಿರುವ ಸಂಗತಿ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವ ಶರ್ಮಾ ಅವರು ಕೆಲ ತಿಂಗಳ ಹಿಂದೆ ಹೇಳಿದ್ದರು. ‘ಭಾರತವನ್ನು ಅಪಮಾನಿಸುವವರ ಜತೆಗೆ ಅವರೂ (ಆಮ್ನೆಸ್ಟಿ) ಸೇರಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸಿಗೆ ಮಸಿ ಬಳಿಯುವ ಅಂತರರಾಷ್ಟ್ರೀಯ ಸಂಚಿನ ಭಾಗ ಇದು’ ಎಂದು ಶರ್ಮಾ ಹೇಳಿದ್ದಾಗಿ ವರದಿಯಾಗಿತ್ತು. ರಾಜಕಾರಣಿಗಳು, ನ್ಯಾಯಾಧೀಶರು, ಪತ್ರಕರ್ತರು ಮುಂತಾದವರ ವಿರುದ್ಧ ಪೆಗಾಸಸ್ ಕುತಂತ್ರಾಂಶ ಬಳಸಿ ಗೂಢಚರ್ಯೆ ನಡೆಸಲಾಗಿದೆ ಎಂದು ಆಮ್ನೆಸ್ಟಿ ಇಂಟರ್‌ನ್ಯಾಷನಲ್ ವರದಿ ಮಾಡಿದ್ದಕ್ಕೆ ಶರ್ಮಾ ಅವರು ಹೀಗೆ ಪ್ರತಿಕ್ರಿಯೆ ನೀಡಿದ್ದರು. ಆಮ್ನೆಸ್ಟಿಯನ್ನು ನಿಷೇಧಿಸಬೇಕು ಎಂದೂ ಅವರು ಹೇಳಿದ್ದರು.

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮತ್ತು ಆಡಳಿತಾರೂಢ ಬಿಜೆಪಿಗೆ ಎನ್‌ಜಿಒಗಳ ಬಗ್ಗೆ ಅಂತಹ ಒಲವು ಇಲ್ಲ ಎಂಬುದನ್ನು ತೋರಿಸಲು ಇಂತಹ ಹಲವು ನಿದರ್ಶನಗಳು ಸಿಗುತ್ತವೆ. ಸಾವಿರಾರು ಎನ್‌ಜಿಒಗಳ ಎಫ್‌ಸಿಆರ್‌ಎ ರದ್ದತಿಯನ್ನು ಆ ದೃಷ್ಟಿಯಲ್ಲಿ ಕೂಡ ನೋಡಲು ಸಾಧ್ಯವಿದೆ.

ನೊಬೆಲ್ ಪುರಸ್ಕೃತೆ ಮದರ್ ತೆರೆಸಾ ಅವರು ಸ್ಥಾಪಿಸಿದ್ದ ಮಿಷನರೀಸ್ ಆಫ್ ಚಾರಿಟಿಯ ಎಫ್‌ಸಿಆರ್‌ಎ ನವೀಕರಣಕ್ಕೆ ನಕಾರ ಕೆಲ ದಿನಗಳ ಹಿಂದೆ ಬಹುದೊಡ್ಡ ಸುದ್ದಿಯಾಗಿತ್ತು. ‘ಕೆಲವು ಪ್ರತಿಕೂಲ ಅಂಶಗಳನ್ನು ಗಮನಿಸಲಾಗಿದೆ’ ಎಂದು ಮಾತ್ರ ನವೀಕರಿಸದಿರಲು ಕೇಂದ್ರ ಗೃಹ ಸಚಿವಾಲಯವು ಕಾರಣ ಕೊಟ್ಟಿತ್ತು. ಹೆಚ್ಚಿನ ವಿವರಗಳನ್ನು ನೀಡಿಲ್ಲ. ಜಾಗತಿಕ ಮಟ್ಟದಲ್ಲಿ ಮೆಚ್ಚುಗೆ ಗಳಿಸಿರುವ ಈ ಸಂಸ್ಥೆಗೆ ವಿದೇಶಿ ಅನುದಾನ ಬರುವುದನ್ನು ತಡೆ ಹಿಡಿದ ಸರ್ಕಾರದ ನಡೆಯ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಜನರನ್ನು ಅಕ್ರಮವಾಗಿ ಮತಾಂತರ ಮಾಡುತ್ತಿದೆ ಎಂಬ ಆರೋಪವನ್ನೂ ಈ ಸಂಸ್ಥೆಯ ಮೇಲೆ ಹೊರಿಸಲಾಗಿದೆ. ಮೋದಿ ಅವರ ತವರು ರಾಜ್ಯ ಗುಜರಾತ್‌ನ ವಡೋದರದಲ್ಲಿ ಸಂಸ್ಥೆಯ ವಿರುದ್ಧ ಪ್ರಕರಣವೂ ದಾಖಲಾಗಿದೆ. ಮಿಷನರೀಸ್ ಆಫ್ ಚಾರಿಟಿಯು ಮತಾಂತರದಲ್ಲಿ ನಿರತವಾಗಿದೆ ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರೂ ಆರೋಪಿಸಿದ್ದಾರೆ.

ಕೆಲವು ಮಹತ್ವದ ಪ್ರತಿಭಟನೆಗಳಿಗೆ ಎನ್‌ಜಿಒಗಳು ಬೆಂಬಲ ನೀಡಿವೆ ಎಂದು ಹಿಂದಿನಿಂದಲೂ ಹೇಳಲಾಗುತ್ತಿದೆ. ತಮಿಳುನಾಡಿನ ಕೂಡಂಕುಳಂ ಅಣು ವಿದ್ಯುತ್ ಸ್ಥಾವರದ ವಿರುದ್ಧ 2012ರಲ್ಲಿ ನಡೆದ ಭಾರಿ ಪ್ರತಿಭಟನೆಯಲ್ಲಿ ಎನ್‌ಜಿಒಗಳ ಪಾತ್ರ ಇದೆ ಎಂದು ಹೇಳಲಾಗಿತ್ತು. ಆಗಲೂ, ಆಗಿನ ಸರ್ಕಾರವು ಹಲವು ಎನ್‌ಜಿಒಗಳ ಮೇಲೆ ಮುಗಿಬಿದ್ದಿತ್ತು. ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ದೆಹಲಿಯಲ್ಲಿ ಒಂದು ವರ್ಷ ನಡೆದ ಪ್ರತಿಭಟನೆಯ ಹಿಂದೆಯೂ ಎನ್‌ಜಿಒಗಳೇ ಇದ್ದವು ಎಂದೂ ಹೇಳಲಾಗಿತ್ತು. ಹೀಗಾಗಿ, ಎನ್‌ಜಿಒಗಳು ಮತ್ತು ಸರ್ಕಾರದ ನಡುವೆ ಸದಾ ಸಂಘರ್ಷದ ಸ್ಥಿತಿಯೇ ಇರುತ್ತದೆ.

ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವು 2014ರಲ್ಲಿ ಅಧಿಕಾರಕ್ಕೆ ಬಂದ ಬಳಿಕ ಎನ್‌ಜಿಒ–ಸರ್ಕಾರದ ನಡುವಣ ಸಂಘರ್ಷ ತೀವ್ರ ಸ್ವರೂಪ ಪಡೆದುಕೊಂಡಿದೆ. ಐದು ವರ್ಷಗಳಲ್ಲಿ 14,500 ಎನ್‌ಜಿಒಗಳ ಎಫ್‌ಸಿಆರ್‌ಎ ರದ್ದುಪಡಿಸಲಾಗಿದೆ ಎಂದು 2019ರಲ್ಲಿ ರಾಜ್ಯಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ಸರ್ಕಾರವೇ ಒಪ್ಪಿಕೊಂಡಿತ್ತು.

ವಿದೇಶಿ ದೇಣಿಗೆ ಹಣ ವರ್ಗಾಯಿಸುವಂತಿಲ್ಲ

‘ವಿದೇಶಿ ದೇಣಿಗೆ (ತಿದ್ದುಪಡಿ) ಮಸೂದೆ 2020’ ಅನ್ನು 2020ರ ಸೆಪ್ಟೆಂಬರ್ 20ರಂದು ಲೋಕಸಭೆಯಲ್ಲಿ ಮಂಡಿಸಲಾಗಿತ್ತು. ‘ವಿದೇಶಿ ದೇಣಿಗೆ (ತಿದ್ದುಪಡಿ) ಕಾಯ್ದೆ 2010’ರ ಕೆಲವು ಅಂಶಗಳನ್ನು ಹೊಸ ಮಸೂದೆಯಲ್ಲಿ ಮಾರ್ಪಾಡು ಮಾಡಲಾಗಿತ್ತು. ವ್ಯಕ್ತಿಗಳು, ಸಂಸ್ಥೆಗಳು ಹಾಗೂ ಕಂಪನಿಗಳು ನೀಡಿದ ದೇಣಿಗೆಯ ಸ್ವೀಕಾರ ಹಾಗೂ ಬಳಕೆಯನ್ನು ಈ ಕಾಯ್ದೆ ನಿಯಂತ್ರಿಸುತ್ತದೆ.

ವಿದೇಶಿ ದೇಣಿಗೆ ಹಣವನ್ನು ಇತರರಿಗೆ ವರ್ಗಾಯಿಸುವಂತಿಲ್ಲ ಎಂಬ ನಿಯಮವನ್ನು ತಿದ್ದುಪಡಿ ಕಾಯ್ದೆಯಲ್ಲಿ ಅಡಕ ಮಾಡಲಾಗಿದೆ. ವಿದೇಶಿ ದೇಣಿಗೆ ಸ್ವೀಕರಿಸಲು ಅನುಮತಿ ಪಡೆದವರು ಅಥವಾ ನೋಂದಾಯಿಸಿಕೊಂಡವರು ಇತರ ವ್ಯಕ್ತಿಗಳು, ಸಂಸ್ಥೆಗಳು ಅಥವಾ ನೋಂದಾಯಿತ ಕಂಪನಿಗಳಿಗೆ ಹಣವನ್ನು ವರ್ಗ ಮಾಡುವಂತಿಲ್ಲ. ದೊಡ್ಡ ಎನ್‌ಜಿಒಗಳು ತಳ ಮಟ್ಟದಲ್ಲಿ ಕೆಲಸ ಮಾಡುವ ಸಣ್ಣ ಎನ್‌ಜಿಒಗಳಿಗೆ ಹಣ ವರ್ಗಾಯಿಸಿ ಅವರ ಮೂಲಕ ತಳಮಟ್ಟದಲ್ಲಿ ಕೆಲಸ ಮಾಡುವುದು ವಾಡಿಕೆ. ಈ ರೀತಿಯ ಕೆಲಸಗಳಿಗೆ ಹೊಸ ನಿಯಮವು ಅಡ್ಡಿ ಮಾಡಿದೆ ಎಂಬ ಆಕ್ಷೇಪ ಆಗ ಕೇಳಿ ಬಂದಿತ್ತು.

ಕಾಯ್ದೆಯ ಪ್ರಕಾರ, ವಿದೇಶಿ ದೇಣಿಗೆ ಪಡೆಯಲು ಬಯಸುವವರು ‘ವಿದೇಶಿ ದೇಣಿಗೆ ಸ್ವೀಕರಿಸುವ ಉದ್ದೇಶ’ದಿಂದ ಒಂದೇ ಬ್ಯಾಂಕ್ ಖಾತೆ ತೆರೆಯಬೇಕು. ‘ಎಫ್‌ಸಿಆರ್‌ಎ ಖಾತೆ’ ಹೆಸರಲ್ಲಿ ನವದೆಹಲಿಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಖಾತೆ ತೆರೆಯಬೇಕು. ಇದೇ ಖಾತೆಯಲ್ಲಿ ಮಾತ್ರ ವಿದೇಶಿ ದೇಣಿಗೆ ಸ್ವೀಕರಿಸಬೇಕು. ವಿದೇಶಿ ದೇಣಿಗೆ ಹೊರತುಪಡಿಸಿ, ಯಾವುದೇ ಸ್ವರೂಪದ ಠೇವಣಿಯನ್ನು ಈ ಖಾತೆಯಲ್ಲಿ ಮಾಡುವಂತಿಲ್ಲ. ಯಾವುದಾದರೂ ಶೆಡ್ಯೂಲ್ಡ್ ಬ್ಯಾಂಕ್‌ನಲ್ಲಿ ಖಾತೆ ತೆರೆಯಬಹುದು ಎಂಬ 2010ರ ಕಾಯ್ದೆಯ ನಿಯಮವನ್ನು 2020ರಲ್ಲಿ ತಿದ್ದುಪಡಿ ಮಾಡಲಾಗಿದೆ. ಈ ಖಾತೆಯಲ್ಲಿ ಸ್ವೀಕರಿಸಿದ ಹಣವನ್ನು ವಿನಿಯೋಗಿಸಲು ಯಾವುದಾದರೂ ಶೆಡ್ಯೂಲ್ಡ್ ಬ್ಯಾಂಕ್‌ಗಳಲ್ಲಿ ಖಾತೆಗಳನ್ನು ತೆರೆಯಬಹುದು.



ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿ, ಪತ್ರಿಕೆಗಳ ಸಂಪಾದಕರು ಅಥವಾ ಪ್ರಕಾಶಕರು, ನ್ಯಾಯಾಧೀಶರು, ಶಾಸನಸಭೆಯ ಸದಸ್ಯರು, ರಾಜಕೀಯ ಪಕ್ಷಗಳ ಸದಸ್ಯರು ವಿದೇಶಿ ದೇಣಿಗೆ ಸ್ವೀಕರಿಸುವಂತಿಲ್ಲ. 2020ರ ತಿದ್ದುಪಡಿ ಕಾಯ್ದೆಯು ಸರ್ಕಾರಿ ನೌಕರರು ದೇಣಿಗೆ ಸ್ವೀಕರಿಸುವಂತಿಲ್ಲ ಎಂದು ಹೇಳಿದೆ. ಸರ್ಕಾರಿ ಕೆಲಸದಲ್ಲಿರುವ ಅಥವಾ ಸರ್ಕಾರದ ವೇತನ ಪಡೆಯುವ ಅಥವಾ ಸರ್ಕಾರಕ್ಕೆ ಸಂಬಂಧಿಸಿದ ಕೆಲಸ ನಿರ್ವಹಿಸಿದ್ದಕ್ಕಾಗಿ ಗೌರವಧನ ಪಡೆಯುವವರು ಈ ವ್ಯಾಪ್ತಿಯಲ್ಲಿ ಬರುತ್ತಾರೆ.

ವಿದೇಶಿ ದೇಣಿಗೆ ಪಡೆಯುವವರು ಅನುಮತಿ ನವೀಕರಣಕ್ಕೆ ಅರ್ಜಿ ಸಲ್ಲಿಸಬೇಕು. ಹೊಸದಾಗಿ ಅರ್ಜಿ ಸಲ್ಲಿಸುವರು, ಅನುಮತಿ ಪಡೆಯುವವರು ಅಥವಾ ನವೀಕರಣಕ್ಕೆ ಅರ್ಜಿ ಸಲ್ಲಿಸುವವರು ಕಡ್ಡಾಯವಾಗಿ ಆಧಾರ್ ಸಂಖ್ಯೆ ಒದಗಿಸಬೇಕು. ಎಲ್ಲ ಪದಾಧಿಕಾರಿಗಳು, ನಿರ್ದೇಶಕರು ಹಾಗೂ ಮುಖ್ಯ ಕಾರ್ಯ ನಿರ್ವಾಹಕರ ಆಧಾರ್ ಸಂಖ್ಯೆಗಳನ್ನು ಒದಗಿಸಬೇಕು. ವಿದೇಶಿ ಪ್ರಜೆಯಾಗಿದ್ದರೆ, ಅವರು ತಮ್ಮ ಪಾಸ್‌ಪೋರ್ಟ್ ಅಥವಾ ಭಾರತದ ಸಾಗರೋತ್ತರ ನಾಗರಿಕ ಗುರುತಿನ ಕಾರ್ಡ್ ಒದಗಿಸಬೇಕು.

ವಿದೇಶಿ ದೇಣಿಗೆ ಬಳಕೆಯಲ್ಲಿ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿರುವುದು ಕಂಡುಬಂದರೆ, ಬಳಕೆಯಾಗದೇ ಉಳಿದ ಹಣವನ್ನು ಬಳಸಲು ಅಥವಾ ಸ್ವೀಕರಿಸಬೇಕಿರುವ ಹಣವನ್ನು ಸ್ವೀಕರಿಸಲು ಕೇಂದ್ರ ಸರ್ಕಾರದ ಅನುಮತಿ ಅಗತ್ಯ. ಬಳಕೆಯಾಗದೇ ಉಳಿದಿರುವ ಹಣವನ್ನು ಬಳಕೆ ಮಾಡುವುದರ ಮೇಲೆ ಸರ್ಕಾರ ನಿರ್ಬಂಧ ವಿಧಿಸಬಹುದು. ಅಂದರೆ ಆ ವ್ಯಕ್ತಿಯ ವಿರುದ್ಧ ತನಿಖೆ ನಡೆಯುತ್ತಿದ್ದು ವಿಚಾರಣೆ ಬಾಕಿಯಿದ್ದರೆ ಅಥವಾ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂಬ ಆರೋಪ ಇದ್ದರೆ, ಸರ್ಕಾರ ನಿರ್ಬಂಧ ವಿಧಿಸಬಹುದು.

ವಿದೇಶಿ ದೇಣಿಗೆ ಪಡೆಯುವ ಪರವಾನಗಿ ಅವಧಿ ಮುಗಿಯುವ ಆರು ತಿಂಗಳ ಒಳಗೆ ನವೀಕರಣ ಮಾಡಿಕೊಳ್ಳಬೇಕು. ನವೀಕರಣ ಮಾನ್ಯ ಮಾಡುವ ಮುನ್ನ ಸರ್ಕಾರವು ಅರ್ಜಿದಾರರ ಮೇಲೆ ತನಿಖೆ ನಡೆಸಬಹುದು. ಸಂಸ್ಥೆ ಅಥವಾ ವ್ಯಕ್ತಿಯು ಬೇನಾಮಿ ಅಲ್ಲ; ಕೋಮು ಉದ್ವಿಗ್ನತೆಯನ್ನು ಸೃಷ್ಟಿಸುವುದಕ್ಕಾಗಿ ಅಥವಾ ಮತಾಂತರ ಚಟುವಟಿಕೆಗಳಲ್ಲಿ ತೊಡಗಿದ್ದಕ್ಕಾಗಿ ಕಾನೂನು ಕ್ರಮಕ್ಕೆ ಒಳಗಾಗಿಲ್ಲ; ಹಣ ದುರುಪಯೋಗ ವಿಚಾರದಲ್ಲಿ ತಪ್ಪಿತಸ್ಥರೆಂದು ಕಂಡುಬಂದಿಲ್ಲ – ಎಂಬುದನ್ನು ಸರ್ಕಾರ ಖಚಿತಪಡಿಸಿಕೊಂಡ ಬಳಿಕ ನವೀಕರಣಕ್ಕೆ ಅನುಮತಿ ನೀಡಬಹುದು.

ವಿದೇಶಿ ದೇಣಿಗೆ ಹಣವನ್ನು ಆಡಳಿತಾತ್ಮಕ ಉದ್ದೇಶಕ್ಕೆ ಬಳಸುವುದರ ಮೇಲೆ ಇದ್ದ ಪ್ರಮಾಣದ ಮಿತಿಯನ್ನು ಇಳಿಸಲಾಗಿದೆ. 2010ರ ತಿದ್ದುಪಡಿ ಕಾಯ್ದೆಯಲ್ಲಿ ಶೇ 50ರಷ್ಟು ಹಣವನ್ನು ಆಡಳಿತಾತ್ಮಕ ಉದ್ದೇಶಕ್ಕೆ ಬಳಸಲು ಅನುಮತಿ ಇತ್ತು. ಈ ಪ್ರಮಾಣವನ್ನು 2020ರ ತಿದ್ದುಪಡಿ ಕಾಯ್ದೆಯಲ್ಲಿ ಶೇ 20ಕ್ಕೆ ನಿಗದಿಪಡಿಸಲಾಗಿದೆ.

ವಿಪಕ್ಷ ಆಡಳಿತವಿರುವ ರಾಜ್ಯಗಳ ಎನ್‌ಜಿಒಗಳೇ ಗುರಿ

ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯ ಅಡಿ ನೋಂದಣಿಯಾಗಿರುವ, 6,000ಕ್ಕೂ ಹೆಚ್ಚು ಸ್ವಯಸೇವಾ ಸಂಸ್ಥೆಗಳಿಗೆ (ಎನ್‌ಜಿಒ) ವಿದೇಶಗಳಿಂದ ದೇಣಿಗೆ ಪಡೆಯಲು ನೀಡಲಾಗಿದ್ದ ಪರವಾನಗಿಯನ್ನು ಕೇಂದ್ರ ಸರ್ಕಾರವು ರದ್ದುಪಡಿಸಿದೆ. ವಿವಿಧ ಕಾರಣಗಳನ್ನು ನೀಡಿ, ಪರವಾನಗಿ ರದ್ದುಪಡಿಸಲಾಗಿದೆ. ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ ನೋಂದಣಿಯಾಗಿರುವ ಎನ್‌ಜಿಒಗಳೇ ಹೆಚ್ಚಿನ ಸಂಖ್ಯೆಯಲ್ಲಿ ಈ ಕ್ರಮಕ್ಕೆ ಗುರಿಯಾಗಿವೆ. ಅಲ್ಲದೆ, ಕ್ರೈಸ್ತ ಧಾರ್ಮಿಕ ಸಂಸ್ಥೆ ಎಂದು ಘೋಷಿಸಿಕೊಂಡಿರುವ ಎನ್‌ಜಿಒಗಳು ಹೆಚ್ಚಿನ ಸಂಖ್ಯೆಯಲ್ಲಿ ಪರವಾನಗಿ ಕಳೆದುಕೊಂಡಿವೆ


- ಬಿಜೆಪಿ ಮತ್ತು ಬಿಜೆಪಿ ಮಿತ್ರಪಕ್ಷಗಳ ಆಡಳಿತವಿರುವ ರಾಜ್ಯಗಳು
- ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳು


00 ಪರವಾನಗಿ ರದ್ದಾದ ಎನ್‌ಜಿಒಗಳ ಒಟ್ಟು ಸಂಖ್ಯೆ

00 ಮುಸ್ಲಿಂ ಧಾರ್ಮಿಕ ಸಂಸ್ಥೆ (ಇದರಲ್ಲಿ ಶೈಕ್ಷಣಿಕ ಸಂಸ್ಥೆಗಳು ಸೇರಿಲ್ಲ)

00 ಕ್ರೈಸ್ತ ಧಾರ್ಮಿಕ ಸಂಸ್ಥೆಗಳ ಸಂಖ್ಯೆ (ಇದರಲ್ಲಿ ಶೈಕ್ಷಣಿಕ ಸಂಸ್ಥೆಗಳು ಸೇರಿಲ್ಲ)

20,675
2011ರಿಂದ ಈವರೆಗೆ ಪರವಾನಗಿ ಮತ್ತು ನೋಂದಣಿ ರದ್ದಾಗಿರುವ ಎನ್‌ಜಿಒಗಳು





- ಮದರ್ ತೆರೆಸಾ ಸ್ಥಾಪಿಸಿದ್ದ ಮಿಷನರೀಸ್ ಆಫ್ ಚಾರಿಟಿ, ಜಾಮಿಯಾ ಮಿಲಿಯಾ ಇಸ್ಲಾಮಿಯಾ, ಭಾರತೀಯ ವೈದ್ಯಕೀಯ ಸಂಘಟನೆಗಳು ಪರವಾನಗಿ ರದ್ದಾಗಿವೆ
- ಎಫ್‌ಸಿಆರ್‌ಎ ಜಾರಿಗೆ ಬಂದ ದಿನದಿಂದ ವಿದೇಶಿ ದೇಣಿಗೆ ಪಡೆಯಲು ನೀಡಲಾಗಿದ್ದ ಪರವಾನಗಿ ರದ್ದಾದ ಒಟ್ಟು ಎನ್‌ಜಿಒಗಳಲ್ಲಿ ಶೇ 25ಕ್ಕಿಂತಲೂ ಹೆಚ್ಚು ಎನ್‌ಜಿಒಗಳು ವಿರೋಧ ಪಕ್ಷಗಳ ಆಡಳಿತವಿರುವ ಐದು ರಾಜ್ಯಗಳಿಗೆ ಸೇರಿದ್ದವಾಗಿವೆ
- ವಿರೋಧ ಪಕ್ಷಗಳ ಆಡಳಿತವಿರುವ ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ, ತೆಲಂಗಾಣ, ಮಹಾರಾಷ್ಟ್ರದಲ್ಲಿ ಕ್ರೈಸ್ತ ಧಾರ್ಮಿಕ ಸಂಸ್ಥೆಗಳಿಗೆ ನೀಡಿರುವ ಪರವಾನಗಿ ಮತ್ತು ನೋಂದಣಿಯನ್ನು ಹೆಚ್ಚಿನ ಸಂಖ್ಯೆಯಲ್ಲಿ ರದ್ದುಪಡಿಸಲಾಗಿದೆ
- ಪಶ್ಚಿಮ ಬಂಗಾಳದಲ್ಲಿ ಕ್ರೈಸ್ತ ಧಾರ್ಮಿಕ ಸಂಸ್ಥೆಗಳು, ಮುಸ್ಲಿಂ ಧಾರ್ಮಿಕ ಸಂಸ್ಥೆಗಳಿಗೆ ನೀಡಿರುವ ಪರವಾನಗಿ, ನೋಂದಣಿಯನ್ನು ಹೆಚ್ಚಿನ ಸಂಖ್ಯೆಯಲ್ಲಿ ರದ್ದುಪಡಿಸಲಾಗಿದೆ. ಜತೆಗೆ ರಾಮಕೃಷ್ಣ ಮಠ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲಾ ಸಂಸ್ಥೆಗಳ ಪರವಾನಗಿಯನ್ನು ರದ್ದುಪಡಿಸಲಾಗಿದೆ

ಪ್ರಜಾವಾಣಿ ಗ್ರಾಫಿಕ್ಸ್

ಆಧಾರ: ಕೇಂದ್ರ ಗೃಹ ಸಚಿವಾಲಯದ ಎಫ್‌ಸಿಆರ್‌ಎ ಆನ್‌ಲೈನ್ ಪೋರ್ಟಲ್ ಮತ್ತು ಡ್ಯಾಶ್‌ಬೋರ್ಡ್, ಪಿಟಿಐ, ಬಿಬಿಸಿ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 10

ಸದ್ಗತಿ ಪಡೆದ ಬಿಂದುಗ

ಜಗನ್ಮಾತೆ ಗೌರಿಯು ಹೇಳಿದ ಪಾಪಪರಿಹಾರದ ಮಾತು ಕೇಳಿ ಸಂತೋಷದಿಂದ ಕೈಮುಗಿದುಕೊಂಡೇ ಚಂಚುಲೆ ವಿನಮ್ರಳಾಗಿ ‘ಎ ಜಗಜ್ಜನನಿ, ನನ್ನ ಪತಿಯ ಪಾಪಗಳೆಲ್ಲ ನಾಶವಾಗಿ, ಸದ್ಗತಿಯುಂಟಾಗಲು ಅವನಿಗೆ ಶಿವಕಥೆ ಕೇಳುವಂತಾಗಲು ನೀನೇ ಸಹಾಯ ಮಾಡಬೇಕು’ ಅಂತ ಕೇಳಿಕೊಳ್ಳುತ್ತಾಳೆ.

ಆಗ ಜಗನ್ಮಾತೆ ಗಿರಿಜೆ, ಸಂಗೀತ ಸಾಮ್ರಾಟನಾದ ಗಂಧರ್ವರಾಜ ತುಂಬುರುನನ್ನು ಕರೆದು ‘ಎಲೈ ತುಂಬುರು, ನೀನು ನನ್ನ ಮಾನಸಪುತ್ರ. ನೀನು ಯಾವಾಗಲೂ ಶಿವನ ಕೀರ್ತನೆ ಮಾಡಿ ಸಂತೋಷವನ್ನುಂಟುಮಾಡುವವನು. ಈಗ ನೀನು ಚಂಚುಲೆಯೊಡನೆ ವಿಂಧ್ಯಪರ್ವತಕ್ಕೆ ಹೋಗಿ ಅಲ್ಲಿ ಶಿವಕೀರ್ತನೆ ಮಾಡು. ಇದನ್ನು ಕೇಳಿದ ಇವಳ ಪತಿಯ ಪಾಪ ಪರಿಹಾರವಾಗಲಿ’ ಅಂತ ಕಳುಹಿಸಿಕೊಡುತ್ತಾಳೆ. ಪಾರ್ವತಿಮಾತೆ ಮಾತಿನಂತೆ ಚಂಚುಲೆಯೊಡನೆ ತುಂಬುರು ವಿಮಾನವನ್ನೇರಿ ವಿಂಧ್ಯಾದ್ರಿಗೆ ಬರುತ್ತಾನೆ.

ವಿಂಧ್ಯಪರ್ವತದಲ್ಲಿ ದೊಡ್ಡದಾದ ದೇಹ ಮತ್ತು ಉದ್ದವಾದ ದವಡೆಯುಳ್ಳ ಒಂದು ಪಿಶಾಚಿ ಕಾಣಿಸುತ್ತದೆ. ಒಮ್ಮೆ ವಿಕಾರವಾಗಿ ನಗುತ್ತ, ಇನ್ನೊಮ್ಮೆ ಅಳುತ್ತ, ವಿಚಿತ್ರವಾಗಿ ಅಡ್ಡಾಡುತ್ತಿದ್ದ ಪಿಶಾಚಿಯನ್ನು ಗಾನಗಂಧರ್ವರಾಜ ತುಂಬುರು ಹಿಡಿದು ಮರಕ್ಕೆ ಕಟ್ಟಿ ಹಾಕಿದ. ನಂತರ, ಶಿವಕೀರ್ತನೆ ಮಾಡಲು ಬೇಕಾದ ಸಿದ್ಧತೆ ಮಾಡುತ್ತಿದ್ದ. ಅಷ್ಟರಲ್ಲಿ ದೇವತೆಗಳು ಋಷಿಮುನಿಗಳೆಲ್ಲಾ ವಿಂಧ್ಯಪರ್ವತಕ್ಕೆ ಧಾವಿಸಿ ಬರತೊಡಗಿದರು. ಪಿಶಾಚವಿಮೋಚನೆಗೆ ತುಂಬುರು ಮಾಡುವ ಶಿವಪುರಾಣದ ಕೀರ್ತನೆಯನ್ನು ಕೇಳಲು ಅವರೆಲ್ಲ ಗುಂಪುಗೂಡಿದರು. ತುಂಬುರು ವೀಣೆಯನ್ನು ನುಡಿಸುತ್ತಾ ಮಂಗಳಕರವಾದ ಶಿವನ ಕಥೆಯನ್ನು ಹಾಡತೊಡಗಿದ. ಶಿವಪುರಾಣದ ಎಲ್ಲಾ ಏಳು ಸಂಹಿತೆಯನ್ನೂ ಪೂರ್ತಿಯಾಗಿ ಕೇಳಿದ ದೇವಮುನಿಗಳೆಲ್ಲಾ ತುಂಬುರುಸಂಗೀತದ ಮೋಡಿಯಲ್ಲಿ ತೇಲಿಹೋದರು. ಅದ್ಭುತ ಶಿವಕೀರ್ತನೆಯನ್ನು ಕೇಳಿ ಭಕ್ತಿ ಪರವಶರಾಗಿ ತಲೆದೂಗಿ ಕುಣಿದು ಕೃತಾರ್ಥರಾದರು.

ಪಿಶಾಚನಾದ ಬಿಂದುಗ ಶಿವಪುರಾಣವನ್ನು ಕೇಳಿ ಪುನೀತನಾದ. ಅವನ ಪಿಶಾಚಜನ್ಮ ಹೋಗಿ ಪರಿಶುದ್ಧನಾದ. ಆ ಕ್ಷಣವೇ ಅವನ ಶರೀರವು ಬಿಳುಪಾಯಿತು. ಅವನು ಬಿಳುಪಾದ ಬಟ್ಟೆಯನ್ನುಟ್ಟು, ಸರ್ವಾಲಂಕಾರಭೂಷಿತನಾಗಿ ಕಂಗೊಳಿಸುತ್ತಿದ್ದ. ಅಷ್ಟರಲ್ಲಿ ಶಿವನಂತೆ ಅವನಿಗೆ ಮೂರು ಕಣ್ಣು ಬಂತು. ತಲೆಯ ಮೇಲೆ ಚಂದ್ರ ಬಂದ. ಸಾಕ್ಷಾತ್ ಶಿವನ ದಿವ್ಯರೂಪವೇ ಆದ. ಇಂಥ ದಿವ್ಯರೂಪವನ್ನೂ ದಿವ್ಯಶರೀರವನ್ನೂ ಧರಿಸಿದ ಬಿಂದುಗ ತನ್ನ ಪತ್ನಿಯಾದ ಚಂಚುಲೆಯೊಡನೆ ಮಹೇಶ್ವರನ ಚರಿತ್ರೆಯ ಗುಣಗಾನಮಾಡಿದ. ದೇವರ್ಷಿಗಳೆಲ್ಲರೂ ಚಂಚುಲೆ-ಬಿಂದುಗ ದಂಪತಿಯ ಪುನರ್ ಮಿಲನದ ಸಂಭ್ರಮ ಕಂಡು ಪರಮಾನಂದಪಟ್ಟರು. ಮಹೇಶ್ವರನ ಚರಿತ್ರೆಯನ್ನು ಕೇಳಿ ಬಿಂದುಗನ ಪಿಶಾಚರೂಪ ಹೋಗಿ, ದಿವ್ಯವಾದ ರೂಪ ತಾಳಿದ್ದನ್ನು ಕಣ್ಣಾರೆ ಕಂಡ ದೇವಋಷಿಗಳೆಲ್ಲರೂ ಶಂಕರನ ಮಹಿಮೆಯನ್ನು ಕೊಂಡಾಡುತ್ತಾ ಅಲ್ಲಿಂದ ತೆರಳಿದರು.

ಪಾಪವಿಮುಕ್ತನಾದ ಬಿಂದುಗ ತನ್ನ ದಿವ್ಯವಾದ ರೂಪಿನಿಂದ ಪತ್ನಿ ಚಂಚುಲೆಯ ಪಕ್ಕದಲ್ಲಿ ಕುಳಿತು ವಿಮಾನದಲ್ಲಿ ಕೈಲಾಸಕ್ಕೆ ಹೋಗುವಾಗ ಬಹಳ ಆನಂದಪಟ್ಟ. ತನ್ನ ಶಾಪವಿಮೋಚನೆಗಾಗಿ ಪತ್ನಿ ಮಾಡಿದ ಸಹಾಯವನ್ನು ಕೃತಜ್ಞತೆಯಿಂದ ಸ್ಮರಿಸಿದ. ಕೈಲಾಸದಲ್ಲಿ ವಿಮಾನದಿಂದ ಇಳಿದು ಶಿವನ ಬಳಿ ಹೋಗುವಾಗ, ಮತ್ತೆ ಗಂಧರ್ವಗಾಯಕ ತುಂಬುರು ಮಹೇಶ್ವರನ ಮನೋಹರವಾದ ಗುಣಗಳ ಕೀರ್ತನೆ ಮಾಡಿದ. ಅಲ್ಲಿ ನೆರೆದಿದ್ದ ದೇವಗಣಗಳು ಭಕ್ತಿಯಿಂದ ಮೈಮರೆತು ಕುಣಿದವು. ಕೊನೆಯಲ್ಲಿ ತಮ್ಮ ಬಳಿ ಬಂದು ಭಕ್ತಿಯಿಂದ ನಮಸ್ಕರಿಸಿದ ಬಿಂದುಗನನ್ನು ಈಶ್ವರ-ಪಾರ್ವತಿ ಕರುಣೆಯಿಂದ ಅನುಗ್ರಹಿಸಿದರು. ಗಂಡನ ಪಾಪಮುಕ್ತಿಗೆ ಶ್ರಮಿಸಿದ ಚಂಚುಲೆಯು ಪಾರ್ವತಿಗೆ ಪ್ರಿಯಸಖಿಯಾದಳು. ಆನಂದಮಯವಾದ ಕೈಲಾಸದಲ್ಲಿ ಬಿಂದುಗನು ಪತ್ನಿಯೊಂದಿಗೆ ಶಾಶ್ವತವಾಗಿ ನೆಲೆಸಿ ಪರಮಸುಖ ಪಡೆದ.

ಹೀಗೆ ಬಿಂದುಗ ಮತ್ತು ಚಂಚುಲೆ ದಂಪತಿಕಥೆ ಹೇಳಿದ ಸೂತಮುನಿಯು ‘ಯಾರು ಶಿವಪುರಾಣವನ್ನು ಭಕ್ತಿಯಿಂದ ಕೇಳುವರೋ, ಏಕಚಿತ್ತದಿಂದ ಯಾವಾಗಲೂ ಗಾನಮಾಡುವರೋ, ಅವರು ಈ ಲೋಕದಲ್ಲಿ ಅನೇಕ ಸುಖವನ್ನನುಭವಿಸಿ, ಕೊನೆಯಲ್ಲಿ ಮುಕ್ತಿಯನ್ನು ಪಡೆಯುವರು’ ಎಂದು ಶೌನಕ ಮತ್ತಿತರ ಮುನಿಗಳಿಗೆ ತಿಳಿಸಿದ.

ಗುಂಡಣ್ಣ





ಸೃಷ್ಟಿಕಟ್ಟಡದಲ್ಲಿ ಇಟ್ಟಿಗೆ

ಕಟ್ಟಡದ ಪರಿಯನಿಟ್ಟಿಗೆಯೆಂತು ಕಂಡೀತು? |
ಗಟ್ಟಿ ನಿಲಲದು ಬೀಳೆ ಗೋಡೆ ಬಿರಿಯುವುದು ||
ಸೃಷ್ಟಿ ಕೋಟೆಯಲ್ಲಿ ನೀನೊಂದಿಟಿಕೆ, ಸೊಟ್ಟಾಗೆ |
ಪೆಟ್ಟು ತಿನ್ನುವೆ ಜೋಕೆ – ಮಂಕುತಿಮ್ಮ || 532 ||

ಪದ-ಅರ್ಥ: ಪರಿಯನಿಟ್ಟಿಗೆಯೆಂತು = ಪರಿಯನು-(ರೀತಿಯ) + ಇಟ್ಟಿಗೆ + ಎಂತು, ಬೀಳೆ = ಬಿದ್ದರೆ, ನೀನೊಂದಿಟಿಕೆ = ನೀನು + ಒಂದು + ಇಟಿಕೆ(ಇಟ್ಟಿಗೆ).

ವಾಚ್ಯಾರ್ಥ: ಒಂದು ಇಟ್ಟಿಗೆ ಕಟ್ಟಡದ ರೀತಿಯನ್ನು ಹೇಗೆ ಕಂಡೀತು? ಆದರೆ ಅದು ಗಟ್ಟಿ ನಿಲ್ಲದೆ ಬಿದ್ದರೆ ಗೋಡೆಯೇ ಬಿರಿಯುತ್ತದೆ. ಸೃಷ್ಟಿಯ ಕೋಟೆಯಲ್ಲಿ ನೀನೂ ಒಂದು ಇಟ್ಟಿಗೆ. ನೀನು ಸೊಟ್ಟಾದರೆ ಪೆಟ್ಟು ತಿನ್ನಬೇಕಾದೀತು. ಎಚ್ಚರ.

ವಿವರಣೆ: ಈ ಕಗ್ಗದಲ್ಲಿ ಡಿವಿಜಿಯವರು ನಮ್ಮ ಕಣ್ಣ ಮುಂದೆ ಒಂದು ಸುಂದರವಾದ ಉಪಮಾನವನ್ನು ಕೊಡುತ್ತಾರೆ. ಅದು ಅತ್ಯಂತ ಸುಲಭದ, ಎಲ್ಲರೂ ಸಾಮಾನ್ಯವಾಗಿ ಗಮನಿಸಿದಂತಹ ಉದಾಹರಣೆ. ಒಂದು ದೊಡ್ಡ ಕಟ್ಟಡದ ಕೆಲಸ ನಡೆಯುತ್ತಿದೆ. ಅಲ್ಲಿ ಸಾವಿರಾರು ಇಟ್ಟಿಗೆಗಳನ್ನು ಪೇರಿಸಿ ಇಟ್ಟಿದ್ದಾರೆ. ಒಂದು ಇಟ್ಟಿಗೆ, ಇಡೀ ಕಟ್ಟಡದ ಒಂದು ಅತ್ಯಂತ ಚಿಕ್ಕ ಅಂಗ. ಗುಡ್ಡೆಯಲ್ಲಿದ್ದ ಇಟ್ಟಿಗೆಗೆ ತಾನು ಎಲ್ಲಿಗೆ ಹೋಗುತ್ತೇನೆ, ಹೇಗೆ ಬಳಕೆಯಾಗುತ್ತೇನೆ ಎಂಬುದರ ಅರಿವಿಲ್ಲ. ಆದರೆ ಅದನ್ನು ಬಳಸಿ ಗೋಡೆ ಕಟ್ಟಿದಾಗ, ಅದು ಗಟ್ಟಿಯಾಗಿ ತನ್ನ ಸ್ಥಳದಲ್ಲಿ ಕುಳಿತಿರುವುದು ಅವಶ್ಯ. ಅದು ತನ್ನನ್ನು ಬಂಧಿಸಿದ ಸಿಮೆಂಟಿನಿಂದ ಬೇರೆಯಾಗಿ ಅಲುಗಾಡಿದರೆ ಗೋಡೆಯಲ್ಲಿ ಬಿರುಕು ಕಾಣಿಸಿಕೊಳ್ಳುತ್ತದೆ. ಇಡೀ ಗೋಡೆಯೇ ಅಭದ್ರವಾಗುತ್ತದೆ. ಒಂದು ಇಟ್ಟಿಗೆ ಇಡೀ ಕಟ್ಟಡದ ನಕ್ಷೆಯಲ್ಲಿ ಒಂದು ಬಿಂದುವೂ ಅಲ್ಲ. ಆದರೆ ಅದು ಅಮುಖ್ಯವೂ ಅಲ್ಲ.

ಈ ಉಪಮಾನವನ್ನು ಮನುಷ್ಯ ಜೀವನಕ್ಕೆ ಹೊಂದಿಸುತ್ತಾರೆ. ಪ್ರಪಂಚವೊಂದು ಬಹು ದೊಡ್ಡ ಕೋಟೆ ಇದ್ದಂತೆ. ಅದರಲ್ಲಿ ಮನುಷ್ಯ ಒಂದು ಇಟ್ಟಿಗೆ ಇದ್ದಂತೆ. ಅದು ಸರಿಯಾಗಿ ಕೋಟೆಯ ಗೋಡೆಗೆ, ಅವಶ್ಯವಿದ್ದಂತೆ ಹೊಂದಿಕೊಳ್ಳಬೇಕು. ತಾವು ಗಮನಿಸಿರಬೇಕು. ಗೋಡೆಯನ್ನು ಕಟ್ಟುವಾಗ ಗಾರೆಯವನು ಅವಶ್ಯವಿದ್ದ ಜಾಗೆಯಲ್ಲಿ ಇಟ್ಟಿಗೆ ಸರಿ ಹೊಂದುತ್ತದೆಯೇ ಎಂದು ನೋಡುತ್ತಾನೆ. ಸರಿ ಹೊಂದದಿದ್ದರೆ ಅದನ್ನು ಹೊಡೆದು ಕತ್ತರಿಸಿ, ಅರ್ಧವೋ ಮುಕ್ಕಾಲೋ ಮಾಡಿ ಕೂರಿಸುತ್ತಾನೆ. ಅಕಸ್ಮಾತ್ ಯಾವುದೋ ಇಟ್ಟಿಗೆ ಹೊರಗೆ ಚಾಚಿಕೊಂಡಿದ್ದರೆ, ಕರಣೆಯಿಂದ ಹೊಡೆದು ಕತ್ತರಿಸುತ್ತಾನೆ. ಕಟ್ಟಡದ ನಕ್ಷೆಗೆ ಇಟ್ಟಿಗೆ ಹೊಂದಿಕೊಳ್ಳುವುದು ಅವಶ್ಯ. ಅಂತೆಯೇ ವಿಶ್ವನಕ್ಷೆಯಲ್ಲಿ ಮನುಷ್ಯನದೊಂದು ಇಟ್ಟಿಗೆಯ ಪಾತ್ರ. ಸಮಾಜದ ಎಲ್ಲರೊಡನೆ ಸಮರಸವಾಗಿ ಬೆರೆಯುವುದು ವ್ಯವಸ್ಥೆಗೂ, ವೈಯಕ್ತಿಕ ಉನ್ನತಿಗೂ ಅವಶ್ಯಕ.

ಒಂದು ವ್ಯಕ್ತಿತ್ವಕ್ಕೆ ಅರ್ಥಬರುವುದು ಅದು ಇತರರೊಂದಿಗೆ ಸಂಬಂಧ ಪಡೆದಾಗಲೇ. ಒಂದು ವಸ್ತು ಅರ್ಥಪೂರ್ಣವಾಗುವುದು, ಮತ್ತೊಂದರ ಜೊತೆಗೆ ಸೇರಿದಾಗ. ಒಂದು ಪೆನ್ನು ಸರಿಯಾಗಿ ಬರೆಯುವುದು ಲೇಖಕನ ಕೈಯಲ್ಲಿ ಸಿಕ್ಕಾಗ ಮತ್ತು ಕಾಗದದ ಮೇಲೆ ಬರೆದಾಗ. ಲೇಖಕ ಮತ್ತು ಕಾಗದವಿಲ್ಲದಿದ್ದರೆ ಪೆನ್ನಿಗೆ ಅರ್ಥವಿಲ್ಲ. ನಾನೊಬ್ಬ ವಿಶಿಷ್ಟ ವ್ಯಕ್ತಿ ಎಂದು ಎಲ್ಲರಿಂದ ಬೇರೆಯಾಗಿ ನಿಂತರೆ, ಸೃಷ್ಟಿಯಂತ್ರದಲ್ಲಿ ಪೆಟ್ಟು ತಿನ್ನಬೇಕಾಗುತ್ತದೆ. ಆದ್ದರಿಂದ ವ್ಯಕ್ತಿ ತನ್ನ ಅಹಂಕಾರವನ್ನು ತೊರೆದು ಸಮಷ್ಟಿ ಜೀವನದಲ್ಲಿ ಹೊಂದಾಣಿಕೆಯಿಂದ ಬದುಕಿದರೆ ಅದು ಪ್ರಪಂಚಕ್ಕೂ ಕ್ಷೇಮ, ವ್ಯಕ್ತಿಯೂ ಸುರಕ್ಷಿತ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ ಕಮ್ಮರಡಿ — ಸೋಮವಾರ ಜನವರಿ 3, 2022

ಶ್ರೀ ಪ್ಲವನಾಮ ಸಂವತ್ಸರ ದಕ್ಷಿಣಾಯಣ – ಹೇಮಂತ ಋತು ಧನುರ್ಮಾಸದ 18 ನೇ ದಿನ
ತಿಥಿ: (ಪೌಷ ಶುಕ್ಲ) ಪ್ರತಿಪದ್ ಗಂ. 20-32 ನಕ್ಷತ್ರ: ಪೂರ್ವಾಷಾಢಾ ಗಂ. 13-33 ಯೋಗ: ವ್ಯಾಘಾತ ಗಂ. 25-24, ಕರಣ: ಕಿಂಸ್ತುಘ್ನ ಗಂ. 10-16, ಬವ ಗಂ. 20-32.
ರಾಹುಕಾಲ : ಬೆಳಿಗ್ಗೆ 07:30 – 09:00 ಸೂರ್ಯೋದಯ : 06-58 ಸೂರ್ಯಾಸ್ತ : 06-12
ಮುಸ್ಲಿಂ ದಿನಾಂಕ : 29 ಜುಮಾದುಲ್ಲಾವಲ್ ಅದೃಷ್ಟ ಸಂಖ್ಯೆ : 1, 9

ಮೇಷ: ಹಣ ಹೂಡಿಕೆಯ ವಿಷಯದಲ್ಲಿ ಅನಿಸಿಕೆಯಂತೆ ನಡೆಯುವುದು ಉತ್ತಮವಾಗಿರುತ್ತದೆ. ಕಲಾವಿದರಿಗೆ ಮುಂಬರುವ ಸ್ಪರ್ಧೆಗಳಿಗೆ ತಯಾರಿ ಮಾಡಿಕೊಳ್ಳಲು ಶುಭದಿನ. ಮದುವೆ ಸಿದ್ಧತೆಗಳು ಸಮರ್ಪಕವಾಗಿ ನಡೆಯಲಿವೆ.

ವೃಷಭ: ಈ ದಿನ ನಿಮಗೆ ಸಂತೋಷ ಮತ್ತು ಶಾಂತಿಯು ಸಮವಾಗಿರುತ್ತದೆ. ದುರಹಂಕಾರ ತೋರಿದಲ್ಲಿ ತೊಂದರೆಗೆ ಸಿಲುಕುವ ಸಂಭವವಿದೆ. ನಿಮ್ಮ ನಡವಳಿಕೆಯಲ್ಲಿ ಮೃದುತ್ವವನ್ನು ಅಳವಡಿಸಿಕೊಳ್ಳುವುದು ಉತ್ತಮ.

ಮಿಥುನ: ಸ್ವ ಉದ್ಯೋಗಿಗಳಿಂದ ಧನ ಸಹಾಯ ಸಿಗಲಿದೆ. ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಕೊಳ್ಳಲು ಈ ದಿನ ಶುಭವಲ್ಲ. ನಿಮ್ಮ ಸಹೋದ್ಯೋಗಿಗಳೊಂದಿಗೆ ಇರುವ ಬಾಂಧವ್ಯ ಇನ್ನಷ್ಟು ಉತ್ತಮಗೊಳ್ಳಲಿದೆ.

ಕರ್ಕಾಟಕ: ಈ ದಿನದ ಪರಿಸ್ಥಿತಿಗಳು ಕೊಂಚ ಕಿರಿಕಿರಿ ಮೂಡಿಸಿದರೂ ಫಲಿತಾಂಶ ಸಕಾರಾತ್ಮಕವಾಗಿರುವುದು. ಕೌಟುಂಬಿಕವಾಗಿ ತೀರ್ಮಾನ ತೆಗೆದುಕೊಳ್ಳುವ ವಿಚಾರದಲ್ಲಿ ಆತುರ ಬೇಡ.

ಸಿಂಹ: ದೂರ ಸಂಚಾರದ ಯೋಗವಿದೆ. ಬಂಧುಗಳ ಸಹಾಯದಿಂದ ಪುತ್ರನಿಗೆ ಕಾರ್ಯಾನುಕೂಲ. ನೆನೆಗುದಿಯಲ್ಲಿದ್ದ ಸಮಸ್ಯೆಗಳಿಗೆ ಪರಿಹಾರ ದೊರೆತು ಮನಸ್ಸಿಗೆ ಸಂತಸ. ನಿಮ್ಮ ಮೌನದ ಉತ್ತರದಿಂದ ಶತ್ರುಗಳು ದೂರಾಗುವರು.

ಕನ್ಯಾ: ಕುಟುಂಬದ ಸಮಸ್ಯೆಗಳತ್ತ ಗಮನ ಹರಿಸಿ ಬಗೆಹರಿಸುವಿರಿ. ಸೋದರ ಮಾವನವರ ಆರೋಗ್ಯ ಉತ್ತಮಗೊಳ್ಳುವುದು. ಸೌಂದರ್ಯ ಸಾಮಗ್ರಿಗಳ ಖರೀದಿ. ಕೆಲಸ ಕಾರ್ಯಗಳು ಅಡೆಚಣೆಗಳಿಲ್ಲದೆ ಸುಗಮವಾಗಿ ಸಾಗುವವು.

ತುಲಾ: ಮಂಗಳಕಾರ್ಯಗಳ ಶುಭಸೂಚನೆಗಳು ಕಂಡುಬರುತ್ತದೆ. ಹಂತ ಹಂತವಾಗಿ ಆರ್ಥಿಕ ಸ್ಥಿತಿ ಗಟ್ಟಿಯಾಗುತ್ತಲೇ ಹೋಗಲಿದೆ. ತಂದೆ-ತಾಯಿಯ ಆರೋಗ್ಯ ಸ್ಥಿತಿ ಉತ್ತಮ. ಮಲ್ಲಿಕಾರ್ಜುನನ ಆರಾಧನೆ ಮಾಡಿ.

ವೃಶ್ಚಿಕ: ವಾಕ್ಚಾತುರ್ಯದಿಂದ ಕೆಲಸ–ಕಾರ್ಯಗಳನ್ನು ಸಂಪೂರ್ಣವಾಗಿ ನೆರವೇರಿಸಿಕೊಳ್ಳುವಿರಿ. ತತ್ವಜ್ಞಾನಿಗಳೊಡನೆ ಸುದೀರ್ಘ ಚರ್ಚೆ ನಡೆದು ಬುದ್ಧಿಮಟ್ಟ ಹೆಚ್ಚಲಿದೆ. ನಿಶ್ಚಿತ ಕಾರ್ಯಗಳಿಗೆ ಹಣದ ಹರಿವು ಸರಾಗವಾಗಿರುವುದು.

ಧನು: ಗೆಳೆಯರ ಸವಾಲಿನಲ್ಲಿ ಸದಾ ವಿಜಯ ನಿಮ್ಮದೇ ಆದ್ದರಿಂದ ಬೇಸರವಿಲ್ಲದೇ ಸಂತಸದಿಂದಿರುವಿರಿ. ಅನಿರೀಕ್ಷಿತವಾಗಿ ತೋರಿಬರುವ ಅಡ್ಡಿ-ಆತಂಕಗಳಿಗೆ ಧೈರ್ಯಗೆಡದಿರಿ. ಕಷ್ಟ-ನಷ್ಟಗಳು ಶಮನಗೊಳ್ಳುತ್ತವೆ.

ಮಕರ: ಅವಿವಾಹಿತ ಹೆಣ್ಣುಮಕ್ಕಳಿಗೆ ಅನಿರೀಕ್ಷಿತವಾಗಿ ಕಂಕಣಬಲ ಕೂಡಿಬರುವುದು. ದುಡ್ಡಿನ ವಿಷಯದಲ್ಲಿ ಮೋಸ ಹೋಗುವ ಸಂಭವವಿದೆ, ಎಚ್ಚರವಾಗಿರಿ. ಅಲಂಕಾರಿಕ ವಸ್ತುಗಳ ಮಾರಾಟದವರಿಗೆ ನೆಮ್ಮದಿ.

ಕುಂಭ: ಎಲ್ಲದರಿಂದಲೂ ಧನಲಾಭವನ್ನು ಮಾತ್ರ ಯೋಚಿಸಬೇಡಿ. ಸಹಾಯ ಮಾಡುವ ಮನಸ್ಥಿತಿಯನ್ನೂ ಬೆಳೆಸಿಕೊಳ್ಳಿ. ನಿಮ್ಮ ಕಾರ್ಯವೈಖರಿ ಲಾಭಕರವಾಗಿ ಮೂಡಿ ಬರುತ್ತದೆ. ಹಾಕಿದ ಯೋಜನೆಗಳು ಸಫಲವಾಗಲಿವೆ.


ಮೀನ: ಬಹಳ ದಿನಗಳಿಂದ ಕಾಡುತ್ತಿದ್ದ ನಿಮ್ಮ ಸಮಸ್ಯೆಯೊಂದು ಇಂದು ದೂರಾಗುವುದು. ಸ್ವ ಉದ್ಯೋಗಿಗಳಿಗೆ ಹೆಚ್ಚಿನ ಪರಿಶ್ರಮದಿಂದ ಅಧಿಕ ಸಂಪಾದನೆ.

ಪದಬಂಧ 4827

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೊಬ್ಬಿದ ಆನೆ (4)
3.ದೇಹದ ಒಂದು ಭಾಗ (4)
5.ಈ ರೀತಿ ಭ್ರಾಂತಿಗೆ ಒಳಗಾಗು (3)
6.ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ (2)
7.ವಾರದೊಳಗೆ ಹಕ್ಕುದಾರ ಬಂದಿರುವನಲ್ಲಾ? (5)
10.ತಿರುಗಿ ಮಾಪನ ಮಾಡು (2)
12.ವನದ ಕೊನೆಗೆ ಬೀಸಿದ ಗಾಳಿ (3)
14.ಬರಿದಾದ ಕೈ (4)
15.ದೇವರನ್ನು ರಥದಲ್ಲಿ ಕೂರಿಸಿ ಮಾಡುವ ಮೆರವಣಿಗೆ (4)

ಮೇಲಿಂದ ಕೆಳಕ್ಕೆ
1.ಬಿಸಿಲುಕುದುರೆ ಇಲ್ಲಿದೆ (4)
2.ಶತ್ರುಗಳನ್ನು ಕೊಲ್ಲುವುದು (5)
3.ಎರಡು ಸಮಪಾಲುಗಳಲ್ಲಿ ಒಂದು (2)
4.ಕಾಡಿನ ಹೂವಿದು (4)
5.ಮರದ ಬಳಿಯಿರುವ ದುಂಬಿ (3)
7.ವಾದ್ಯವನ್ನು ನುಡಿಸುವುದು (3)
8.ಸಂಕೋಚವುಳ್ಳವನು ದಾರದೊಳಗಿದ್ದಾನಲ್ಲಾ! (5)
9.ನೆರವು ನೀಡುವವನು (4)
11.ಭಗವಂತನ ಸಾಕ್ಷಾತ್ಕಾರ ಮಾಡುವುದು (4)
13.ಮರೆಯಾದುದು (2)



4826ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ದಗಲ್ಬಾಜಿ 3.ಪದಚ್ಯುತಿ 5.ನಲ್ಲುಡಿ 6.ನಿಗಮ 8.ಜತನ 9.ವಿವಾಹ 10.ಕಪ್ತಾನ 12.ಇರುಳು 14.ನವಿರೆಳೆ 15.ಅನುಮಾನ

ಮೇಲಿಂದ ಕೆಳಕ್ಕೆ: 1.ದನಾನಿ 2.ಜಿನ 3.ಪಡಿ 4.ತಿಲ್ಲಾನ 7.ಮನೋನಿಗ್ರಹ 8.ಜನನಾಯಕ 9.ವಿಮಾನ 11.ನಯನ 12.ಇಳೆ 13.ಳುಅ

ಸುಡೊಕು 5213

		6		4		3		5
			5		7			
	9	2		3		7		1
2	1		9		3	6		
				1				3
3	8			5			7	
9		8						7
	6			9			3	
4		3			1	2		6

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5212 ಸುಡೊಕು

2	4	8	1	6	3	5	9	7
7	5	6	4	9	8	2	3	1
1	3	9	2	5	7	4	8	6
6	1	5	9	7	4	8	2	3
3	9	7	8	1	2	6	5	4
8	2	4	6	3	5	7	1	9
5	6	3	7	2	1	9	4	8
9	8	2	3	4	6	1	7	5
4	7	1	5	8	9	3	6	2

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹515

ರಾಮನಗರ ರೇಷ್ಮೆ

ಮಿಶ್ರತಳಿ	₹400-675
ದ್ವಿತಳಿ	₹502-786

ಕೃಷಿ ವಲಯದ ಸಾಲ ಗುರಿ ₹18 ಲಕ್ಷ ಕೋಟಿಗೆ ಹೆಚ್ಚಳ?



ನವದೆಹಲಿ (ಪಿಟಿಐ): ಕೃಷಿ ವಲಯಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ 2022–23ನೇ ಸಾಲಿನ ಬಜೆಟ್‌ನಲ್ಲಿ ಕೇಂದ್ರ ಸರ್ಕಾರವು ಕೃಷಿ ಸಾಲ ಗುರಿಯನ್ನು ₹ 18 ಲಕ್ಷ ಕೋಟಿಗೆ ಹೆಚ್ಚಿಸುವ ಸಾಧ್ಯತೆ ಇದೆ. ಕೇಂದ್ರ ಬಜೆಟ್‌ಅನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರುವರಿ 1ರಂದು ಮಂಡಿಸಲಿದ್ದಾರೆ.

ಮಾರ್ಚ್ 31ಕ್ಕೆ ಕೊನೆಗೊಳ್ಳಲಿರುವ 2021–22ನೇ ಸಾಲಿಗೆ ₹ 16.5 ಲಕ್ಷ ಕೋಟಿ ಕೃಷಿ ಸಾಲದ ಗುರಿಯನ್ನು ಕೇಂದ್ರವು ನಿಗದಿ ಮಾಡಿಕೊಂಡಿದೆ. ಕೃಷಿ ವಲಯಕ್ಕೆ ಕೊಡುವ ಸಾಲದ ಗುರಿಯನ್ನು ಕೇಂದ್ರವು ವರ್ಷದಿಂದ ವರ್ಷಕ್ಕೆ ಹೆಚ್ಚಿಸುತ್ತಿದೆ. ಈ ಪರಿಪಾಠವು ಈ ಬಾರಿಯೂ ಮುಂದುವರಿಯುವ ಸಾಧ್ಯತೆ ಇದ್ದು, ಸಾಲದ ಗುರಿಯನ್ನು ₹ 18 ಲಕ್ಷ ಕೋಟಿ ಅಥವಾ ₹ 18.5 ಲಕ್ಷ ಕೋಟಿಗೆ ಹೆಚ್ಚಿಸಬಹುದು ಎಂದು ಮೂಲಗಳು ತಿಳಿಸಿವೆ.

ವಾರ್ಷಿಕ ಕೃಷಿ ಸಾಲದ ಮೊತ್ತವನ್ನು ಕೇಂದ್ರವು ನಿಗದಿ ಮಾಡುತ್ತದೆ. ಇದರಲ್ಲಿ ಬ್ಯಾಂಕ್‌ಗಳಿಂದ ನೀಡಲಾಗುವ ಬೆಳೆ ಸಾಲದ ಮೊತ್ತವೂ ಸೇರಿದೆ. ಕೃಷಿ ವಲಯಕ್ಕೆ ಕೊಡುತ್ತಿರುವ ಸಾಲದ ಮೊತ್ತವು ಈಚಿನ ವರ್ಷಗಳಲ್ಲಿ ಹೆಚ್ಚುತ್ತ ಸಾಗಿದೆ. ಕೆಲವು ವರ್ಷಗಳಲ್ಲಿ ಗುರಿಗಿಂತಲೂ ಹೆಚ್ಚಿನ ಮೊತ್ತವನ್ನು ಸಾಲವಾಗಿ ನೀಡಿದ ನಿದರ್ಶನ ಇದೆ.

‘ಕೃಷಿ ಉತ್ಪಾದನೆ ಹೆಚ್ಚಿಸುವಲ್ಲಿ ಸಾಲ ನೀಡಿಕೆಯು ಮಹತ್ವದ್ದು. ಬ್ಯಾಂಕ್, ಸಹಕಾರ ಸಂಘಗಳ ಮೂಲಕ ರೈತರಿಗೆ ಸಾಲ ವಿತರಣೆ ಮಾಡಿದರೆ, ಅವರು ಹೆಚ್ಚಿನ ಬಡ್ಡಿಗೆ ಇತರರಿಂದ ಸಾಲ ಪಡೆಯುವ ಸಂಕಷ್ಟ ನಿವಾರಣೆ ಆಗುತ್ತದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

₹ 1 ಲಕ್ಷ ಕೋಟಿ ಉದ್ಯಮವಾಗಿ ಒಟಿಟಿ

ನವದೆಹಲಿ (ಪಿಟಿಐ): ದೇಶದ ಒಟಿಟಿ ಉದ್ಯಮವು ಒಂದು ದಶಕದ ಅವಧಿಯಲ್ಲಿ ₹ 1 ಲಕ್ಷ ಕೋಟಿ ಮೌಲ್ಯದ ಉದ್ಯಮವಾಗಿ ಬೆಳೆಯುವ ನಿರೀಕ್ಷೆ ಇದೆ ಎಂದು ಭಾರತೀಯ ಕೈಗಾರಿಕಾ ಮಹಾಸಂಘ (ಸಿಐಐ) ಮತ್ತು ಬಾಸ್ಟನ್ ಕನ್ಸಲ್ಟಿಂಗ್ ಗ್ರೂಪ್ (ಬಿಸಿಜಿ) ಜಂಟಿಯಾಗಿ ಸಿದ್ಧಪಡಿಸಿರುವ ವರದಿಯೊಂದು ಹೇಳಿದೆ.

ಈ ಉದ್ಯಮವು ನಿರಂತರವಾಗಿ ಬೆಳವಣಿಗೆ ಕಾಣುತ್ತಿದೆ. ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆಗಳ ಪೈಕಿ ಈ ಉದ್ಯಮವು ಭಾರತದಲ್ಲಿ ಅತ್ಯಂತ ಸ್ಪರ್ಧಾತ್ಮಕವಾಗಿದೆ. ನಲವತ್ತಕ್ಕೂ ಹೆಚ್ಚಿನ ಕಂಪನಿಗಳು ದೇಶದಲ್ಲಿ ಈ ಉದ್ಯಮದಲ್ಲಿ ಇವೆ ಎಂದು ವರದಿಯು ಹೇಳಿದೆ.

ಭಾರತದಲ್ಲಿ ಒಟಿಟಿ ಕಂಪನಿಗಳು ಪ್ರಾದೇಶಿಕ ಕಾರ್ಯಕ್ರಮಗಳನ್ನು ನಿರ್ಮಾಣ ಮಾಡಲು ಹೆಚ್ಚಿನ ಹೂಡಿಕೆ ಮಾಡುತ್ತಿವೆ ಎಂದು ವರದಿ ಉಲ್ಲೇಖಿಸಿದೆ.

ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್, ಸೋನಿ ಲೈವ್, ಆಲ್ಟ್ ಬಾಲಾಜಿ, ಜೀ5, ಎರೋಸ್ ನೌ ಮತ್ತು ಡಿಸ್ನಿ ಹಾಟ್‌ಸ್ಟಾರ್ ಪ್ಲಸ್ ದೇಶದ ಒಟಿಟಿ ಮಾರುಕಟ್ಟೆಯಲ್ಲಿರುವ ಪ್ರಮುಖ ಕಂಪನಿಗಳು.

ಹಿರಿಯ ನಾಗರಿಕರಿಗೆ ಸುರಕ್ಷಿತ ಹೂಡಿಕೆ ಆಯ್ಕೆಗಳು



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ನಿವೃತ್ತಿಯ ಸಮಯದಲ್ಲಿ ಕಾರ್ಮಿಕರ ಭವಿಷ್ಯ ನಿಧಿ (ಇಪಿಎಫ್), ಗ್ರ್ಯಾಚುಯಿಟಿ, ರಾಷ್ಟ್ರೀಯ ಪಿಂಚಣಿ ಯೋಜನೆಯಿಂದ (ಎನ್‌ಪಿಎಸ್) ಒಂದಿಷ್ಟು ಹಣ ಸಿಗುತ್ತದೆ. ಆ ಹಣವನ್ನು ಎಲ್ಲಿ ಹೂಡಿಕೆ ಮಾಡಬೇಕು ಎಂಬ ಪ್ರಶ್ನೆ ಅನೇಕರಲ್ಲಿ ಇರುತ್ತದೆ. ಹೆಚ್ಚು ಬಡ್ಡಿ ಲಾಭ ಸಿಗದಿದ್ದರೂ ಪರವಾಗಿಲ್ಲ, ನಿರ್ದಿಷ್ಟ ಮಾಸಿಕ ಆದಾಯ ಸಿಗುವ ಜೊತೆಗೆ ಬಂಡವಾಳ ಸುರಕ್ಷಿತವಾಗಿರಬೇಕು ಎನ್ನುವುದು ಬಹುತೇಕರ ಇಂಗಿತವಾಗಿರುತ್ತದೆ. 60 ವರ್ಷಕ್ಕಿಂತ ಹೆಚ್ಚು ವಯಸ್ಸಾದವರು ಹಿರಿಯ ನಾಗರಿಕರು. ಅವರು ನಿವೃತ್ತಿಯ ನಂತರ ಸಿಗುವ ಹಣವನ್ನು ಪ್ರಧಾನಮಂತ್ರಿ ವಯೋವಂದನಾ ಯೋಜನೆ ಮತ್ತು ಹಿರಿಯ ನಾಗರಿಕರ ಉಳಿತಾಯ ಯೋಜನೆಯಲ್ಲಿ ಹೂಡಿಕೆ ಮಾಡುವುದು ಒಳ್ಳೆಯ ಆಯ್ಕೆ.

1) ಪ್ರಧಾನಮಂತ್ರಿ ವಯೋ ವಂದನಾ ಯೋಜನೆ (ಪಿಎಂವಿವಿವೈ): 60 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರುವವರ (ಹಿರಿಯ ನಾಗರಿಕರ) ಆರ್ಥಿಕ ಭದ್ರತೆಗಾಗಿ ಕೇಂದ್ರ ಸರ್ಕಾರ, ಪ್ರಧಾನಮಂತ್ರಿ ವಯೋ ವಂದನಾ ಯೋಜನೆ ಜಾರಿಗೆ ತಂದಿದೆ. ಪಿಎಂವಿವಿವೈ ಯೋಜನೆಯಲ್ಲಿ ಕನಿಷ್ಠ ₹ 1,56,658 ಮತ್ತು ಗರಿಷ್ಠ ₹ 14,49,086 ಹೂಡಿಕೆ ಮಾಡಬಹುದು. ಹೂಡಿಕೆ ಮೊತ್ತಕ್ಕೆ ಅನುಗುಣವಾಗಿ ₹ 1 ಸಾವಿರದಿಂದ ₹ 9,250ರವರೆಗೆ ಮಾಸಿಕ ಪಿಂಚಣಿ ಪಡೆಯಲು ಸಾಧ್ಯವಿದೆ. ಹಿರಿಯ ನಾಗರಿಕರು ಮಾಸಿಕ ಆದಾಯಕ್ಕೆ ಕಷ್ಟಪಡುತ್ತಿರುವಂತಹ ಸನ್ನಿವೇಶದಲ್ಲಿ ನಿರ್ದಿಷ್ಟ ಆದಾಯ ಖಾತರಿಪಡಿಸುವ ಈ ಪಿಂಚಣಿ ಯೋಜನೆ ಮಹತ್ವ ಪಡೆದಿದೆ. ಈ ಯೋಜನೆಯಲ್ಲಿ ವಾರ್ಷಿಕ ಶೇಕಡ 7.4ರಷ್ಟು ಖಾತರಿಯ ದರದಲ್ಲಿ ಪಿಂಚಣಿಯನ್ನು ಹಿರಿಯ ನಾಗರಿಕರಿಗೆ ನೀಡಲಾಗುತ್ತದೆ. ಪಿಂಚಣಿಯನ್ನು ಮಾಸಿಕ, ತ್ರೈಮಾಸಿಕ, ಅರ್ಧವಾರ್ಷಿಕ ಅಥವಾ ವಾರ್ಷಿಕ ಆಧಾರದಲ್ಲಿ ಪಡೆಯುವ ಆಯ್ಕೆ ಇದೆ. 10 ವರ್ಷಗಳ ಪಾಲಿಸಿ ಅವಧಿ ಮುಗಿದ ಬಳಿಕ ಹೂಡಿಕೆ ಮಾಡಿದ್ದ ಅಸಲು ಮೊತ್ತವನ್ನು ಪಿಂಚಣಿದಾರನಿಗೆ ನೀಡಲಾಗುತ್ತದೆ.

ಪಿಂಚಣಿ ಪಡೆಯುತ್ತಿದ್ದ ವ್ಯಕ್ತಿ ಒಂದೊಮ್ಮೆ ಸಾವನ್ನಪ್ಪಿದ ಪಕ್ಷದಲ್ಲಿ ನಾಮನಿರ್ದೇಶನ ಮಾಡಿರುವ ವ್ಯಕ್ತಿಗೆ ಹಣ ಸಿಗುತ್ತದೆ. ಇದು ಸರ್ಕಾರದ ಸಹಭಾಗಿತ್ವದ ಯೋಜನೆಯಾಗಿರುವುದರಿಂದ ಹೂಡಿಕೆ ಹಣದ ಸುರಕ್ಷತೆ ಬಗ್ಗೆ ಚಿಂತೆ ಮಾಡಬೇಕಿಲ್ಲ.

ಯೋಜನೆಯ ಲಭ್ಯತೆ: ಎಲ್‌ಐಸಿ ಜಾಲತಾಣ ಮತ್ತು ಎಲ್‌ಐಸಿಯ ಕಚೇರಿಗಳ ಮೂಲಕ ವಯೋ ವಂದನಾ ಯೋಜನೆ ಸೇರಿಕೊಳ್ಳಲು ಸಾಧ್ಯವಿದೆ. ಈ ಯೋಜನೆಯ ಲಭ್ಯತೆ ಅವಧಿಯನ್ನು ಮಾರ್ಚ್ 2023ರವರೆಗೆ ವಿಸ್ತರಿಸಲಾಗಿದೆ.

ಅವಧಿಗೆ ಮುನ್ನ ಯೋಜನೆಯಿಂದ ಹೊರಬರಬಹುದೇ?: ಈ ಯೋಜನೆಯಲ್ಲಿ 10 ವರ್ಷ ಹೂಡಿಕೆ ಮಾಡಬೇಕು ಎನ್ನುವುದು ನಿಯಮ. ಆದರೆ ಹೂಡಿಕೆ ಮಾಡಿರುವ ವ್ಯಕ್ತಿಗೆ ಅಥವಾ ಆತನ ಪತ್ನಿಗೆ ತೀವ್ರ ಅನಾರೋಗ್ಯ ಇದ್ದ ಪಕ್ಷದಲ್ಲಿ ಅವಧಿಗೆ ಮುನ್ನ ಯೋಜನೆಯಿಂದ ಹೊರಬರಲು ಅವಕಾಶವಿದೆ. ಅಂತಹ ಸಂದರ್ಭದಲ್ಲಿ ಪಾಲಿಸಿ ದಾಖಲೆಗಳನ್ನು ಹಿಂದಿರುಗಿಸಿ ಹೂಡಿಕೆ ಮಾಡಿದ ಶೇ 98ರಷ್ಟು ಹಣವನ್ನು ಹಿಂಪಡೆಯಲು ಸಾಧ್ಯವಿದೆ.

ವೈದ್ಯಕೀಯ ಪರೀಕ್ಷೆ ಇದೆಯೇ?: ಈ ಯೋಜನೆಯಲ್ಲಿ ಹೂಡಿಕೆ ಮಾಡಲು ಯಾವುದೇ ವೈದ್ಯಕೀಯ ಪರೀಕ್ಷೆ ಇಲ್ಲ.

ಸಾಲ ಸಿಗುವುದೇ?: ಯೋಜನೆ ಆರಂಭಿಸಿ ಮೂರು ವರ್ಷಗಳ ಬಳಿಕ ಹೂಡಿಕೆ ಮಾಡಿರುವ ಹಣದ ಆಧಾರದಲ್ಲಿ ಸಾಲ ಸಿಗುತ್ತದೆ. ಒಟ್ಟು ಹೂಡಿಕೆಯ ಶೇ 75ರಷ್ಟು ಮಾತ್ರ ಸಾಲ ನೀಡಲಾಗುತ್ತದೆ.

2. ಹಿರಿಯ ನಾಗರಿಕರ ಉಳಿತಾಯ ಯೋಜನೆ (ಎಸ್‌ಸಿಎಸ್‌ಎಸ್): ಹಿರಿಯ ನಾಗರಿಕರ ಉಳಿತಾಯ ಯೋಜನೆಯು ಸರ್ಕಾರಿ ಸಹಭಾಗಿತ್ವದ ಹೂಡಿಕೆ ಯೋಜನೆ. 60 ವರ್ಷಕ್ಕಿಂತ ಮೇಲ್ಪಟ್ಟ ಹಿರಿಯ ನಾಗರಿಕರು ಇದರ ಪ್ರಯೋಜನ ಪಡೆಯಬಹುದು. ಎಸ್‌ಸಿಎಸ್‌ಎಸ್‌ನಲ್ಲಿ ಕನಿಷ್ಠ ₹ 1 ಸಾವಿರ, ಗರಿಷ್ಠ ₹ 15 ಲಕ್ಷ ಹೂಡಿಕೆಗೆ ಅವಕಾಶವಿದೆ.

ಹಿರಿಯ ನಾಗರಿಕರಾಗಿರುವ ನಿಮ್ಮ ಮಡದಿಯ ಜತೆಗೆ ಜಂಟಿ ಖಾತೆ ತೆರೆಯಬಹುದು. ಸದ್ಯ ಇದರ ಬಡ್ಡಿ ದರ ಶೇ 7.4ರಷ್ಟಿದೆ.

ಈ ಹೂಡಿಕೆಗೆ ಸೆಕ್ಷನ್ 80ಸಿ ಅಡಿಯಲ್ಲಿ ತೆರಿಗೆ ವಿನಾಯಿತಿ ಇದ್ದು ನಿರ್ದಿಷ್ಟ ಆದಾಯ ನಿರೀಕ್ಷಿಸುವ ಹಿರಿಯ ನಾಗರಿಕರಿಗೆ ಇದೊಂದು ಉತ್ತಮ ಆಯ್ಕೆ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹ ವಿಭಾಗದ ಮುಖ್ಯಸ್ಥ)

ವರ್ಷಾಂತ್ಯದಲ್ಲಿ ಶೇ 2ರಷ್ಟು ಜಿಗಿದ ಷೇರುಪೇಟೆ



ಡಿಸೆಂಬರ್ 31, 2021ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ಕಂಡಿವೆ. 58,253 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.98ರಷ್ಟು ಗಳಿಕೆ ಕಂಡಿದೆ. 17,354 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 2ರಷ್ಟು ಹೆಚ್ಚಳವಾಗಿದೆ. ಜಾಗತಿಕವಾಗಿ ಮತ್ತು ದೇಶಿಯವಾಗಿ ಯಾವುದೇ ಪ್ರಮುಖ ಬೆಳವಣಿಗೆ ಇಲ್ಲದ ಹೊರತಾಗಿಯೂ ಸೂಚ್ಯಂಕಗಳು ಉತ್ತಮ ಬೆಳವಣಿಗೆ ಸಾಧಿಸಿವೆ.

ಎಲ್ಲಾ ವಲಯಗಳು ಸಕಾರಾತ್ಮಕ ಬೆಳವಣಿಗೆ ಸಾಧಿಸಿದ್ದು ಬಿಎಸ್‌ಇ ಆರೋಗ್ಯ ವಲಯ ಸೂಚ್ಯಂಕ ಶೇ 5ರಷ್ಟು, ವಾಹನ ಮತ್ತು ಟೆಲಿಕಾಂ ವಲಯ ತಲಾ ಶೇ 3ರಷ್ಟು ಗಳಿಕೆ ಕಂಡಿವೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಡಿಸೆಂಬರ್ ತಿಂಗಳಲ್ಲಿ ₹ 35,439.59 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 30,000 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಏರಿಕೆ-ಇಳಿಕೆ: ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕ ಶೇ 2ರಷ್ಟು ಗಳಿಕೆ ಕಂಡಿದ್ದು ಟೈಟನ್, ಸನ್ ಫಾರ್ಮಾ, ಕ್ಯಾಡಿಲಾ ಹೆಲ್ತ್ ಕೇರ್, ಐಷರ್ ಮೋಟರ್ಸ್, ಲುಪಿನ್, ಟಾಟಾ ಮೋಟರ್ಸ್–ಡಿವಿಆರ್, ಡಾ. ರೆಡ್ಡೀಸ್, ಡಿವಿಸ್ ಲ್ಯಾಬೊರೇಟರಿ ಮತ್ತು ಅಲ್ಟ್ರಾಟೆಕ್ ಸಿಮೆಂಟ್ ಶೇ 5ರಿಂದ ಶೇ 8ರಷ್ಟು ಜಿಗಿದಿವೆ.

ಮಿಡ್ ಕ್ಯಾಪ್ ಸೂಚ್ಯಂಕ ಶೇ 2.5ರಷ್ಟು ಹೆಚ್ಚಳ ಕಂಡಿದೆ. ವೋಡಾಫೋನ್ ಐಡಿಯಾ, ಆಯಿಲ್ ಇಂಡಿಯಾ, ಬಜಾಜ್ ಹೋಲ್ಡಿಂಗ್ಸ್ ಆ್ಯಂಡ್ ಇನ್ವೆಸ್ಟ್‌ಮೆಂಟ್, ಟೊರೆಂಟ್ ಫಾರ್ಮಾ, ಎಸ್‌ಜೆವಿಎನ್, ಜಿಎಂಆರ್ ಇನ್ಫ್ರಾ, ಆದಿತ್ಯಾ ಬಿರ್ಲಾ ಕ್ಯಾಪಿಟಲ್, ನ್ಯಾಟ್ಕೋ ಫಾರ್ಮಾ, ಗ್ಲೆನ್ ಮಾರ್ಕ್ ಫಾರ್ಮಾ ಉತ್ತಮ ಗಳಿಕೆ ಕಂಡಿವೆ. ಆರ್‌ಬಿಎಲ್ ಬ್ಯಾಂಕ್, ಇಂದ್ರಪ್ರಸ್ಥ ಗ್ಯಾಸ್, ಕ್ರಿಸೆಲ್, ಜೀ ಎಂಟರ್‌ಟೇನ್ಮೆಂಟ್, ಜಿಂದಾಲ್ ಸ್ಟೀಲ್, ಸೇಲ್ ಕುಸಿತ ಕಂಡಿವೆ.

ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 4ರಷ್ಟು ಜಿಗಿದಿದೆ. ರೆಸ್ಪಾನ್ಸಿವ್ ಇಂಡಸ್ಟ್ರೀಸ್, ಶ್ರೀರಾಂ ಇಪಿಸಿ, ಜುಬ್ಲಿಯಂಟ್ ಇಂಡಸ್ಟ್ರೀಸ್, ಬಿಜಿಆರ್ ಎನರ್ಜಿ ಸಿಸ್ಟಮ್ಸ್, ನ್ಯೂರೇಕಾ ಸಿನ್‌ಕಾಂ ಫಾರ್ಮ್ಯೂಲೇಷನ್ಸ್, ಸೈಬರ್ ಟೆಕ್ ಸಿಸ್ಟಮ್ಸ್ ಆ್ಯಂಡ್ ಸಾಫ್ಟ್‌ವೇರ್, ಕಿಂಗ್ ಫಾ ಸೈನ್ಸ್ ಆ್ಯಂಡ್ ಟೆಕ್ನಾಲಜಿ ಶೇ 30ರವರೆಗೆ ಗಳಿಸಿವೆ. ದಿಲೀಪ್ ಬಿಲ್ಡ್ ಕಾನ್, ರುಶಿಲ್ ಡೆಕೋರ್, ಪಿಟಿಎಲ್ ಎಂಟರ್‌ಪ್ರೈಸಸ್, ಮೆಡಿಕಾಮೆನ್ ಬಯೋಟೆಕ್, ಮ್ಯಾರಥಾನ್ ನೆಕ್ಸ್ಟ್‌ಜೆನ್ ರಿಯಾಲಿಟಿ ಕುಸಿತ ಕಂಡಿವೆ.

ಮುನ್ನೋಟ: ಈ ವಾರ ಡಿ-ಮಾರ್ಟ್, ಆನಂದ್ ರಾಠಿ, ಕನೆಲ್ ಇಂಡಸ್ಟ್ರೀಲ್ ಲಿಮಿಟೆಡ್, ಸ್ಪಂದನಾ ಸ್ಫೂರ್ತಿ ಫೈನಾನ್ಸಿಯಲ್ ಲಿಮಿಟೆಡ್, ಜಿಎಂ ಬ್ರಿವರೀಸ್ ಲಿಮಿಟೆಡ್, ಎಸ್‌ಬಿಎಸ್ ಇಂಟರ್‌ನ್ಯಾಷನಲ್ ಸೇರಿ ಕೆಲವು ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಮೂರನೇ ತ್ರೈಮಾಸಿಕದಲ್ಲಿ ಕಂಪನಿಗಳ ಸಾಧನೆ, ಒಮೈಕ್ರಾನ್ ನಿಯಂತ್ರಣ, ದೇಶಿ ಮತ್ತು ಜಾಗತಿಕ ವಿದ್ಯಮಾನಗಳು ಮಾರುಕಟ್ಟೆಯ ಮೇಲೆ ಪರಿಣಾಮ ಬೀರಲಿವೆ.

ಲಖೀಂಪುರ ಖೇರಿ ಹಿಂಸಾಚಾರ ಪ್ರಕರಣ: ಮತ್ತಿಬ್ಬರ ಬಂಧನ

ಲಖನೌ (ಪಿಟಿಐ): ಲಖೀಂಪುರ ಖೇರಿಯಲ್ಲಿ ನಡೆದ ಹಿಂಸಾಚಾರದ ವೇಳೆ ಬಿಜೆಪಿ ಕಾರ್ಯಕರ್ತರಿಬ್ಬರನ್ನು ಹತ್ಯೆ ಮಾಡಿದ ಆರೋಪಕ್ಕೆ ಸಂಬಂಧಿಸಿ, ವಿಶೇಷ ತನಿಖಾ ದಳ (ಎಸ್‌ಐಟಿ) ಮತ್ತೆ ಇಬ್ಬರನ್ನು ಬಂಧಿಸಿದೆ.

ತಿಕುನಿಯಾ ಪೊಲೀಸ್ ಠಾಣೆ ವ್ಯಾಪ್ತಿಯ ಖೈರಾತಿಯಾ ಗ್ರಾಮದ ಕವಲ್‌ಜೀತ್ ಸಿಂಗ್ ಮತ್ತು ಪಾಲಿಯಾ ಪೊಲೀಸ್ ಠಾಣೆ ವ್ಯಾಪ್ತಿಯ ಬಾಬೌರಾ ಗ್ರಾಮದ ಕಮಲ್‌ಜೀತ್ ಸಿಂಗ್ ಬಂಧಿತರು.

ಇದರೊಂದಿಗೆ ಬಿಜೆಪಿ ಕಾರ್ಯಕರ್ತರ ಹತ್ಯೆ ಪ್ರಕರಣದಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ಸಂಬಂಧಿಸಿ ಈವರೆಗೆ ಒಟ್ಟು ಆರು ಜನರನ್ನು ಬಂಧಿಸಿದಂತಾಗಿದೆ. ವಿಚಿತ್ರ ಸಿಂಗ್, ಗುರ್‌ವಿಂದರ್ ಸಿಂಗ್, ರಂಜಿತ್ ಸಿಂಗ್ ಮತ್ತು ಅವತಾರ್ ಸಿಂಗ್ ಎಂಬುವವರನ್ನು ಈಗಾಗಲೇ ಬಂಧಿಸಲಾಗಿದ್ದು, ಎಲ್ಲರೂ ಈಗ ಜೈಲಿನಲ್ಲಿದ್ದಾರೆ.

ವಿಮಾನ ಇಂಧನ ಬೆಲೆ ಏರಿಕೆ

ನವದೆಹಲಿ (ಪಿಟಿಐ): ವಿಮಾನಗಳಲ್ಲಿ ಬಳಸುವ ಇಂಧನದ (ಎಟಿಎಫ್) ಬೆಲೆಯನ್ನು ಶೇಕಡ 2.75ರಷ್ಟು ಹೆಚ್ಚಿಸಲಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಹೆಚ್ಚಾಗುತ್ತಿರುವ ಕಾರಣ ದೇಶಿ ಮಾರುಕಟ್ಟೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ವಿಮಾನ ಇಂಧನ ದರವನ್ನು ಪ್ರತಿ ಕಿಲೋ ಲೀಟರ್‌ಗೆ ₹ 2,039.63ರಷ್ಟು ಹೆಚ್ಚಿಸಲಾಗಿದೆ. ಹೊಸ ಬೆಲೆಯು ಕಿಲೋ ಲೀಟರ್‌ಗೆ ದೆಹಲಿಯಲ್ಲಿ ₹ 76,062ಕ್ಕೆ ಏರಿಕೆ ಆಗಿದೆ.

‘ತಿರುಮಲ: ಮೂರನೇ ಘಾಟಿ ರಸ್ತೆ, ಮೆಟ್ಟಿಲುಮಾರ್ಗ ನಿರ್ಮಾಣ ಶೀಘ್ರ’

ತಿರುಪತಿ (ಪಿಟಿಐ): ತಿರುಮಲದಲ್ಲಿರುವ ವೆಂಕಟೇಶ್ವರ ದೇವಸ್ಥಾನ ಸಂಪರ್ಕಿಸಲು ಘಾಟ್ ಮೂಲಕ ಮೂರನೇ ರಸ್ತೆ ಹಾಗೂ ಮೂರನೇ ಮೆಟ್ಟಿಲುಮಾರ್ಗವನ್ನು ಶೀಘ್ರವೇ ನಿರ್ಮಿಸಲಾಗುವುದು ಎಂದು ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ಆಡಳಿತ ಮಂಡಳಿ ಭಾನುವಾರ ತಿಳಿಸಿದೆ.

‘ನೂತನ ರಸ್ತೆ ಹಾಗೂ ಮೆಟ್ಟಿಲುಗಳ ಮಾರ್ಗ ನಿರ್ಮಾಣಕ್ಕೆ ಸಂಬಂಧಿಸಿ ಡಿಪಿಆರ್ ಸಿದ್ಧಪಡಿಸುವಂತೆ ಎಂಜಿನಿಯರಿಂಗ್ ವಿಭಾಗಕ್ಕೆ ಟಿಟಿಡಿ ಚೇರಮನ್ ವೈ.ವಿ.ಸುಬ್ಬಾರೆಡ್ಡಿ ಸೂಚಿಸಿದ್ದಾರೆ’ ಎಂದು ಮಂಡಳಿ ಪ್ರಕಟಣೆ ತಿಳಿಸಿದೆ.

‘ಉದ್ದೇಶಿತ ಮೆಟ್ಟಿಲುಗಳ ಮಾರ್ಗವನ್ನು ‘ಅನ್ನಮಯ್ಯ ಮಾರ್ಗ’ ಎಂದು ಕರೆಯಲಾಗುವುದು. ಕಡಪ ಜಿಲ್ಲೆ ಮತ್ತು ಹೈದರಾಬಾದ್‌ನಿಂದ ಬರುವವರಿಗೆ ಈ ಮಾರ್ಗದಿಂದ ಹೆಚ್ಚು ಅನುಕೂಲವಾಗುವುದು’ ಎಂದು ಪ್ರಕಟಣೆ ತಿಳಿಸಿದೆ.

ಅಗ್ನಿ ಅವಘಡ

ಕೇಪ್‌ಟೌನ್ (ಎಪಿ): ದಕ್ಷಿಣ ಆಫ್ರಿಕಾದ ಸಂಸತ್ ಭವನ ಕಟ್ಟಡದಲ್ಲಿ ಭಾನುವಾರ ಅಗ್ನಿ ಅವಘಡ ಸಂಭವಿಸಿದ್ದು, ವಿವಿಧ ಕಚೇರಿಗಳು ಬೆಂಕಿಗೆ ಆಹುತಿಯಾಗಿವೆ.

‘ಘಟನೆ ಸಂಬಂಧ ಪೊಲೀಸರು ಒಬ್ಬನನ್ನು ಬಂಧಿಸಿದ್ದಾರೆ’ ಎಂದು ಅಧ್ಯಕ್ಷ ಸಿರಿಲ್ ರಾಮಫೋಸಾ ತಿಳಿಸಿದ್ದಾರೆ.

ಸಚಿವ ಗೋವಿಂದ ಕಾರಜೋಳ ಹೇಳಿಕೆಗೆ ಸಿದ್ದರಾಮಯ್ಯ ಸವಾಲು

‘ಮೇಕೆದಾಟು: ದಾಖಲೆ ಬಿಡುಗಡೆ ಮಾಡಿ’

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ‘ಮೇಕೆದಾಟು ಯೋಜನೆಗೆ ಸಂಬಂಧಿಸಿ ಪಕ್ಷದ ನಿಲುವಿನ ಬಗ್ಗೆ ದಾಖಲೆಗಳಿದ್ದರೆ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಬಿಡುಗಡೆ ಮಾಡಲಿ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಭಾನುವಾರ ಸವಾಲು ಹಾಕಿದರು.

ಜಿಲ್ಲಾ ಕಾಂಗ್ರೆಸ್ ಹಮ್ಮಿಕೊಂಡಿದ್ದ ಮೇಕೆದಾಟು ಪಾದಯಾತ್ರೆ ಜನಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿ, ‘ಮಹತ್ವದ ದಾಖಲೆಗಳಿದ್ದು, ಸ್ಫೋಟ ಮಾಡುವುದಾಗಿ ಕಾರಜೋಳ ಹೇಳಿದ್ದಾರೆ. ಅವುಗಳನ್ನು ಬೇಗನೇ ಬಿಡುಗಡೆ ಮಾಡಲಿ, ರಾಜ್ಯದ ಜನ ನೋಡಲಿ’ ಎಂದು ತಿರುಗೇಟು ನೀಡಿದರು.

‘ಇದು, ಕುಡಿಯುವ ನೀರಿನ ಯೋಜನೆ. ಯಾರೂ ತಡೆಯೊಡ್ಡಲು ಬರುವುದಿಲ್ಲ. ಪರಿಸರ ಸಚಿವಾಲಯ ಅನುಮತಿ ಕೊಟ್ಟರೆ ಸಾಕು. ಡಬ್ಬಲ್ ಎಂಜಿನ್ ಸರ್ಕಾರ ಎಂದು ಪ್ರಧಾನಿ ಮೋದಿ ಹೇಳುತ್ತಿದ್ದಾರೆ. ತಮ್ಮದೇ ಸರ್ಕಾರ ಇದ್ದರೂ ಏನು ಕಡಿದು ಕಟ್ಟೆ ಹಾಕಿದ್ದಾರೆ?’ ಎಂದು ಅವರು ವಾಗ್ದಾಳಿ ನಡೆಸಿದರು.

ರಾಜಕೀಯ ಲಾಭಕ್ಕೆ ಕಾಂಗ್ರೆಸ್ ನಾಯಕರು ಪಾದಯಾತ್ರೆ ಹಮ್ಮಿಕೊಂಡಿದ್ದಾರೆ. ಮೇಕೆದಾಟು ವಿಷಯದಲ್ಲಿ ಸರ್ಕಾರ ಬದ್ಧತೆಯಿಂದ ಕೆಲಸ ಮಾಡುತ್ತಿದೆ

ಬಸವರಾಜ ಬೊಮ್ಮಾಯಿ
ಮುಖ್ಯಮಂತ್ರಿ

ಬಿಜೆಪಿಯು ತಮಿಳುನಾಡು ಪರ: ‘ರಾಜಕೀಯ ಕಾರಣಕ್ಕೆ ತಮಿಳುನಾಡು ಕ್ಯಾತೆ ತೆಗೆದಿದೆ. ತಮಿಳುನಾಡಿನ ಬಿಜೆಪಿ ಅಧ್ಯಕ್ಷ ಅಣ್ಣಾಮಲೈ ಅನುಮತಿ ನೀಡಬಾರದು ಎಂದು ಧರಣಿ ಕೂರುತ್ತಾರೆ. ಅಲ್ಲಿನ ಬಿಜೆಪಿ ಉಸ್ತುವಾರಿ ಸಿ.ಟಿ.ರವಿ ತಮಿಳುನಾಡು ಪರ ಮಾತನಾಡುತ್ತಾರೆ. ಅಣ್ಣಾಮಲೈ ಅವರನ್ನು ಎತ್ತಿಕಟ್ಟುತ್ತಿದ್ದಾರೆ. ಅದಕ್ಕೇ ವಿಳಂಬ ಆಗುತ್ತಿದೆ' ಎಂದು ಆರೋಪಿಸಿದರು.

‘ಡಿ.ಕೆ.ಶಿವಕುಮಾರ್–ಸಿದ್ದರಾಮಯ್ಯ ಕಚ್ಚಾಟವೇ ಪಾದಯಾತ್ರೆಗೆ ಕಾರಣ’

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರ ನಡುವಿನ ಒಣ ಪ್ರತಿಷ್ಠೆಯ ಆಂತರಿಕ ಕಚ್ಚಾಟವೇ ಮೇಕೆದಾಟು ಪಾದಯಾತ್ರೆಗೆ ಕಾರಣ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

‘ಮೇಕೆದಾಟು ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ಬದ್ಧವಾಗಿದೆ. ಹಾಗಿದ್ದರೆ ಇವರು ಯಾರ ವಿರುದ್ಧ ಪಾದಯಾತ್ರೆ ಮಾಡುತ್ತಿದ್ದಾರೆ ಎಂಬುದನ್ನು ಜನತೆಗೆ ತಿಳಿಸಲಿ. ಸುಳ್ಳು ಹೇಳಿಕೊಂಡು ಪಾದಯಾತ್ರೆ ಮಾಡಬೇಡಿ. ಆರೋಗ್ಯ ಸುಧಾರಣೆಗೆ ಬೇಕಾದರೆ ಪಾದಯಾತ್ರೆ ಮಾಡಿ’ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ಮೇಕೆದಾಟು ಯೋಜನೆ ಜಾರಿಗೆ ಕೇಂದ್ರ ಸರ್ಕಾರ ತಾತ್ವಿಕ ಅನುಮೋದನೆ ನೀಡಿದೆ. ಪರಿಸರ ಮತ್ತು ಅರಣ್ಯ ಇಲಾಖೆ ಅನುಮತಿ ಸಿಗಬೇಕಾಗಿದೆ‘ ಎಂದು ತಿಳಿಸಿದರು. ‘ಕಾಂಗ್ರೆಸ್, ಕಾಂಗ್ರೆಸ್–ಜೆಡಿಎಸ್‌ನ ಮೈತ್ರಿ ಸರ್ಕಾರವಿದ್ದಾಗ ಯೋಜನೆ ಏಕೆ ಜಾರಿ ಮಾಡಲಿಲ್ಲ? ಆಗ ಜಲಸಂಪನ್ಮೂಲ ಸಚಿವರಾಗಿದ್ದ ಡಿ.ಕೆ. ಶಿವಕುಮಾರ್ ಆಗ ಏಕೆ ಸುಮ್ಮನೆ ಇದ್ದರು’ ಎಂದು ರವಿ ಪ್ರಶ್ನಿಸಿದರು.

ಪಾಕ್: ನವೀಕೃತ ದೇವಸ್ಥಾನಕ್ಕೆ ಹಿಂದೂಗಳ ಭೇಟಿ, ಪೂಜೆ

ಪೇಶಾವರ (ಪಿಟಿಐ): ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ತೆರಿ ಗ್ರಾಮದಲ್ಲಿರುವ ನವೀಕೃತ ಮಹಾರಾಜ ಪರಮಹಂಸ ಮಂದಿರಕ್ಕೆ ಭಾರತ, ಅಮೆರಿಕ ಹಾಗೂ ಕೊಲ್ಲಿ ರಾಷ್ಟ್ರಗಳಿಂದ ಬಂದಿದ್ದ ಹಿಂದೂಗಳು ಭಾರಿ ಭದ್ರತೆ ನಡುವೆ ಶನಿವಾರ ಭೇಟಿ ನೀಡಿ, ಪೂಜೆ ಸಲ್ಲಿಸಿದರು. ಭಾರತದಿಂದ 200, ದುಬೈನಿಂದ 15 ಜನರು ಹಾಗೂ ಉಳಿದವರು ಅಮೆರಿಕ ಹಾಗೂ ಇತರ ಕೊಲ್ಲಿ ರಾಷ್ಟ್ರಗಳಿಂದ ಬಂದಿದ್ದರು ಎಂದು ಮೂಲಗಳು ಹೇಳಿವೆ.

ಪಾಕಿಸ್ತಾನದ ಹಿಂದೂ ಪರಿಷತ್ ಹಾಗೂ ಪಾಕಿಸ್ತಾನ ಇಂಟರ್‌ನ್ಯಾಷನಲ್ ಏರ್‌ಲೈನ್ಸ್ ಜಂಟಿಯಾಗಿ, ನವೀಕೃತ ದೇವಸ್ಥಾನಕ್ಕೆ ಹಿಂದೂಗಳ ಭೇಟಿ ಕಾರ್ಯಕ್ರಮದ ವ್ಯವಸ್ಥೆ ಮಾಡಿದ್ದವು.

ದೇವಸ್ಥಾನ 100 ವರ್ಷ ಹಳೆಯದಾಗಿದ್ದು, ಮಹಾರಾಜ ಪರಮಹಂಸರ ಸಮಾಧಿಯೂ ಇಲ್ಲಿದೆ.

ನ್ಯಾಯಮೂರ್ತಿಗಳ ನೇಮಕ: ನನೆಗುದಿಯಲ್ಲಿ ಶಿಫಾರಸು

ನವದೆಹಲಿ (ಪಿಟಿಐ): ನ್ಯಾಯಮೂರ್ತಿಗಳನ್ನಾಗಿ ನೇಮಿಸಲು ವಿವಿಧ ಹೈಕೋರ್ಟ್‌ಗಳ ಕೊಲಿಜಿಯಂ ಶಿಫಾರಸು ಮಾಡಿ, ಸುಪ್ರೀಂ ಕೋರ್ಟ್ ಕೊಲಿಜಿಯಂ ಅನುಮೋದಿಸಿರುವ 23 ಹೆಸರುಗಳು, 2018ರಿಂದಲೂ ನನೆಗುದಿಯಲ್ಲಿವೆ. ಕೇಂದ್ರ ಸರ್ಕಾರ ಈ ಕುರಿತು ಯಾವುದೇ ನಿರ್ಧಾರ ಕೈಗೊಂಡಿಲ್ಲ.

ನ್ಯಾಯಾಂಗದ ಉನ್ನತ ಸ್ಥಾನಗಳ ನೇಮಕಾತಿ ಪ್ರಕ್ರಿಯೆಯನ್ನು ಗಮನಿಸುತ್ತಿರುವ ಮೂಲಗಳು ಇದನ್ನು ದೃಢಪಡಿಸಿವೆ. ಕನಿಷ್ಠ ಏಳು ಹೈಕೋರ್ಟ್‌ಗಳ ಕೊಲಿಜಿಯಂಗಳು ಈ ಹೆಸರುಗಳನ್ನು ಶಿಫಾರಸು ಮಾಡಿದ್ದವು. ಶಿಫಾರಸು ಮರು ಪರಿಶೀಲಿಸಬೇಕು ಎಂದು ಸೂಚಿಸಿ ಕನಿಷ್ಠ 23 ಹೆಸರುಗಳಿಗೆ ಸಂಬಂಧಿಸಿದ ಕಡತವನ್ನು ವಾಪಸು ಕಳುಹಿಸಲಾಗಿತ್ತು. ಆದರೆ, ಸುಪ್ರೀಂ ಕೋರ್ಟ್ ಕೊಲಿಜಿಯಂ ಈ ಹೆಸರುಗಳನ್ನೇ ವಿವಿದ ಹಂತದಲ್ಲಿ ಮತ್ತೆ ಶಿಫಾರಸು ಮಾಡಿತ್ತು.


ಈ ಪೈಕಿ ಕರ್ನಾಟಕ ಹೈಕೋರ್ಟ್ ಮತ್ತು ಜಮ್ಮು ಕಾಶ್ಮೀರ ಹೈಕೋರ್ಟ್‌ಗೆ ತಲಾ ಒಬ್ಬರು ನ್ಯಾಯಮೂರ್ತಿಗಳ ನೇಮಕ ಕುರಿತಂತೆ ಎರಡು ಹೆಸರುಗಳನ್ನು ಸುಪ್ರೀಂ ಕೋರ್ಟ್ ಕೊಲಿಜಿಯಂ ಕೇಂದ್ರ ಸರ್ಕಾರಕ್ಕೆ ಎರಡು ಬಾರಿ ಶಿಫಾರಸು ಮಾಡಿದೆ. ಎರಡೂ ಪ್ರಕರಣದಲ್ಲಿ ಶಿಫಾರಸುಗೊಂಡವರು ವಕೀಲರಾಗಿದ್ದು, ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್‌ಗೆ ನೇಮಕ ಕುರಿತು 2018ರಲ್ಲಿ, ಕರ್ನಾಟಕ ಹೈಕೋರ್ಟ್‌ಗೆ ನೇಮಕ ಕುರಿತು 2019ರಲ್ಲಿ ಶಿಫಾರಸು ಮಾಡಲಾಗಿತ್ತು.

ಹೀಗೆ ವಿವಿಧ ಹೈಕೋರ್ಟ್‌ಗಳ ಕೊಲಿಜಿಯಂ ಶಿಫಾರಸು ಮಾಡಿದ್ದ 23 ಹೆಸರುಗಳು ನನೆಗುದಿಯಲ್ಲಿವೆ. 2021ರಲ್ಲಿ ವಿವಿಧ ಹೈಕೋರ್ಟ್‌ಗಳಿಗೆ 120 ನ್ಯಾಯಮೂರ್ತಿಗಳ ನೇಮಕವಾಗಿದೆ. 2016ರಲ್ಲಿ ದಾಖಲೆ ಸಂಖ್ಯೆಯಲ್ಲಿ ಅಂದರೆ 126 ನ್ಯಾಯಮೂರ್ತಿಗಳನ್ನು ನೇಮಿಸಲಾಗಿತ್ತು.

ಡಿಸೆಂಬರ್ 1, 2021ರಲ್ಲಿ ಇದ್ದಂತೆ ವಿವಿಧ 25 ಹೈಕೋರ್ಟ್‌ಗಳಿಗೆ ಮಂಜೂರಾಗಿದ್ದ ನ್ಯಾಯಮೂರ್ತಿಗಳ ಒಟ್ಟು ಹುದ್ದೆಗಳ ಸಂಖ್ಯೆ 1,098. ಸದ್ಯ, 696 ನ್ಯಾಯಮೂರ್ತಿಗಳಿದ್ದು, 402 ಸ್ಥಾನಗಳು ಖಾಲಿ ಇವೆ.

ನಿಧನ ವಾರ್ತೆ

ಬಸ್ತಿ ವಾಮನ ಶೆಣೈ



ಮಂಗಳೂರು: ವಿಶ್ವ ಕೊಂಕಣಿ ಕೇಂದ್ರದ ಸಂಸ್ಥಾಪಕ, ಕರ್ನಾಟಕ ಕೊಂಕಣಿ ಸಾಹಿತ್ಯ ಪರಿಷತ್ ಸ್ಥಾಪನೆಗೆ ಪ್ರೇರಕ ಶಕ್ತಿಯಾಗಿದ್ದ ಹೋರಾಟಗಾರ, ಬಸ್ತಿ ವಾಮನ ಶೆಣೈ (87) ಅವರು ಅಲ್ಪಕಾಲದ ಅನಾರೋಗ್ಯದ ಬಳಿಕ ಭಾನುವಾರ ಬೆಳಿಗ್ಗೆ ನಿಧನರಾದರು.

ಅಂತ್ಯಸಂಸ್ಕಾರವು ಸೋಮವಾರ (ಜ.3) ಮಧ್ಯಾಹ್ನ ಅವರ ಹುಟ್ಟೂರು ಬಂಟ್ವಾಳದಲ್ಲಿ ನಡೆಯಲಿದೆ. ಬೆಳಿಗ್ಗೆ 9ರಿಂದ 10ರವರೆಗೆ ಸಾರ್ವಜನಿಕರ ವೀಕ್ಷಣೆಗಾಗಿ ಪಾರ್ಥಿವ ಶರೀರವನ್ನು ವಿಶ್ವ ಕೊಂಕಣಿ ಕೇಂದ್ರದಲ್ಲಿ ಇಡಲಾಗುವುದು ಎಂದು ಮೂಲಗಳು ತಿಳಿಸಿವೆ.

1980ರಿಂದ ಕೊಂಕಣಿ ಭಾಷಾ ಮಂಡಲದಲ್ಲಿ ತೊಡಗಿಸಿಕೊಂಡಿದ್ದ ಶೆಣೈ ಅವರು ಕೊಂಕಣಿ ಅಕಾಡೆಮಿ ಸ್ಥಾಪನೆಗೆ ಆಗ್ರಹಿಸಿ ಜಾಥಾ, ಚಳವಳಿಗಳನ್ನು ಸಂಘಟಿಸಿದ್ದರು. ಅವರ ನೇತೃತ್ವದ ಹೋರಾಟದ ಫಲವಾಗಿ 1994-95ರಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಸ್ತಿತ್ವಕ್ಕೆ ಬಂದಿತ್ತು. ಎರಡು ಅವಧಿಗೆ ಅವರು ಅಕಾಡೆಮಿಯ ಅಧ್ಯಕ್ಷರೂ ಆಗಿದ್ದರು. ಶಾಲೆಗಳಲ್ಲಿ ತೃತೀಯ ಭಾಷೆಯಾಗಿ ಕೊಂಕಣಿಯನ್ನು ಕಲಿಸುವ ಅವಕಾಶ ಇವರ ಅವಧಿಯಲ್ಲಿ ಜಾರಿಗೆ ಬಂದಿತ್ತು. ಶೆಣೈ ಅವರು 1993ರಲ್ಲಿ ಕರ್ನಾಟಕ ಕೊಂಕಣಿ ಭಾಷಾ ಮಂಡಲದ ಅಧ್ಯಕ್ಷರಾಗಿಯೂ ಆಯ್ಕೆಯಾಗಿದ್ದರು.

1995ರಲ್ಲಿ ಮಂಗಳೂರಿನಲ್ಲಿ ನಡೆದಿದ್ದ ಪ್ರಥಮ ವಿಶ್ವ ಕೊಂಕಣಿ ಸಮಾವೇಶದಲ್ಲಿ ಶೆಣೈ ಅವರಿಗೆ ‘ವಿಶ್ವ ಕೊಂಕಣಿ ಸರ್ದಾರ್’ ಬಿರುದು ನೀಡಿ ಗೌರವಿಸಲಾಗಿತ್ತು. 2004ರಲ್ಲಿ ಅಖಿಲ ಭಾರತ ಕೊಂಕಣಿ ಪರಿಷತ್ತಿನ ಅಧ್ಯಕ್ಷರಾಗಿದ್ದರು.

ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿಯಾಗಿದ್ದರು. 2009ರಲ್ಲಿ ಶಕ್ತಿನಗರದಲ್ಲಿ ಗ್ರಂಥಾಲಯ, ಮ್ಯೂಸಿಯಂ, ಸಭಾಂಗಣ ವ್ಯವಸ್ಥೆಗಳುಳ್ಳ ‘ವಿಶ್ವ ಕೊಂಕಣಿ ಕೇಂದ್ರ’ದ ಕಟ್ಟಡ ನಿರ್ಮಿಸುವಲ್ಲಿ ಶೆಣೈಯವರ ಮುತುವರ್ಜಿ ಹೆಚ್ಚಿತ್ತು. 2010ರಲ್ಲಿ ಇದೇ ಕೇಂದ್ರದಲ್ಲಿ ವಿಶ್ವ ಕೊಂಕಣಿ ಭಾಷಾ ಸಂಸ್ಥಾನ ಮತ್ತು ವರ್ಲ್ಡ್ ಕೊಂಕಣಿ ಹಾಲ್ ಆಫ್ ಫೇಮ್ ಕೂಡ ಸ್ಥಾಪನೆಯಾಗಿತ್ತು.

ಹೊಸ ರೂಪಾಂತರ ತಳಿಯು ಡೆಲ್ಟಾ ಹರಡುವಿಕೆ ತಡೆಯುತ್ತದೆ ಎಂಬುದು ಅಪಾಯಕಾರಿ ನಂಬಿಕೆ: ತಜ್ಞರ ಎಚ್ಚರಿಕೆ

‘ಓಮೈಕ್ರಾನ್ ನೈಸರ್ಗಿಕ ಲಸಿಕೆಯಲ್ಲ’

ನವದೆಹಲಿ (ಪಿಟಿಐ): ‘ಡೆಲ್ಟಾ ರೂಪಾಂತರ ತಳಿಯ ವಿರುದ್ಧ ಓಮೈಕ್ರಾನ್ ರೂಪಾಂತರ ತಳಿಯು ನೈಸರ್ಗಿಕ ಲಸಿಕೆಯಂತೆ ಕೆಲಸ ಮಾಡುತ್ತದೆ ಎಂಬ ಅಭಿಪ್ರಾಯವು ಅತ್ಯಂತ ಅಪಾಯಕಾರಿ. ಬೇಜವಾಬ್ದಾರಿಯುತ ಜನರಷ್ಟೇ ಇಂತಹ ತಪ್ಪು ಮಾಹಿತಿಯನ್ನು ಹರಡುತ್ತಾರೆ. ಇದಕ್ಕೆ ಕಿವಿಗೊಡದೆ, ಕೋವಿಡ್ ನಿಯಂತ್ರಣ ಕ್ರಮಗಳನ್ನು ಪಾಲಿಸಬೇಕು’ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ.

ಕೊರೊನಾ ವೈರಾಣುವಿನ ಬೇರೆಲ್ಲಾ ರೂಪಾಂತರ ತಳಿಗಳಿಗಿಂತ ಓಮೈಕ್ರಾನ್ ಅತ್ಯಂತ ಕ್ಷಿಪ್ರವಾಗಿ ಹರಡುವ ಸಾಮರ್ಥ್ಯ ಹೊಂದಿದೆ. ಜತೆಗೆ ಈ ತಳಿಯಿಂದ ಬರುವ ಕೋವಿಡ್‌ನ ತೀವ್ರತೆ ಕಡಿಮೆ ಇದೆ. ಹೀಗಾಗಿಯೇ ಓಮೈಕ್ರಾನ್‌ನಿಂದ ಕೋವಿಡ್ ಬಂದು ಗುಣಮುಖವಾದರೆ, ಕೋವಿಡ್ ಪ್ರತಿರೋಧ ಶಕ್ತಿ ಸೃಷ್ಟಿಯಾಗುತ್ತದೆ. ಆ ಪ್ರತಿರೋಧ ಶಕ್ತಿಯು ಡೆಲ್ಟಾ ತಳಿಯಿಂದ ಕೋವಿಡ್ ತಗಲುವುದನ್ನು ತಡೆಯುತ್ತದೆ ಎಂಬ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ.

ಈಚೆಗೆ, ಮಹಾರಾಷ್ಟ್ರ ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು, ‘ಓಮೈಕ್ರಾನ್ ನೈಸರ್ಗಿಕ ಲಸಿಕೆಯಂತೆ ಕೆಲಸ ಮಾಡುತ್ತದೆ’ ಎಂದು ಘೋಷಿಸಿದ್ದರು. ಇದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಇದರ ಬೆನ್ನಲ್ಲೇ ತಜ್ಞರು ಈ ಬಗ್ಗೆ ಎಚ್ಚರಿಕೆ ನೀಡಿದ್ದಾರೆ.

‘ಈ ರೀತಿಯ ಅಭಿಪ್ರಾಯ ಹರಡುತ್ತಿರುವವರಿಗೆ ವೈರಾಣುವಿನ ಬಗ್ಗೆ ಸರಿಯಾದ ಮಾಹಿತಿ ಇಲ್ಲ ಎಂದರ್ಥ. ಭಾರತೀಯರಲ್ಲಿ ಅಪೌಷ್ಟಿಕತೆ ಇದೆ, ಇಲ್ಲಿ ಹೆಚ್ಚು ಪರಿಸರ ಮಾಲಿನ್ಯವಿದೆ. ಜತೆಗೆ ಮಧುಮೇಹದಿಂದ ಬಳಲುತ್ತಿರುವವ ಪ್ರಮಾಣವೂ ಹೆಚ್ಚು. ಓಮೈಕ್ರಾನ್‌ನಿಂದ ಬರುವ ಕೋವಿಡ್‌ನ ತೀವ್ರತೆಯನ್ನು ಈ ಅಂಶಗಳು ಪ್ರಭಾವಿಸುತ್ತವೆ. ಹೀಗಾಗಿ ಓಮೈಕ್ರಾನ್ ನೈಸರ್ಗಿಕ ಲಸಿಕೆಯಂತೆ ಕೆಲಸ ಮಾಡುತ್ತದೆ ಎಂಬ ನಂಬಿಕೆ ಅಪಾಯಕಾರಿ’ ಎಂದು ಕೇಂದ್ರ ಸರ್ಕಾರದ ಕೋವಿಡ್ ವೈರಾಣು ಸಂರಚನೆ ವಿಶ್ಲೇಷಣೆ ಸಂಸ್ಥೆಯ ಶಾಹಿದ್ ಜಮೀಲ್ ಹೇಳಿದ್ದಾರೆ.

‘ಓಮೈಕ್ರಾನ್‌ನಿಂದ ಹಲವು ಮಂದಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಹಲವರು ಮೃತಪಟ್ಟಿದ್ದಾರೆ. ನೈಜ ಲಸಿಕೆಗೆ ಹೋಲಿಸಿದರೆ, ವೈರಾಣುವಿಂದ ಬಂದ ಪ್ರತಿರೋಧ ಶಕ್ತಿಯು ಕೊಡುವ ರಕ್ಷಣೆ ಅತ್ಯಂತ ಕಡಿಮೆ. ಇದು ಆಸ್ಪತ್ರೆಗೆ ದಾಖಲಾಗುವುದರಿಂದ ಮತ್ತು ಮರಣದ ಸಾಧ್ಯತೆಯಿಂದ ರಕ್ಷಣೆ ನೀಡುವುದಿಲ್ಲ. ಓಮೈಕ್ರಾನ್ ಸಮೂಹ ಪ್ರತಿರೋಧ ಶಕ್ತಿಯನ್ನು ಸೃಷ್ಟಿಸಲಿದೆ, ಇದರಿಂದ ಕೋವಿಡ್ ವಿರುದ್ಧದ ಸಮುದಾಯ ಪ್ರತಿರೋಧ ಶಕ್ತಿ ಬಲಗೊಳ್ಳಲಿದೆ ಎಂಬ ಅಭಿಪ್ರಾಯವಿದೆ. ಇದು ಅಭಿಪ್ರಾಯವಷ್ಟೆ, ಇದಕ್ಕೆ ಯಾವುದೇ ಆಧಾರಗಳು ಇಲ್ಲ’ ಎಂದು ಇಂಡಿಯನ್ ಪಬ್ಲಿಕ್ ಹೆಲ್ತ್ ಫೌಂಡೇಶನ್‌ನ ವೈರಾಣುಶಾಸ್ತ್ರ ವಿಭಾಗದ ಮುಖ್ಯಸ್ಥ ಗಿರಿಧರ ಆರ್. ಬಾಬು ಹೇಳಿದ್ದಾರೆ.

‘ಓಮೈಕ್ರಾನ್ ಸೌಮ್ಯ ಲಕ್ಷಣಗಳನ್ನು ಹೊಂದಿವೆ ಎನ್ನಲಾಗುತ್ತಿದೆ. ಆದರೆ ಈ ತಳಿಯಿಂದ ಕೋವಿಡ್ ಬಂದಾಗ, ದೇಹದ ವಿವಿಧ ಅಂಗಗಳ ಮೇಲೆ ಅದರ ದೀರ್ಘಾವಧಿ ಪರಿಣಾಮಗಳೇನು ಎಂಬುದನ್ನು ಕಂಡುಕೊಳ್ಳಲು ಆರು ತಿಂಗಳಾದರೂ ಬೇಕಾಗುತ್ತದೆ. ಓಮೈಕ್ರಾನ್ ನಮ್ಮ ಶ್ವಾಸಕೋಶ, ಹೃದಯ, ಮಿದುಳು ಮತ್ತು ಮೂತ್ರಪಿಂಡಗಳ ಮೇಲೆ ಯಾವ ಪರಿಣಾಮ ಬೀರುತ್ತವೆ ಎಂಬುದು ಇನ್ನೂ ಗೊತ್ತಿಲ್ಲ. ಓಮೈಕ್ರಾನ್‌ನಿಂದ ಕೋವಿಡ್‌ಗೆ ಒಳಗಾದವರಲ್ಲಿ ಏಕಾಗ್ರತೆಯ ಕೊರತೆ ಇರುವುದು ವರದಿಯಾಗಿದೆ. ಹೀಗಾಗಿ ಎಚ್ಚರಿಕೆಯಿಂದ ಇರಬೇಕು’ ಎಂದು ಉಜಾಲಾ ಸೈನಸ್ ಗ್ರೂಪ್ ಆಫ್ ಹಾಸ್ಪಿಟಲ್ಸ್‌ನ ಸಂಸ್ಥಾಪಕ ನಿರ್ದೇಶಕ ಸುಚಿನ್ ಬಜಾಜ್ ಹೇಳಿದ್ದಾರೆ.

ಓಮೈಕ್ರಾನ್, ಡೆಲ್ಟಾಗಿಂತ ಕಡಿಮೆ ಪ್ರಮಾಣದ ಸಮಸ್ಯೆ ಉಂಟು ಮಾಡುತ್ತಿರಬಹುದು. ಆದರೆ, ಅದೂ ಒಂದು ವೈರಾಣು ಎಂಬುದನ್ನು ಮರೆಯಬಾರದು

ಸುಚಿನ್ ಬಜಾಜ್, ಉಜಾಲಾ ಸೈನಸ್ ಗ್ರೂಪ್ ಆಫ್ ಹಾಸ್ಪಿಟಲ್ಸ್‌ನ ಸಂಸ್ಥಾಪಕ ನಿರ್ದೇಶಕ

ಮೂಲಸೌಕರ್ಯ ವೃದ್ಧಿಗೆ ಸೂಚನೆ

ನವದೆಹಲಿ (ಪಿಟಿಐ): ಕೋವಿಡ್–19 ಪ್ರಕರಣಗಳ ಸಂಖ್ಯೆ ತೀವ್ರವಾಗಿ ಹೆಚ್ಚುತ್ತಿದೆ. ಕೊರೊನಾ ರೂಪಾಂತರ ತಳಿ ಓಮೈಕ್ರಾನ್ ಪ್ರಕರಣಗಳೂ ಹೆಚ್ಚಾಗಿವೆ. ಹಾಗಾಗಿ, ಪ್ರಕರಣಗಳ ತೀವ್ರ ಏರಿಕೆಯನ್ನು ನಿರ್ವಹಿಸಲು ಬೇಕಾಗುವ ಮೂಲಸೌಕರ್ಯವನ್ನು ಹೆಚ್ಚಿಸಿ ಎಂದು ಕೇಂದ್ರ ಸರ್ಕಾರವು ರಾಜ್ಯಗಳಿಗೆ ಭಾನುವಾರ ಸೂಚಿಸಿದೆ. ವಾರದ ಯೋಜನೆ ರೂಪಿಸಿಕೊಳ್ಳಿ ಮತ್ತು ಲಸಿಕೆ ಹಾಕಿಸುವಿಕೆಯಲ್ಲಿ ರಾಷ್ಟ್ರೀಯ ಸರಾಸರಿಯನ್ನು ಮೀರಿ ಮುಂದೆ ಹೋಗಿ ಎಂದೂ ಹೇಳಲಾಗಿದೆ. ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು ರಾಜ್ಯಗಳ ಆರೋಗ್ಯ ಸಚಿವರು ಮತ್ತು ಹಿರಿಯ ಅಧಿಕಾರಿಗಳ ಜತೆಗೆ ಸಭೆ ನಡೆಸಿದ್ದಾರೆ. ಕೋವಿಡ್ ನಿರ್ವಹಣೆಯ ಯೋಜನೆಗಳ ಪರಾಮರ್ಶೆಯನ್ನು ದಿನ ದಿನವೂ ನಡೆಸುವಂತೆ ಮಾಂಡವೀಯ ಸೂಚಿಸಿದ್ದಾರೆ.

ವಿಧಾನಸಭೆಗೆ ಚುನಾವಣೆ ನಡೆಯಬೇಕಿರುವ ಪಂಜಾಬ್, ಗೋವಾ, ಉತ್ತರಾಖಂಡ, ಉತ್ತರ ಪ್ರದೇಶ ಮತ್ತು ಮಣಿಪುರದಲ್ಲಿ ಕೋವಿಡ್ ತಡೆಗೆ ವಿಶೇಷ ಮುತುವರ್ಜಿ ವಹಿಸುವಂತೆ ಸೂಚಿಸಲಾಗಿದೆ.

ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ಕೋವಿಡ್ ತುರ್ತು ಪ್ರತಿಕ್ರಿಯೆ ಪ್ಯಾಕೇಜ್‌ನ ನಿಧಿಯಲ್ಲಿ ಶೇ 17ರಷ್ಟನ್ನು ಮಾತ್ರ ಈವರೆಗೆ ಬಳಸಿಕೊಂಡಿವೆ ಎಂಬುದರತ್ತ ಮಾಂಡವೀಯ ಅವರು ಗಮನ ಸೆಳೆದಿದ್ದಾರೆ. ಈ ನಿಧಿಯನ್ನು ಬಳಸಿಕೊಂಡು ಐಸಿಯು ಹಾಸಿಗೆ, ಆಮ್ಲಜನಕ ವ್ಯವಸ್ಥೆ ಇರುವ ಹಾಸಿಗೆ, ಮಕ್ಕಳಿಗೆ ಐಸಿಯು ಇತ್ಯಾದಿ ಮೂಲಸೌಕರ್ಯ ಹೆಚ್ಚಿಸಬೇಕು ಎಂದು ಅವರು ಹೇಳಿದ್ದಾರೆ.

ರಾಜ್ಯದ ಕೋವಿಡ್ ಅಂಕಿ–ಅಂಶ

30,09,557	ಒಟ್ಟು ಪ್ರಕರಣಗಳು (30,08,370 ನಿನ್ನೆಯ ವಿವರ)
10,292	ಸಕ್ರಿಯ ಪ್ರಕರಣಗಳು
29,60,890	ಗುಣಮುಖರಾದವರು
38,346	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,187
ಗುಣಮುಖ	275
ಸಾವು	06

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

- ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯು ಸೋಮವಾರದಿಂದ ಆನ್‌ಲೈನ್‌ನಲ್ಲಿ ನಡೆಯಲಿದೆ. ಮುಂದಿನ ಎರಡು ವಾರ ಈ ವ್ಯವಸ್ಥೆ ಇರಲಿದೆ
- ರಷ್ಯಾದಲ್ಲಿ ಭಾನುವಾರ ಒಂದೇ ದಿನ 811 ಜನರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ

ಮುಂಬೈನಲ್ಲಿ ಒಂದೇ ದಿನ 8 ಸಾವಿರ ಪ್ರಕರಣ

ಮುಂಬೈ: ಮಹಾರಾಷ್ಟ್ರದಲ್ಲಿ ನಿತ್ಯ ವರದಿಯಾಗುವ ಕೋವಿಡ್ ಪ್ರಕರಣಗಳು ಮತ್ತೆ 10 ಸಾವಿರದ ಗಡಿ ದಾಟಿದ್ದು, ಮುಂಬೈ ಒಂದರಲ್ಲೇ 8 ಸಾವಿರ ಸೋಂಕಿತರು ಕಂಡುಬಂದಿದ್ದಾರೆ.

ಭಾನುವಾರ ಬೆಳಿಗ್ಗೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ರಾಜ್ಯದಲ್ಲಿ 11,877 ಕೋವಿಡ್ ಪ್ರಕರಣ ದಾಖಲಾಗಿವೆ. ಹೀಗಾಗಿ ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 42 ಸಾವಿರಕ್ಕೆ ಏರಿಕೆಯಾಗಿದೆ. ಇದೇ ಅವಧಿಯಲ್ಲಿ 50 ಜನರಲ್ಲಿ ಓಮೈಕ್ರಾನ್ ಪತ್ತೆಯಾಗಿದ್ದು, ರಾಜ್ಯದಲ್ಲಿ ಸೋಂಕಿತರ ಸಂಖ್ಯೆ 510ಕ್ಕೆ ಹೆಚ್ಚಳವಾಗಿದೆ.

ಬಹುತೇಕ ಪ್ರಕರಣಗಳಿಗೆ ರೋಗ ಲಕ್ಷಣಗಳಿಲ್ಲ ಎಂದು ಮುಂಬೈ ಪಾಲಿಕೆ ಆಯುಕ್ತ ಇಕ್ಬಾಲ್ ಸಿಂಗ್ ಚಾಹಲ್ ತಿಳಿಸಿದ್ದಾರೆ. ಮುಂಬೈನಲ್ಲಿ ಭಾನುವಾರ ವರದಿಯಾದ 8,063 ಪ್ರಕರಣಗಳಲ್ಲಿ ಶೇ 89ರಷ್ಟು ಪ್ರಕರಣಗಳಲ್ಲಿ ರೋಗ ಲಕ್ಷಣಗಳು ಕಂಡುಬಂದಿಲ್ಲ. ಈ ಪೈಕಿ 503 ಜನರು ಆಸ್ಪತ್ರೆಗಳಿಗೆ ದಾಖಲಾಗಿದ್ದು, 56 ಜನರು ಮಾತ್ರ ಆಮ್ಲಜನಕ ಸೌಲಭ್ಯದ ಹಾಸಿಗೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮುಂಬೈನ ಶೇ 90ರಷ್ಟು ಹಾಸಿಗೆಗಳು ಖಾಲಿಯಿವೆ ಎಂದು ಅವರು ಹೇಳಿದ್ದಾರೆ.ಸದ್ಯಕ್ಕೆ ರಾಜ್ಯದಲ್ಲಿ ಲಾಕ್‌ಡೌನ್ ಹೇರುವ ಆಲೋಚನೆ ಇಲ್ಲ ಎಂದು ಆರೋಗ್ಯ ಸಚಿವ ರಾಜೇಶ್ ಟೋಪೆ ಸ್ಪಷ್ಟಪಡಿಸಿದ್ದಾರೆ.

ದೃಢಪಡುವ ಪ್ರಮಾಣ ಶೇ 4.59ಕ್ಕೆ ಏರಿಕೆ: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಭಾನುವಾರ ಒಂದೇ ದಿನ 3,194 ಕೋವಿಡ್ ಸೋಂಕಿತರು ಪತ್ತೆಯಾಗಿದ್ದು, ಮೇ 20ರ ಬಳಿಕ ದಾಖಲಾದ ಅತ್ಯಧಿಕ ಸಂಖ್ಯೆ ಇದಾಗಿದೆ. ನಗರದಲ್ಲಿ ಕೋವಿಡ್ ದೃಢಪಡುವ ಪ್ರಮಾಣ ಶೇ 4.59ಕ್ಕೆ ಹೆಚ್ಚಳವಾಗಿದೆ.

ದೆಹಲಿ ವಿಪತ್ತು ನಿರ್ವಹಣಾ ಪ್ರಾಧಿಕಾರದ ಕ್ರಿಯಾ ಯೋಜನೆ ಪ್ರಕಾರ, ಕೋವಿಡ್ ದೃಢಪಡುವ ಪ್ರಮಾಣ ಎರಡು ದಿನ ಸತತವಾಗಿ ಶೇ 5ಕ್ಕಿಂತ ಹೆಚ್ಚಾದರೆ, ‘ರೆಡ್ ಅಲರ್ಟ್’ ಎಂದು ಕರೆಯಲಾಗುತ್ತದೆ. ಇದರ ಅನ್ವಯ ಸಂಪೂರ್ಣ ಕರ್ಫ್ಯೂ ಹಾಗೂ ಬಹುತೇಕ ಆರ್ಥಿಕ ಚಟುವಟಿಕೆಗಳಿಗೆ ನಿರ್ಬಂಧ ಹೇರಬೇಕಾಗುತ್ತದೆ.

ಸರಣಿ ವೆಬಿನಾರ್ ಆಯೋಜನೆ

ನವದೆಹಲಿ: ದೇಶದಲ್ಲಿ ಕೊರೊನಾ ವೈರಸ್ ಪ್ರಕರಣಗಳ ನಿರ್ವಹಣೆ ಕುರಿತಂತೆ ದೆಹಲಿಯ ಏಮ್ಸ್ ಸಹಯೋಗದಲ್ಲಿ ಜನವರಿ 5ರಿಂದ 19ರವರೆಗೆ ಸರಣಿ ವೆಬಿನಾರ್ ಆಯೋಜಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆದಿರುವ ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್, ರಾಜ್ಯಮಟ್ಟದ ಉತ್ಕೃಷ್ಟತಾ ಕೇಂದ್ರಗಳು (ವೈದ್ಯಕೀಯ ಕಾಲೇಜು ಆಸ್ಪತ್ರೆಗಳು), ಜಿಲ್ಲಾ ಮಟ್ಟದ ಕೋವಿಡ್ ಆರೋಗ್ಯ ಕೇಂದ್ರಗಳ ವೈದ್ಯರು, ಖಾಸಗಿ ಹಾಗೂ ಸರ್ಕಾರಿ ವೈದ್ಯರು, ಕೋವಿಡ್ ಚಿಕಿತ್ಸಾಲಯಗಳ ಉಸ್ತುವಾರಿಗಳು ಈ ವೆಬಿನಾರ್‌ನಲ್ಲಿ ಭಾಗವಹಿಸಬೇಕು ಎಂದು ಹೇಳಿದ್ದಾರೆ.

ಇದಕ್ಕೂ ಮುನ್ನ, ಸಚಿವಾಲಯವು ಏಮ್ಸ್ ಜತೆಗೂಡಿ ರಾಜ್ಯಗಳ ವೈದ್ಯಕೀಯ ಕಾಲೇಜು ಆಸ್ಪತ್ರೆಗಳ ಸಿಬ್ಬಂದಿಗೆ ಕೋವಿಡ್ ನಿರ್ವಹಣೆ ಕುರಿತು ವೆಬಿನಾರ್ ಹಮ್ಮಿಕೊಂಡಿತ್ತು. ಇದಕ್ಕೆ ಭಾರಿ ಸ್ಪಂದನೆ ವ್ಯಕ್ತವಾದ ಕಾರಣ, ಇದನ್ನು ಸರಣಿ ರೂಪದಲ್ಲಿ ಹಮ್ಮಿಕೊಳ್ಳಲು ಸಚಿವಾಲಯ ನಿರ್ಧರಿಸಿದೆ.

ಲಸಿಕೆ: ಮಕ್ಕಳಿಗೆ ಪ್ರತ್ಯೇಕ ಕೇಂದ್ರಕ್ಕೆ ಸೂಚನೆ

15-18 ವರ್ಷದ ಮಕ್ಕಳಿಗೆ ಕೋವಿಡ್ ತಡೆ ಲಸಿಕೆ ನೀಡುವ ವೇಳೆ ಲಸಿಕೆ ಮಿಶ್ರಣವನ್ನು ತಪ್ಪಿಸುವುದಕ್ಕಾಗಿ ಪ್ರತ್ಯೇಕ ಲಸಿಕಾ ಕೇಂದ್ರಗಳನ್ನು ತೆರೆಯಬೇಕು ಎಂದು ಮಾಂಡವೀಯ ಅವರು ರಾಜ್ಯಗಳಿಗೆ ಸೂಚಿಸಿದ್ದಾರೆ.

ಈ ವಯೋಮಾನದ ಮಕ್ಕಳಿಗೆ ಕೋವ್ಯಾಕ್ಸಿನ್ ಲಸಿಕೆ ಮಾತ್ರ ಲಭ್ಯವಿದೆ. 18 ದಾಟಿದವರಿಗೆ ಕೋವ್ಯಾಕ್ಸಿನ್ ಅಲ್ಲದೆ, ಕೋವಿಶೀಲ್ಡ್ ಮತ್ತು ಸ್ಪುಟ್ನಿಕ್ ಲಸಿಕೆಗಳು ಲಭ್ಯ ಇವೆ. ಮಕ್ಕಳಿಗೆ ಲಸಿಕೆ ನೀಡಿಕೆಗೆ ಸಂಬಂಧಿಸಿದ ಹೊಸ ಮಾರ್ಗಸೂಚಿಯನ್ನು ಕೇಂದ್ರವು ಬಿಡುಗಡೆ ಮಾಡಿದೆ. ಮಕ್ಕಳಿಗೆ ಲಸಿಕೆ ಹಾಕುವವರಿಗೆ ತರಬೇತಿ ನೀಡಬೇಕು. ಮಕ್ಕಳಿಗೆ ಕೋವ್ಯಾಕ್ಸಿನ್ ಬಿಟ್ಟು ಬೇರೆ ಲಸಿಕೆ ಹಾಕುವುದನ್ನು ತಡೆಯಲು ಲಸಿಕೆ ಹಾಕಲು ಪ್ರತ್ಯೇಕ ಕೇಂದ್ರ ತೆರೆಯಬೇಕು. ಮಕ್ಕಳಿಗೆ ಪ್ರತ್ಯೇಕ ಸಾಲು ಇರಬೇಕು. ಲಸಿಕೆ ಹಾಕಲು ಪ್ರತ್ಯೇಕ ತಂಡ ಇರಬೇಕು ಎಂಬ ಸಲಹೆಯನ್ನು ಅವರು ನೀಡಿದ್ದಾರೆ. ಲಸಿಕೆಗಾಗಿ ಕೋ–ವಿನ್ ಆ್ಯಪ್‌ನಲ್ಲಿ ಆಗಿರುವ ನೋಂದಣಿಯ ಆಧಾರದಲ್ಲಿ ಜಿಲ್ಲಾವಾರು ಲಸಿಕೆ ಬೇಡಿಕೆಯ ಮಾಹಿತಿಯನ್ನು ರಾಜ್ಯಗಳು ಕೇಂದ್ರಕ್ಕೆ ನೀಡಬೇಕು. ಲಸಿಕೆ ನೀಡಿಕೆ ಆರಂಭವಾಗುವುದಕ್ಕಿಂತ ಮುಂಚಿತವಾಗಿಯೇ ನಿಗದಿತ ಕೇಂದ್ರಕ್ಕೆ ಲಸಿಕೆ ತಲುಪುವಂತೆ ನೋಡಿಕೊಳ್ಳಬೇಕು ಎಂದೂ ಅವರು ಹೇಳಿದ್ದಾರೆ.

10 ಸಾವಿರ ದಾಟಿದ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿ ಸಾಗಿದ್ದು, ಸತತ ಎರಡನೇ ದಿನವೂ ಸಾವಿರಕ್ಕಿಂತ ಅಧಿಕ ಪ್ರಕರಣಗಳು ವರದಿಯಾಗಿವೆ.

ಭಾನುವಾರ 1,187 ಪ್ರಕರಣಗಳು ದೃಢಪಟ್ಟಿದ್ದು, ಆರು ಮಂದಿ ಸಾವಿಗೀಡಾಗಿದ್ದಾರೆ. ಶನಿವಾರ 1,033 ಮತ್ತು ಶುಕ್ರವಾರ 832 ಪ್ರಕರಣಗಳು ದೃಢಪಟ್ಟಿದ್ದವು.

ಬೆಂಗಳೂರಿನಲ್ಲೇ ಅತಿ ಹೆಚ್ಚಿನ 923 ಪ್ರಕರಣಗಳು ವರದಿಯಾಗಿವೆ. ಎಂಟು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಮತ್ತು 13 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಗದಗ, ಬೀದರ್, ಚಿಕ್ಕಬಳ್ಳಾಪುರ ಸೇರಿದಂತೆ ಎಂಟು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. ದಕ್ಷಿಣ ಕನ್ನಡದಲ್ಲಿ 63, ಉಡುಪಿಯಲ್ಲಿ 54, ಮೈಸೂರಿನಲ್ಲಿ 20, ಧಾರವಾಡದಲ್ಲಿ 15 ಹಾಗೂ ಬೆಳಗಾವಿ, ತುಮಕೂರು ಮತ್ತು ಕೊಡಗಿನಲ್ಲಿ ತಲಾ 12, ಮಂಡ್ಯದಲ್ಲಿ 10 ಹೊಸ ಪ್ರಕರಣಗಳು ವರದಿಯಾಗಿವೆ.

ಅಂಕೆ ಮೀರಿದರೆ ಲಾಕ್‌ಡೌನ್?

ಒಂದನೇ ಪುಟದಿಂದ

ಕಿತ್ತಳೆ ಮತ್ತು ಕೆಂಪು ವಲಯಗಳಿಗೆ ಸೇರುವ ಪ್ರದೇಶಗಳಲ್ಲಿ ಹಲವು ಬಿಗಿಯಾದ ನಿರ್ಬಂಧಗಳ ಜಾರಿಗೆ ಶಿಫಾರಸು ಮಾಡಲಾಗಿದೆ. ಸಾರ್ವಜನಿಕ ಸಾರಿಗೆ ಸೇವೆ ಸ್ಥಗಿತ, ವ್ಯಾಪಾರ ವಹಿವಾಟಿಗೆ ಅರ್ಧ ದಿನ ಮಾತ್ರ ಅವಕಾಶ ಸೇರಿದಂತೆ ಹಲವು ನಿರ್ಬಂಧಗಳನ್ನು ಸಮಿತಿ ಶಿಫಾರಸು ಮಾಡಿದೆ.

ಟಿಎಸಿ ವರದಿ ಆಧಾರದಲ್ಲಿ ಬಿಗಿಯಾದ ನಿರ್ಬಂಧಗಳನ್ನು ಜಾರಿಗೊಳಿಸಲು ರಾಜ್ಯ ಸರ್ಕಾರ ಸಿದ್ಧತೆ ನಡೆಸಿದೆ. ಲಾಕ್‌ಡೌನ್ ಜಾರಿಗೊಳಿಸಬೇಕಾದ ಅನಿವಾರ್ಯ ಸೃಷ್ಟಿಯಾಗದಂತೆ ತಪ್ಪಿಸಲು ಆರಂಭದಲ್ಲೇ ಕೆಲವು ನಿರ್ಬಂಧಗಳ ಜಾರಿಗೆ ಸರ್ಕಾರ ಒಲವು ಹೊಂದಿದೆ. ವಾರಾಂತ್ಯದೊಳಗೆ ಈ ಸಂಬಂಧ ಸ್ಪಷ್ಟ ನಿರ್ಧಾರಕ್ಕೆ ಬರುವ ಸಾಧ್ಯತೆ ಇದೆ.

‘3ನೇ ಅಲೆ ಸಾಧ್ಯತೆ’

ಭಾನುವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಹಿರಿಯ ಸಚಿವರು ಮತ್ತು ಅಧಿಕಾರಿಗಳ ಸಭೆ ನಡೆಯಿತು. ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ, ‘ಕೋವಿಡ್ ಮೂರನೇ ಅಲೆ ಬರುವುದು ನಿಶ್ಚಿತ ಎಂಬ ಸನ್ನಿವೇಶವಿದೆ. ಎರಡನೇ ಅಲೆಯಲ್ಲಿ ಎದುರಾದ ಸಮಸ್ಯೆಗಳು ಮರುಕಳಿಸುವುದನ್ನು ತಪ್ಪಿಸಲು ಬಿಗಿ ಕ್ರಮ ಅನಿವಾರ್ಯ. ಸಿ.ಎಂ ನೇತೃತ್ವದಲ್ಲಿ ಉನ್ನತಮಟ್ಟದ ಸಭೆ ನಡೆಸಿ ನಿರ್ಧಾರ ಕೈಗೊಳ್ಳಲಾಗುವುದು’ ಎಂದರು.

ಸಮಾರಂಭಗಳಲ್ಲಿ ಜನರಿಗೆ ಮಿತಿ

ಮದುವೆ, ಇತರ ಸಾಮಾಜಿಕ ಸಮಾರಂಭಗಳು, ಅಂತ್ಯಸಂಸ್ಕಾರ ಮತ್ತು ಮರಣೋತ್ತರ ವಿಧಿವಿಧಾನಗಳ ಕಾರ್ಯಕ್ರಮಗಳಿಗೆ ಜನಸಂಖ್ಯೆಯ ಮಿತಿಯನ್ನು ತಗ್ಗಿಸುವಂತೆ ತಾಂತ್ರಿಕ ಸಲಹಾ ಸಮಿತಿ ಶಿಫಾರಸು ಮಾಡಿದೆ.

ಹಳದಿ ವಲಯದಲ್ಲಿ ಮದುವೆ ಮತ್ತು ಇತರ ಸಮಾರಂಭಗಳಿಗೆ 200 ರಿಂದ 300 ಜನ ಹಾಗೂ ಅಂತ್ಯಕ್ರಿಯೆ ಮತ್ತು ಮರಣೋತ್ತರ ಕ್ರಿಯೆಗಳಲ್ಲಿ 100 ರಿಂದ 200 ಜನರು ಮಾತ್ರ ಭಾಗವಹಿಸಬೇಕು. ಕಿತ್ತಳೆ ವಲಯದಲ್ಲಿ ಈ ಸಂಖ್ಯೆ ಅನುಕ್ರಮವಾಗಿ 100 ರಿಂದ 200 ಮತ್ತು 50 ರಿಂದ 100 ಮಾತ್ರ ಇರಬೇಕು ಎಂದು ಟಿಎಸಿ ಸಲಹೆ ನೀಡಿದೆ.

ಕೆಂಪು ವಲಯದಲ್ಲಿ ಮದುವೆ ಮತ್ತು ಇತರ ಸಮಾರಂಭಗಳಿಗೆ 50 ರಿಂದ 100 ಹಾಗೂ ಅಂತ್ಯಕ್ರಿಯೆ ಮತ್ತು ಮರಣೋತ್ತರ ಕ್ರಿಯೆಗಳಲ್ಲಿ 20 ರಿಂದ 50 ಜನರು ಮಾತ್ರ ಪಾಲ್ಗೊಳ್ಳಲು ಅನುಮತಿ ನೀಡುವಂತೆ ಶಿಫಾರಸು ಮಾಡಲಾಗಿದೆ.

ಕಿತ್ತಳೆ ವಲಯದಲ್ಲಿ ಬರುವ ಧಾರ್ಮಿಕ ಸ್ಥಳಗಳು, ಉದ್ಯಾನ, ಮನರಂಜನಾ ಪಾರ್ಕ್, ವಸ್ತು ಸಂಗ್ರಹಾಲಯ ಮತ್ತು ಕಲಾ ಗ್ಯಾಲರಿಗಳಲ್ಲಿ ನಿರ್ಬಂಧ ಜಾರಿಗೊಳಿಸಬೇಕು. ಕೆಂಪು ವಲಯದಲ್ಲಿ ಈ ಎಲ್ಲವನ್ನೂ ಬಂದ್ ಮಾಡಬೇಕು ಎಂದು ಟಿಎಸಿ ಸಲಹೆ ಮಾಡಿದೆ.

ಇಂದಿನಿಂದ ಮಕ್ಕಳಿಗೆ ಲಸಿಕೆ

ಒಂದನೇ ಪುಟದಿಂದ

ಮೊಬೈಲ್ ಮೂಲಕ ನೋಂದಣಿ: ಮಕ್ಕಳ ಪರವಾಗಿ ಪೋಷಕರು ಅಥವಾ ಶಾಲೆಯ ಶಿಕ್ಷಕರು ಅಥವಾ ಮುಖ್ಯ ಶಿಕ್ಷಕರ ಮೊಬೈಲ್ ದೂರವಾಣಿ ಸಂಖ್ಯೆ ಮೂಲಕ ನೋಂದಣಿ ಮಾಡಿಸಬೇಕು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಆನ್‌ಲೈನ್ ತರಗತಿಗಳನ್ನು ನಡೆಸುತ್ತಿರುವ ಶಾಲೆಗಳು ನಿರ್ದಿಷ್ಟವಾಗಿ ಒಂದು ದಿನ ನಿಗದಿಪಡಿಸಬೇಕು. ಆ ದಿನದಂದು ಮಕ್ಕಳನ್ನು ಕರೆಸಿಕೊಂಡು ಲಸಿಕೆ ಹಾಕಿಸಬೇಕು. ಈ ಬಗ್ಗೆ ಶಾಲೆಗಳಿಗೂ ನಿರ್ದೇಶನ ನೀಡಲಾಗಿದೆ. ಶಾಲೆಯಿಂದ ಹೊರಗುಳಿದ, ಶಾಲೆ ತೊರೆದ ಮಕ್ಕಳನ್ನು ಕಾರ್ಮಿಕ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ನಗರಾಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಗುರುತಿಸಿ ಲಸಿಕೆ ನೀಡಲಾಗುವುದು ಎಂದು ತಿಳಿಸಿದೆ.

‘ಮೊದಲ ಡೋಸ್ ಪಡೆದ 28 ದಿನದ ನಂತರ ಎರಡನೇ ಡೋಸ್ ಲಸಿಕೆ ನೀಡಲಾಗುವುದು. ಲಸಿಕೆ ಬಗ್ಗೆ ಭಯ ಅಥವಾ ಆತಂಕ ಅನಗತ್ಯ. ಸಾಕಷ್ಟು ಅಧ್ಯಯನ ನಡೆಸಿ ಸುರಕ್ಷಿತ ಎನ್ನುವುದು ಸಾಬೀತಾದ ನಂತರವೇ ನೀಡಲಾಗುತ್ತಿದೆ. ಎಲ್ಲ ಸರ್ಕಾರಿ ಕೇಂದ್ರಗಳಲ್ಲಿ ಮತ್ತು ಶಾಲೆಗಳಲ್ಲಿ ಉಚಿತವಾಗಿ ಲಸಿಕೆ ನೀಡಲಾಗುತ್ತಿದೆ. ಟಿಡಿ ಅಥವಾ ಇನ್ನಾವುದೇ ಲಸಿಕೆ ಪಡೆದವರು 15 ದಿನದ ನಂತರ ಕೋವ್ಯಾಕ್ಸಿನ್ ಲಸಿಕೆ ಪಡೆಯಬೇಕು’ ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ವಿವರಿಸಿದ್ದಾರೆ.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಹಿಂದಿನ ಸರ್ಕಾರಗಳನ್ನು ತೆಗಳಿ ಯೋಗಿ ಸರ್ಕಾರವನ್ನು ಹೊಗಳಿದ ಮೋದಿ

‘ಅಪರಾಧಿಗಳ ಜತೆ ಜೈಲ್ ಜೈಲ್ ಆಟ’

ಮೀರತ್ (ಪಿಟಿಐ): ಹಿಂದಿನ ಸರ್ಕಾರಗಳ ಅವಧಿಯಲ್ಲಿ ಅಪರಾಧಿಗಳು ಮತ್ತು ಮಾಫಿಯಾಗಳು ಅವರದ್ದೇ ಆಟ ಆಡುತ್ತಿದ್ದರು. ಆದರೆ ಈಗ ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರ ಅವರ ಜೊತೆ ‘ಜೈಲ್ ಜೈಲ್’ ಆಟ ಆಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಹೇಳಿದರು. ಮೋದಿ ಅವರು ಹಿಂದಿನ ಸರ್ಕಾರಗಳನ್ನು ಈ ಮೂಲಕ ಟೀಕಿಸಿದರು.

ಮೇಜರ್ ಧ್ಯಾನ್ ಚಂದ್ ಕ್ರೀಡಾ ವಿಶ್ವವಿದ್ಯಾನಿಲಯದ ಶಂಕು ಸ್ಥಾಪನೆ ಕಾರ್ಯಕ್ರಮದ ಬಳಿಕ ನಡೆದ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡಿದರು.

‘ಇಲ್ಲಿಯ ಮನೆಗಳನ್ನು ಬೆಂಕಿ ಹಚ್ಚಿ ಸುಟ್ಟಿದ್ದನ್ನು ಮೀರತ್ ಮತ್ತು ಸುತ್ತಲಿನ ಪ್ರದೇಶಗಳ ಜನರು ಎಂದಿಗೂ ಮರೆಯುವುದಿಲ್ಲ. ರಸ್ತೆಗಳಲ್ಲಿ ಓಡಾಡುತ್ತಿದ್ದ ಹೆಣ್ಣು ಮಕ್ಕಳ ಬಗ್ಗೆ ಆಕ್ಷೇಪಾರ್ಹ ರೀತಿಯಲ್ಲಿ ಮಾತನಾಡಲಾಗುತ್ತಿತ್ತು. ಈ ಎಲ್ಲಾ ಆಟಗಳನ್ನು ಹಿಂದಿನ ಸರ್ಕಾರಗಳು ಆಡಿದ್ದರಿಂದ ಜನರು ತಮ್ಮ ಹಿರಿಯರ ಮನೆಗಳನ್ನು ತೊರೆದು ಬೇರೆ ಊರುಗಳಿಗೆ ಗುಳೆ ಹೋದರು. ಐದು ವರ್ಷಗಳಿಂದ ಯೋಗಿ ನೇತೃತ್ವದ ಸರ್ಕಾರ ಅಂಥ ದುಷ್ಕರ್ಮಿಗಳ ಜೊತೆ ಜೈಲ್–ಜೈಲ್ ಆಡುತ್ತಿದೆ. ನಮ್ಮ ಹೆಣ್ಣು ಮಕ್ಕಳು ಸಂಜೆ ಮೇಲೆ ಮನೆಯಿಂದ ಹೊರಬರುತ್ತಿದ್ದಾರೆ. ಮೀರತ್‌ನ ಹೆಣ್ಣು ಮಕ್ಕಳು ದೇಶಕ್ಕೇ ಗೌರವ ತರುತ್ತಿದ್ದಾರೆ’ ಎಂದರು.

ಕದ್ದ ಕಾರುಗಳ ಬಿಡಿ ಭಾಗಗಳನ್ನು ಮಾರಾಟ ಮಾಡುವ ಕಾರಣಕ್ಕೆ ಪ್ರಸಿದ್ಧಿ ಪಡೆದಿದ್ದ ಮೀರತ್‌ನ ಸೋಟಗಂಜ್ ಮಾರುಕಟ್ಟೆ ಕುರಿತು ಮಾತನಾಡಿದ ಅವರು, ‘ವಾಹನಗಳನ್ನು ಬಳಸಿ ಆಡುತ್ತಿದ್ದ ಇಂಥ ಆಟಗಳಿಗೆ ಈಗ ಅಂತ್ಯ ಹಾಡಲಾಗಿದೆ. ನಿಜವಾದ ಕ್ರೀಡೆಗೆ ಉತ್ತೇಜನ ನೀಡಲಾಗುತ್ತಿದೆ. ಕ್ರೀಡಾ ಪ್ರಪಂಚದಲ್ಲಿ ತಮ್ಮ ಇರುವಿಕೆ ಸಾಬೀತುಪಡಿಸುವಂಥ ಅವಕಾಶಗಳು ಉತ್ತರ ಪ್ರದೇಶದ ಯುವ ಜನರಿಗೆ’ ಸಿಗುತ್ತಿವೆ ಎಂದರು.

ಈ ಕ್ರೀಡಾ ವಿಶ್ವವಿದ್ಯಾಲಯದಿಂದ ಮುಂದಿನ ದಿನಗಳಲ್ಲಿ 1,000ಕ್ಕೂ ಹೆಚ್ಚು ಯುವಕ, ಯುವತಿಯರು ಅತ್ಯುತ್ತಮ ಕ್ರೀಡಾಪಟುಗಳಾಗಿ ಹೊರಹೊಮ್ಮಲಿದ್ದಾರೆ. ಕ್ರಾಂತಿಕಾರಿಗಳ ನಗರ ಮೀರತ್ ಮುಂದಿನ ದಿನಗಳಲ್ಲಿ ಕ್ರೀಡಾಪಟುಗಳ ನಗರ ಎಂಬ ಗುರುತನ್ನೂ ಪಡೆಯಲಿದೆ ಎಂದರು. ದೇಶದ ಮೊದಲ ಸ್ವಾತಂತ್ರ್ಯ ಸಂಗ್ರಾಮವಾದ 1857ರ ಸಿಪಾಯಿ ದಂಗೆ ಆರಂಭವಾಗಿದ್ದು ಮೀರತ್‌ನಲ್ಲಿ. ಸಿಪಾಯಿ ಮಂಗಲ್ ಪಾಂಡೆ ಅದನ್ನು ಮುನ್ನಡೆಸಿದ್ದರು ಎಂಬುದನ್ನು ಉಲ್ಲೇಖಿಸಿದರು.



ಪೂರ್ವಾಂಚಲ ಎಕ್ಸ್‌ಪ್ರೆಸ್ ವೇ ಸಮೀಪದ ಮಹುರಕಾಲನ್ ಗ್ರಾಮದಲ್ಲಿ ಹೊಸದಾಗಿ ನಿರ್ಮಿಸಲಾದ ಪರಶುರಾಮ ದೇವಾಲಯಕ್ಕೆ ಬಂದ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರನ್ನು ಪಕ್ಷದ ಬೆಂಬಲಿಗರು ಭಾನುವಾರ ಸ್ವಾಗತಿಸಿದರು ಪಿಟಿಐ ಚಿತ್ರ

ಪಕ್ಷ ಬಯಸಿದರೆ ಸ್ಪರ್ಧೆ: ಯೋಗಿ ಆದಿತ್ಯನಾಥ

ಲಖನೌ (ಪಿಟಿಐ): ಈ ಬಾರಿಯ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಸ್ಪರ್ಧಿಸಲಿದ್ದಾರೆಯೇ ಎಂಬ ಕುರಿತು ಇನ್ನೂ ಯಾವ ಸ್ಪಷ್ಟ ಮಾಹಿತಿ ದೊರಕಿಲ್ಲ. ಆದರೆ, ಪಕ್ಷದ ನಾಯಕತ್ವ ಬಯಸಿದರೆ ತಾವು ಚುನಾವಣೆಯಲ್ಲಿ ಸ್ಪರ್ಧಿಸಲು ಸಿದ್ಧ ಎಂದು ಯೋಗಿ ಆದಿತ್ಯನಾಥ ಶನಿವಾರ ಹೇಳಿದ್ದಾರೆ. ತಾವು ಯಾವ ಕ್ಷೇತ್ರದಿಂದ ಸ್ಪರ್ಧಿಸಬೇಕು ಎಂಬುದನ್ನು ಪಕ್ಷದ ನಾಯಕತ್ವ ನಿರ್ಧರಿಸಲಿದೆ ಎಂದಿದ್ದಾರೆ.

ಯೋಗಿ ಅವರು ಚುನಾವಣೆಯಲ್ಲಿ ಸ್ಪರ್ಧಿಸುವುದರಿಂದ ಮತದಾರರಿಗೆ ಧನಾತ್ಮಕ ಸಂದೇಶ ರವಾನಿಸಿದಂತಾಗುತ್ತದೆ ಎಂದು ಉತ್ತರ ಪ್ರದೇಶ ಬಿಜೆಪಿಯ ಒಂದು ವರ್ಗ ಭಾವಿಸಿದೆ. ‘ಆದಿತ್ಯನಾಥ ಅವರು ಉತ್ತರ ಪ್ರದೇಶ ಬಿಜೆಪಿಯ ಪ್ರಮುಖ ನಾಯಕ. ಚುನಾವಣಾ ಕಣದಲ್ಲಿ ಅವರ ಇರುವಿಕೆಯಿಂದ ಪಕ್ಷದ ಕಾರ್ಯಕರ್ತರಿಗೆ ಮತ್ತು ಮತದಾರರಿಗೆ ಉತ್ತಮ ಸಂದೇಶ ರವಾನೆ ಆಗುತ್ತದೆ’ ಎಂದು ಪಕ್ಷದ ಹಿರಿಯ ಮುಖಂಡರೊಬ್ಬರು ಪ್ರಜಾವಾಣಿಗೆ ಹೇಳಿದ್ದಾರೆ.

ಆದರೆ ಬಿಜೆಪಿಯ ಮತ್ತೊಂದು ವರ್ಗ ಯೋಗಿ ಅವರ ಸ್ಪರ್ಧೆಯನ್ನು ವಿರೋಧಿಸಿದೆ. ‘ಪ್ರಧಾನಿ ನರೇಂದ್ರ ಮೋದಿ ಅವರ ಬಳಿಕ ಆದಿತ್ಯನಾಥರೇ ಉತ್ತರ ಪ್ರದೇಶದ ಜನಪ್ರಿಯ ನಾಯಕ. ಪಕ್ಷದಿಂದ ಸ್ಪರ್ಧಿಸುತ್ತಿರುವ ಎಲ್ಲರ ಪರವಾಗಿ ಅವರು ಪ್ರಚಾರ ನಡೆಸುವ ಅಗತ್ಯವಿದೆ. ಅವರೇ ಸ್ಪರ್ಧಾ ಕಣದಲ್ಲಿ ಇದ್ದರೆ ಚುನಾವಣಾ ಪ್ರಚಾರಕ್ಕೆ ತೊಂದರೆ ಆಗುತ್ತದೆ’ ಎಂದು ಮತ್ತೊಬ್ಬ ಮುಖಂಡ ಹೇಳಿದ್ದಾರೆ.

ಸ್ಪರ್ಧೆ ಕುರಿತ ನಿರ್ಧಾರವನ್ನು ಆದಿತ್ಯನಾಥ ಅವರಿಗೇ ಬಿಡುವುದಾಗಿ ಬಿಜೆಪಿ ಮೂಲಗಳು ತಿಳಿಸಿವೆ. ತಮ್ಮ ಲೋಕಸಭಾ ಕ್ಷೇತ್ರ ಗೋರಖಪುರ ಅಥವಾ ಅಯೋಧ್ಯೆಯಿಂದ ಅವರು ಸ್ಪರ್ಧಿಸಬಹುದು ಎಂಬ ಮಾತುಗಳೂ ಕೇಳಿಬಂದಿವೆ.

ಯೋಗಿ ಅವರು ಸದ್ಯ ಉತ್ತರ ಪ್ರದೇಶ ವಿಧಾನ ಪರಿಷತ್ ಸದಸ್ಯರಾಗಿದ್ದಾರೆ.

ವಿವಾಹ ವಯಸ್ಸು: ಸಮಿತಿಯಲ್ಲಿ ಏಕೈಕ ಮಹಿಳೆ!

ನವದೆಹಲಿ (ಪಿಟಿಐ): ಮಹಿಳೆಯರ ಮದುವೆಯ ಕನಿಷ್ಠ ವಯಸ್ಸನ್ನು ಈಗಿನ 18 ವರ್ಷದಿಂದ 21 ವರ್ಷಕ್ಕೆ ಏರಿಸುವುದಕ್ಕೆ ಸಂಬಂಧಿಸಿದ ಮಸೂದೆಯನ್ನು ಸಮಗ್ರ ಪರಿಶೀಲನೆಗಾಗಿ ಸಂಸದೀಯ ಸಮಿತಿಗೆ ಒಪ್ಪಿಸಲಾಗಿದೆ.

ಈ ಸಮಿತಿಯ ಸದಸ್ಯ ಬಲ 31. ಆದರೆ, ಈ ಸದಸ್ಯರ ಪೈಕಿ ಒಬ್ಬರು ಮಾತ್ರ ಮಹಿಳಾ ಸಂಸದರಿದ್ದಾರೆ!

ರಾಜ್ಯಸಭೆಯ ವೆಬ್‌ಸೈಟ್‌ನಲ್ಲಿ ಸಮಿತಿಯ ಸದಸ್ಯರ ಪಟ್ಟಿಯನ್ನು ಪ್ರಕಟಿಸಲಾಗಿದೆ. ಬಿಜೆಪಿಯ ವಿನಯ್ ಸಹಸ್ರಬುದ್ಧೆ ಸಮಿತಿ ಅಧ್ಯಕ್ಷರಾಗಿದ್ದಾರೆ. ಟಿಎಂಸಿ ಸಂಸದೆ ಸುಷ್ಮಿತಾ ದೇವ್ ಅವರು ಮಾತ್ರ ಈ ಸಮಿತಿಯ ಏಕೈಕ ಮಹಿಳಾ ಸದಸ್ಯರಾಗಿದ್ದಾರೆ.

‘ಈ ಸಂಸದೀಯ ಸಮಿತಿಯಲ್ಲಿ ಮಹಿಳಾ ಸಂಸದರಿಗೆ ಹೆಚ್ಚು ಪ್ರಾತಿನಿಧ್ಯ ನೀಡಬೇಕಿತ್ತು’ ಎಂದು ಎನ್‌ಸಿಪಿಯ ಸಂಸದೆ ಸುಪ್ರಿಯಾ ಸುಳೆ ಹೇಳಿದ್ದಾರೆ.

‘ಸಮಿತಿ ಮುಂದೆ ಹಾಜರಾಗಿ, ಅಭಿಪ್ರಾಯ ತಿಳಿಸುವಂತೆ ಜನರಿಗೆ ಆಹ್ವಾನಿಸುವ ಅಧಿಕಾರ ಸಮಿತಿ ಅಧ್ಯಕ್ಷರಿಗೆ ಇದೆ’ ಎಂದಿದ್ದಾರೆ.

ಪೆಗಾಸಸ್:ಶಂಕೆ ಇದ್ದಲ್ಲಿ ದೂರು ನೀಡಿ

ನವದೆಹಲಿ: ಪೆಗಾಸಸ್ ಕುತಂತ್ರಾಂಶ ಬಳಸಿ ತಮ್ಮ ಫೋನ್ ಅನ್ನು ಗಮನಿಸಲಾಗುತ್ತಿದೆ ಎಂದು ಶಂಕೆ ಉಳ್ಳವರು ಈ ಕುರಿತು ದೂರು ನೀಡಬಹುದು ಎಂದು ಸುಪ್ರೀಂ ಕೋರ್ಟ್ ನೇಮಕ ಮಾಡಿರುವ ತಾಂತ್ರಿಕ ಸಮಿತಿಯು ತಿಳಿಸಿದೆ.

ಇಸ್ರೇಲ್‌ನ ವಿವಾದಿತ ಕುತಂತ್ರಾಂಶ ಬಳಸಿದ್ದ ಪೆಗಾಸಸ್ ಗೂಢಚರ್ಯೆ ಪ್ರಕರಣದ ತನಿಖೆಗೆ ಸುಪ್ರೀಂ ಕೋರ್ಟ್ ರಚಿಸಿರುವ ತ್ರಿಸದಸ್ಯರ ತಾಂತ್ರಿಕ ಸಮಿತಿ ಈ ಬಗ್ಗೆ ನೋಟಿಸ್ ನೀಡಿದೆ. ಜ.7ರ ಒಳಗೆ ಸಂಪರ್ಕಿಸಲು ತಿಳಿಸಿದೆ.

ತ್ರಿಸದಸ್ಯ ತಾಂತ್ರಿಕ ಸಮಿತಿಯು ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಆರ್.ವಿ.ರವೀಂದ್ರನ್ ಅವರ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಜನವರಿ 7ರ ಒಳಗೆ ಇ–ಮೇಲ್ (inquiry@pegasus-india-investigation.in) ಮೂಲಕ ಸಮಿತಿಯನ್ನು ಸಂಪರ್ಕಿಸಬಹುದು.

ಪ್ಯಾರಿಸ್ ಒಲಿಂಪಿಕ್ಸ್: ನೀರಜ್ ಚೋಪ್ರಾಗೆ ಕ್ಲಾಸ್ ಕೋಚ್

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ನೀರಜ್ ಚೋಪ್ರಾ ಅವರ ಕೋಚ್ ಕ್ಲಾಸ್ ಬಾರ್ಟೊನೀಜ್ ಅವರ ಒಪ್ಪಂದ 2024ರ ಪ್ಯಾರಿಸ್ ಒಲಿಂಪಿಕ್ಸ್ ವರೆಗೆ ವಿಸ್ತರಿಸಲಾಗಿದೆ. ಜರ್ಮನಿಯ ಕ್ಲಾಸ್ ಬಯೋ ಮೆಕ್ಯಾನಿಕಲ್ ಪರಿಣತರೂ ಆಗಿದ್ದಾರೆ.



ನೀರಜ್ ಚೋಪ್ರಾ

‘ಜಾವೆಲಿನ್ ಥ್ರೋ ಚಿನ್ನದ ಪದಕ ವಿಜೇತ ಚೋಪ್ರಾ ಅವರ ಕೋಚ್ ಆಗಿ ಕ್ಲಾಸ್ ಪ್ಯಾರಿಸ್ ಒಲಿಂಪಿಕ್ಸ್‌ನವರೆಗೂ ಮುಂದುವರಿಯವರು’ ಎಂದು ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಪ್ರಕಟಣೆಯಲ್ಲಿ ತಿಳಿಸಿದೆ.

2018ರಲ್ಲಿ ನೀರಜ್ ಅವರ ಮೊಣಕೈ ಶಸ್ತ್ರಚಿಕಿತ್ಸೆಯ ನಂತರ ಮತ್ತು ಮೊದಲು ಕೋಚ್ ಆಗಿದ್ದ ವಿಶ್ವದಾಖಲೆ ಜಾವೆಲಿನ್ ಥ್ರೋ ಅಥ್ಲೀಟ್ ಯುವೆ ಹಾನ್ ಅವರ ನಂತರ ಕ್ಲಾಸ್ ನೇಮಕವಾಗಿದ್ದರು.

400 ಮೀಟರ್ಸ್ ಓಟದ ಕೋಚ್ ಗಲಿನಾ ಬುಕಾರಿನಾ ಅವ ರನ್ನೂ ಮುಂದುವರಿಸಲಾಗಿದೆ. ಏಷ್ಯನ್ ಗೇಮ್ಸ್‌ನವರೆಗೂ ಅವರು ಕಾರ್ಯನಿರ್ವಹಿಸಲಿದ್ದಾರೆ ಎಂದು ಎಎಫ್‌ಐ ತಿಳಿಸಿದೆ.

ಟೆಸ್ಟ್: ಬಾಂಗ್ಲಾ ದಿಟ್ಟ ಹೋರಾಟ

ಮೌಂಟ್ ಮಾಂಗನೂಯಿ (ಎಎಫ್‌ಪಿ): ಮೆಹಮುದುಲ್ ಹಸನ್ ಜಾಯ್ ಮತ್ತು ನಜಿಮುಲ್ ಹುಸೇನ್ ಶಾಂತೊ ಅವರ ದಿಟ್ಟ ಬ್ಯಾಟಿಂಗ್‌ನಿಂದಾಗಿ ಬಾಂಗ್ಲಾದೇಶ ತಂಡವು ನ್ಯೂಜಿಲೆಂಡ್ ಎದುರಿನ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ ಪ್ರತ್ಯುತ್ತರ ನೀಡಿದೆ.

ನ್ಯೂಜಿಲೆಂಡ್ ತಂಡವು ಮೊದಲ ಇನಿಂಗ್ಸ್‌ನಲ್ಲಿ 108.1 ಓವರ್‌ಗಳಲ್ಲಿ 328 ರನ್ ಗಳಿಸಿ ಆಲೌಟ್ ಆಯಿತು. ಭಾನುವಾರ ಎರಡನೇ ದಿನದಾಟದ ಕೊನೆಗೆ ಬಾಂಗ್ಲಾ ತಂಡವು 67 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 175 ರನ್ ಗಳಿಸಿತು. ಮೆಹಮುದುಲ್ ಹಸನ್ (ಬ್ಯಾಟಿಂಗ್ 70; 211ಎ, 4X7) ಮತ್ತು ಮೊಮಿನುಲ್ ಹಕ್ (ಬ್ಯಾಟಿಂಗ್ 8; 27ಎ) ಕ್ರೀಸ್‌ನಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 108.1 ಓವರ್‌ಗಳಲ್ಲಿ 328, **ಬಾಂಗ್ಲಾದೇಶ:** 67 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 175 (ಶಾದ್ಮನ್ ಇಸ್ಲಾಂ 22, ಮೆಹಮುದುಲ್ ಹಸನ್ ಜಾಯ್ ಬ್ಯಾಟಿಂಗ್ 70, ನಜಿಮುಲ್ ಹುಸೇನ್ ಶಾಂತೊ 64, ನೀಲ್ ವಾಗ್ನರ್ 27ಕ್ಕೆ2).

ಕೆಎಸ್‌ಎಫ್‌ಎ ಮಹಿಳಾ ಫುಟ್‌ಬಾಲ್: ಬ್ರೇವ್ಸ್‌ಗೆ ಗೆಲುವು

ಕಿಕ್‌ಸ್ಟಾರ್ಟ್, ಮಿಸಾಕ ಎಫ್‌ಸಿ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿಕ್‌ಸ್ಟಾರ್ಟ್ ಎಫ್‌ಸಿ ಮತ್ತು ಮಿಸಾಕ ಯುನೈಟೆಡ್ ಎಫ್‌ಸಿ ತಂಡಗಳು ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ ಆಶ್ರಯದ ಮಹಿಳಾ ಲೀಗ್‌ನಲ್ಲಿ ಭಾನುವಾರ ಭರ್ಜರಿ ಜಯ ಸಾಧಿಸಿದವು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯಗಳಲ್ಲಿ ಕಿಕ್‌ಸ್ಟಾರ್ಟ್ 6–0ಯಿಂದ ರೆಬೆಲ್ಸ್ ವಿಮೆನ್ಸ್ ಎಫ್‌ಸಿ ವಿರುದ್ಧ ಮತ್ತು ಮಿಸಾಕ 4–0ಯಿಂದ ಬೆಂಗಳೂರು ಗ್ಯಾಲಕ್ಸಿ ಎಫ್‌ಸಿಯನ್ನು ಮಣಿಸಿತು.

ಕಿಕ್‌ಸ್ಟಾರ್ಟ್ ಪರವಾಗಿ ಕಾವ್ಯ (42ನೇ ನಿಮಿಷ), ಸುಮಿತ್ರ (44ನೇ ನಿ), ಮಾರ್ಗರೆಟ್ (48ನೇ ನಿ), ಫಂಜೊಬಮ್ ನಿರ್ಮಲಾ ದೇವಿ (54ನೇ ನಿ), ಸೋನಿಯಾ ರಾಣಾ (90+1ನೇ ನಿ) ಮತ್ತು ಖುನುಮಾವುಮ್ ನಿರ್ಮಲಾ ದೇವಿ (90+2ನೇ ನಿ) ಗೋಲು ಗಳಿಸಿದರು.

ಬೆಂಗಳೂರು ಗ್ಯಾಲಕ್ಸಿ ಎದುರಿನ ಪಂದ್ಯದಲ್ಲಿ ಮಿಸಾಕ ತಂಡಕ್ಕಾಗಿ ಲಾಲ್‌ಮುಹಾಮಿ (3ನೇ ನಿ), ಅಂಜಲಿ (22ನೇ ನಿ) ಮತ್ತು ಲಾಲ್‌ರಿಮ್ಸ್ವಾನಿ (34, 60ನೇ ನಿ) ಚೆಂಡನ್ನು ಗುರಿ ಮುಟ್ಟಿಸಿದರು. ದಿನದ ಮೊದಲ ಪಂದ್ಯದಲ್ಲಿ ಬೆಂಗಳೂರು ಬ್ರೇವ್ಸ್ 2–0ಯಿಂದ ಸ್ಲಾಮ್ಸರ್ಸ್ ಎಫ್‌ಸಿಯನ್ನು ಸೋಲಿಸಿತು. ಸಾರಾ (31ನೇ ನಿ) ಮತ್ತು ಲಾಲ್‌ಚನ್ಹಿಮಿ (85ನೇ ನಿ) ಗೋಲು ಗಳಿಸಿದರು. ಬೆಂಗಳೂರು ಯುನೈಟೆಡ್ ಎದುರಿನ ಪಂದ್ಯದಲ್ಲಿ ಪರಿಕ್ರಮ ವಿಮೆನ್ಸ್ ಎಫ್‌ಸಿ 3–1ರಲ್ಲಿ ಜಯ ಗಳಿಸಿತು. ಪರಿಕ್ರಮ ಪರವಾಗಿ ಮಿಥಿಲಾ ರಮಣಿ (72ನೇ ನಿ), ಕೊಜೋಲ್ (83ನೇ ನಿ), ಸ್ಫೂರ್ತಿ (90+2ನೇ ನಿ) ಚೆಂಡನ್ನು ಗುರಿ ಮುಟ್ಟಿಸಿದರೆ ಎದುರಾಳಿ ತಂಡದ ಶೋಭನಾ (35ನೇ ನಿ) ಯಶಸ್ಸು ಕಂಡರು.



ಬೆಂಗಳೂರು ಯುನೈಟೆಡ್ ಎಫ್‌ಸಿಯ ಮೌನಿಕಾ (ಎಡ) ಅವರಿಂದ ಚೆಂಡು ಕಸಿದುಕೊಳ್ಳಲು ಪ್ರಯತ್ನಿಸಿದ ಪರಿಕ್ರಮ ಎಫ್‌ಸಿಯ ಅರ್ಚನಾ ಕುಮಾರಿ – ಪ್ರಜಾವಾಣಿ ಚಿತ್ರ

ಮಣಿಪುರ ತಂಡದಲ್ಲಿ ಖಲೀಲ್

ಬೆಂಗಳೂರು: ರಣಜಿ ಟೂರ್ನಿಯಲ್ಲಿ ಆಡಲಿರುವ ಮಣಿಪುರ ಕ್ರಿಕೆಟ್ ತಂಡಕ್ಕೆ ಬೆಂಗಳೂರಿನ ಖಲೀಲ್ ಶರೀಫ್ ಥ್ರೋಡೌನ್ ಪರಿಣತರಾಗಿ ನೇಮಕವಾಗಿದ್ದಾರೆ.



ಖಲೀಲ್

ಶರೀಫ್ ಎರಡು ವರ್ಷ ಕಾಲ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ರಾಜಸ್ಥಾನ ರಾಯಲ್ಸ್ ತಂಡದಲ್ಲಿ ಥ್ರೋಡೌನ್ ಪರಿಣತರಾಗಿ ಕೆಲಸ ಮಾಡಿದ್ದಾರೆ. ಇದೀಗ ಮಣಿಪುರದ ಮುಖ್ಯ ಕೋಚ್, ಕನ್ನಡಿಗ ದೊಡ್ಡಗಣೇಶ್ ಅವರೊಂದಿಗೆ ಕಾರ್ಯನಿರ್ವಹಿಸುತ್ತಿದ್ದಾರೆ.

‘ಮಣಿಪುರದಲ್ಲಿ ಈಗ ಕ್ರಿಕೆಟ್ ಬೆಳೆಯುತ್ತಿದೆ. ಇಲ್ಲಿಯ ಹುಡುಗರೊಂದಿಗೆ ಕಾರ್ಯನಿರ್ವಹಿಸುತ್ತಿರುವುದು ನಮಗೂ ಒಳ್ಳೆಯ ಅನುಭವ ಲಭಿಸುತ್ತಿದೆ. ಅವರಿಗೆ ಹೊಸತನ್ನು ಕಲಿಸುತ್ತ, ನಾವೂ ಬಹಳಷ್ಟು ಕಲಿಯುವ ಅವಕಾಶ ಇಲ್ಲಿದೆ. ಸೈಯದ್ ಮುಷ್ತಾಕ್ ಅಲಿ ಟೂರ್ನಿಯಲ್ಲಿಯೂ ಈ ತಂಡದಲ್ಲಿ ಕೆಲಸ ನಿರ್ವಹಿಸಿದ್ದೆ. ಇದೀಗ ರಣಜಿ ಟೂರ್ನಿಯಲ್ಲಿಯೂ ಕಾರ್ಯನಿರ್ವಹಿಸುವ ಅವಕಾಶ ಸಿಕ್ಕಿದೆ‘ ಎಂದು ಖಲೀಲ್ ‘ಪ್ರಜಾವಾಣಿ’ಗೆ ಹೇಳಿದರು.

‘ಎರಡು ವರ್ಷ ರಾಜಸ್ಥಾನ್ ತಂಡದಲ್ಲಿ ಕೆಲಸ ಮಾಡುವಾಗ ದೇಶ, ವಿದೇಶದ ಖ್ಯಾತನಾಮ ಬ್ಯಾಟರ್‌ಗಳಿಗೆ ಥ್ರೋಡೌನ್ ಮಾಡುವ ಅವಕಾಶ ಲಭಿಸಿತ್ತು. ಆಸ್ಟ್ರೇಲಿಯಾದ ಸ್ಟೀವ್ ಸ್ಮಿತ್, ಇಂಗ್ಲೆಂಡ್‌ನ ಬೆನ್ ಸ್ಟೋಕ್ಸ್, ಭಾರತದ ಸಂಜು ಸ್ಯಾಮ್ಸನ್ ಸೇರಿದಂತೆ ಹಲವರಿಗೆ ಥ್ರೋಡೌನ್ ನೆರವು ನೀಡಿದ್ದೇನೆ. ಬೆಂಗಳೂರಿನಲ್ಲಿದ್ದಾಗ ಮಯಂಕ್ ಅಗರವಾಲ್, ಚೇತೇಶ್ವರ್ ಪೂಜಾರ, ದಿನೇಶ್ ಕಾರ್ತಿಕ್, ಕೆ.ಎಲ್. ರಾಹುಲ್ ಅವರಿಗೆ ಥ್ರೋಡೌನ್ ಮಾಡುವ ಅವಕಾಶ ಲಭಿಸಿತ್ತು‘ ಎಂದು ಖಲೀಲ್ ಹೇಳಿದರು.

ಮೂಲತಃ ಕೋಲಾರದ ಖಲೀಲ್, ಕ್ರಿಕೆಟ್ ಕಲಿಯಲೆಂದೇ ಬೆಂಗಳೂರಿಗೆ ಬಂದು ನೆಲೆಸಿದವರು.

‘ಕೆಐಒಸಿಯಲ್ಲಿ ಇರ್ಫಾನ್ ಸೇಟ್ ಅವರ ಬಳಿ ತರಬೇತಿ ಪಡೆದೆ. ಅವರ ಅಕಾಡೆಮಿಯಲ್ಲಿ ಒಂದು ಸಲ ಥ್ರೋಡೌನ್ ಸಲಕರಣೆಯನ್ನು ಇರ್ಫಾನ್ ಅವರು ತಂದಿದ್ದರು. ಅದರಿಂದ ಬ್ಯಾಟರ್‌ಗಳಿಗೆ ತರಬೇತಿ ನೀಡಲು ಹೇಗೆ ಅನುಕೂಲವಾಗುತ್ತದೆ ಎಂದು ವಿವರಿಸಿದ್ದರು. ಅದು ನನ್ನಲ್ಲಿ ಅಪಾರ ಆಸಕ್ತಿ ಕೆರಳಿಸಿತು. ಶ್ರದ್ಧೆಯಿಂದ ಕಲಿತೆ‘ ಎಂದು ಖಲೀಲ್ ಹೇಳುತ್ತಾರೆ.

ರಾಜೂ ಭಟ್ಕಳ ಫೀಲ್ಡಿಂಗ್ ಕೋಚ್

ಹುಬ್ಬಳ್ಳಿ: ಕರ್ನಾಟಕದ ಕ್ರಿಕೆಟಿಗ ರಾಜೂ ಭಟ್ಕಳ, ಮಣಿಪುರ ರಣಜಿ ತಂಡದ ಫೀಲ್ಡಿಂಗ್ ಕೋಚ್ ಆಗಿ ನೇಮಕವಾಗಿದ್ದಾರೆ. ಬಲಗೈ ಮಧ್ಯಮವೇಗದ ಬೌಲರ್ ಧಾರವಾಡದ ರಾಜೂ, ಕರ್ನಾಟಕ ರಣಜಿ ತಂಡದಲ್ಲಿ ಆಡಿದ್ದರು. ಹುಬ್ಬಳ್ಳಿ ಸ್ಪೋರ್ಟ್ಸ್ ಕ್ಲಬ್, ಬೆಂಗಳೂರಿನಲ್ಲಿ ಮಲ್ಲೇಶ್ವರಂ ಜಿಮ್ಖಾನಾ ಮತ್ತು ಜವಾನ್ಸ್ ಕ್ರಿಕೆಟ್ ಕ್ಲಬ್‌ಗಳನ್ನು ಪ್ರತಿನಿಧಿಸಿದ್ದರು. ಕರ್ನಾಟಕ ಪ್ರೀಮಿಯರ್ ಲೀಗ್‌ನಲ್ಲಿ ಮಲ್ನಾಡ್ ಗ್ಲೇಡಿಯೇಟರ್ಸ್ ಮತ್ತು ಐಪಿಎಲ್‌ನಲ್ಲಿ ಆರ್‌ಸಿಬಿ ತಂಡದಲ್ಲಿ ಆಡಿದ್ದರು. ಚಾಂಪಿಯನ್ಸ್ ಲೀಗ್ ಟೂರ್ನಿಯಲ್ಲೂ ಕಣಕ್ಕಿಳಿದಿದ್ದರು. 36 ವರ್ಷದ ರಾಜೂ ಎರಡು ಪ್ರಥಮ ದರ್ಜೆ, ಲಿಸ್ಟ್ ಎ ಮತ್ತು ಟಿ20 ತಂಡವನ್ನು ಪ್ರತಿನಿಧಿಸಿದ್ದರು.



ರಾಜೂ ಭಟ್ಕಳ

‘ಈ ಬಾರಿಯ ಪ್ಲೇಟ್ ಗುಂಪಿನಲ್ಲಿ ಆಡಲಿರುವ ಮಣಿಪುರ ತಂಡದ ಫೀಲ್ಡಿಂಗ್ ಕೋಚ್ ಆಗಿ ರಾಜೂ ಭಟ್ಕಳ ನೇಮಕವಾಗಿದ್ದಾರೆ’ ಎಂದು ಮಣಿಪುರ ಕ್ರಿಕೆಟ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಟಾಮಿ ತಿಂಗಾಮ್ ತಿಳಿಸಿದ್ದಾರೆ.

ಜೋಹಾನ್ಸ್‌ಬರ್ಗ್‌ನಲ್ಲಿ ಭಾರತ–ದಕ್ಷಿಣ ಆಫ್ರಿಕಾ ಎರಡನೇ ಟೆಸ್ಟ್ ಇಂದಿನಿಂದ

ಐತಿಹಾಸಿಕ ಸಾಧನೆಯತ್ತ ವಿರಾಟ್ ಚಿತ್ತ

ಜೋಹಾನ್ಸ್‌ಬರ್ಗ್ (ಪಿಟಿಐ): ನವವರ್ಷದಲ್ಲಿ ಹೊಸ ದಾಖಲೆ ಬರೆಯಲು ವಿರಾಟ್ ಕೊಹ್ಲಿ ಬಳಗವು ತುದಿಗಾಲಿನಲ್ಲಿ ನಿಂತಿದೆ.

ದಕ್ಷಿಣ ಆಫ್ರಿಕಾ ನೆಲದಲ್ಲಿ ಮೊದಲ ಬಾರಿಗೆ ಟೆಸ್ಟ್ ಸರಣಿ ಜಯಿಸುವ ಅವಕಾಶ ಈಗ ಭಾರತದ ಮುಂದಿದೆ. ಸೋಮವಾರದಿಂದ ವಾಂಡರರ್ಸ್ ಕ್ರೀಡಾಂಗಣದಲ್ಲಿ ಆರಂಭವಾಗಲಿರುವ ಎರಡನೇ ಟೆಸ್ಟ್‌ನಲ್ಲಿ ಜಯಿಸಿದರೆ ಇತಿಹಾಸ ದಾಖಲಾಗಲಿದೆ. 1992ರಿಂದ ಇಲ್ಲಿಯವರೆಗೆ ಪ್ರವಾಸ ಮಾಡಿರುವ ಭಾರತ ತಂಡವು ಇಲ್ಲಿ ಟೆಸ್ಟ್ ಸರಣಿ ಗೆದ್ದಿಲ್ಲ.

ಈಚೆಗೆ ಸೆಂಚುರಿಯನ್‌ನಲ್ಲಿ 'ಬಾಕ್ಸಿಂಗ್ ಡೇ ಟೆಸ್ಟ್'ನಲ್ಲಿ ಅಮೋಘ ಜಯ ಸಾಧಿಸಿದ ಭಾರತ ದಾಖಲೆ ಮಾಡಿತ್ತು. ಸೆಂಚುರಿಯನ್‌ನಲ್ಲಿ ಟೆಸ್ಟ್ ಗೆದ್ದ ಏಷ್ಯಾದ ಮೊದಲ ತಂಡ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಗಿತ್ತು. ಭಾರತ ತಂಡದ ಬೌಲಿಂಗ್ ಪಡೆಯ ಅಬ್ಬರ ಮತ್ತು ಕನ್ನಡಿಗ ಕೆ.ಎಲ್. ರಾಹುಲ್ ಶತಕದಿಂದ ಜಯ ಸಾಧ್ಯವಾಗಿತ್ತು.

ಆಸ್ಟ್ರೇಲಿಯಾ, ಇಂಗ್ಲೆಂಡ್‌ನಲ್ಲಿ ಜಯಭೇರಿಯ ನಂತರ ದಕ್ಷಿಣ ಆಫ್ರಿಕಾದಲ್ಲಿಯೂ ಸರಣಿ ಗೆದ್ದ ನಾಯಕನೆಂಬ ಕೀರ್ತಿಗೆ ಭಾಜನರಾಗಲು ವಿರಾಟ್ ಕಾತುರರಾಗಿದ್ದಾರೆ.

ಈಗಿನ ದಕ್ಷಿಣ ಆಫ್ರಿಕಾ ತಂಡವು ಮೊದಲಿನಂತೆ ಬಲಿಷ್ಠವಾಗಿ ಉಳಿದಿಲ್ಲ. ಆದ್ದರಿಂದ ಭಾರತವೇ ಈ ಪಂದ್ಯದಲ್ಲಿ ಗೆಲ್ಲುವ ನೆಚ್ಚಿನ ತಂಡವಾಗಿ ಕಣಕ್ಕಿಳಿಯಲಿದೆ.

ಆತಿಥೇಯ ತಂಡದಲ್ಲಿ ಈಗ ಮೊದಲಿನಂತೆ ಪ್ರವಾಸಿಗರಿಗೆ ಭಯ ಹುಟ್ಟಿಸುವಂತಹ ಆಟಗಾರರೂ ಇಲ್ಲ. ಕೆಲವು ವರ್ಷಗಳ ಹಿಂದೆ ಗ್ರೇಮ್ ಸ್ಮಿತ್, ಹಾಶೀಂ ಆಮ್ಲಾ, ಎಬಿ ಡಿವಿಲಿಯರ್ಸ್, ಜಾಕಸ್ ಕಾಲಿಸ್, ಡೇಲ್ ಸ್ಟೇನ್, ಮಾರ್ನಿ ಮಾರ್ಕೆಲ್ ಅವರಂತಹ ಅಪ್ರತಿಮ ಆಟಗಾರರಿದ್ದರು. ಒಂದಿಷ್ಟು ಭರವಸೆ ಇಡಬಹುದಾಗಿದ್ದ ಕ್ವಿಂಟನ್ ಡಿ ಕಾಕ್ ಕೂಡ ಮೊದಲ ಟೆಸ್ಟ್ ಸೋಲಿನ ನಂತರ ನಿವೃತ್ತಿ ಘೋಷಿಸಿದ್ದಾರೆ. ನಾಯಕ ಡೀನ್ ಎಲ್ಗರ್, ತೆಂಬಾ ಬವುಮಾ ಬಿಟ್ಟರೆ ಬ್ಯಾಟಿಂಗ್‌ನಲ್ಲಿ ಅಂತಹ ಭರವಸೆಯ ಆಟಗಾರರು ಕಾಣುತ್ತಿಲ್ಲ.


ಬೌಲಿಂಗ್‌ನಲ್ಲಿ ಕಗಿಸೊ ರಬಾಡ, ಲುಂಗಿ ಗಿಡಿ ಅವರಿಬ್ಬರೂ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸುವ ಆಟಗಾರರು. ಆದರೆ ಬ್ಯಾಟಿಂಗ್ ಪಡೆಯಿಂದ ದೊಡ್ಡ ಮೊತ್ತ ದಾಖಲಾಗದೇ ಹೋದರೆ ಅವರ ಆಟ ವ್ಯರ್ಥವಾಗುವುದು ಖಚಿತ.

ಭಾರತ ತಂಡದ ಬ್ಯಾಟಿಂಗ್ ವಿಭಾಗದಲ್ಲಿಯೂ ಕೆಲವು ಬದಲಾವಣೆಗಳಾಗುವ ಸಾಧ್ಯತೆಗಳಿವೆ. ಲಯ ಕಂಡುಕೊಳ್ಳುವಲ್ಲಿ ವಿಫಲರಾದ ಅಜಿಂಕ್ಯ ರಹಾನೆ ಮತ್ತು ಚೇತೇಶ್ವರ್ ಪೂಜಾರ ಬದಲಿಗೆ ಹನುಮವಿಹಾರಿ ಹಾಗೂ ಶ್ರೇಯಸ್ ಅಯ್ಯರ್ ಆಡಬಹುದು. ರಿಷಭ್ ಪಂತ್ ಬ್ಯಾಟಿಂಗ್‌ನಲ್ಲಿ ಉತ್ತಮ ಕಾಣಿಕೆ ನೀಡುತ್ತಿಲ್ಲ. ಆದರೂ ಈ ಪಂದ್ಯದಲ್ಲಿ ಅವರು ಮತ್ತೊಂದು ಅವಕಾಶ ಪಡೆಯಬಹುದು. ಬೌಲಿಂಗ್ ವಿಭಾಗದಲ್ಲಿ ಹೆಚ್ಚಿನ ಬದಲಾವಣೆ ಆಗಲಿಕ್ಕಿಲ್ಲ. ವಾಂಡರರ್ಸ್‌ನಲ್ಲಿ ಈ ಹಿಂದೆ ಭಾರತವು ಆಡಿದ ಯಾವುದೇ ಟೆಸ್ಟ್‌ನಲ್ಲಿಯೂ ಸೋತಿಲ್ಲ.


ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಶಮಿ

ಮುಖ್ಯಾಂಶಗಳು

- 99ನೇ ಟೆಸ್ಟ್ ಪಂದ್ಯ ಆಡಲಿರುವ ವಿರಾಟ್ ಕೊಹ್ಲಿ
- ಮೊದಲ ಪಂದ್ಯದಲ್ಲಿ ಶತಕ ಬಾರಿಸಿದ್ದ ಕೆ.ಎಲ್. ರಾಹುಲ್
- ಮೊಹಮ್ಮದ್ ಶಮಿ, ಜಸ್‌ಪ್ರೀತ್ ಬೂಮ್ರಾ ಮೇಲೆ ವಿಶ್ವಾಸ


ವಿರಾಟ್ ಕೊಹ್ಲಿ


ಲುಂಗಿ ಗಿಡಿ

ಬಲಾಬಲ

ಪಂದ್ಯಗಳು 40	
ದ.ಆಫ್ರಿಕಾ ಜಯ	15
ಭಾರತ ಜಯ	15
ಡ್ರಾ	10

ವಾಂಡರರ್ಸ್‌ನಲ್ಲಿ ಸಾಧನೆ

ಭಾರತ	
ಪಂದ್ಯಗಳು	5
ಗೆಲುವು	2
ಡ್ರಾ	3
ದಕ್ಷಿಣ ಆಫ್ರಿಕಾ	
ಪಂದ್ಯಗಳು	31
ಜಯ	14
ಸೋಲು	11
ಡ್ರಾ	6

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಮಾಧ್ಯಮ ಮ್ಯಾನೇಜರ್‌ಗೆ ಘಂಟೆ ಮೊಳಗಿಸುವ ಗೌರವ

ವಾಂಡರರ್ಸ್‌ನಲ್ಲಿ ಸೋಮವಾರ ನಡೆಯಲಿರುವ ಟೆಸ್ಟ್ ಪಂದ್ಯಕ್ಕೆ ಘಂಟೆ ಮೊಳಗಿಸಿ ಚಾಲನೆ ನೀಡುವ ಗೌರವವು ದಕ್ಷಿಣ ಆಫ್ರಿಕಾ ತಂಡದ ಮಾಧ್ಯಮ ವ್ಯವಸ್ಥಾಪಕಿ ಸಿಪೊಕಾಝಿ ಸೊಕಾನ್ಯೆಲ್ ಅವರಿಗೆ ಲಭಿಸಿದೆ.

'ಜನವರಿ 3ರ ಬೆಳಿಗ್ಗೆ ಸಲ್ಲಲಿರುವ ಗೌರವವು ನನಗೆ ಅತ್ಯಂತ ವಿಶೇಷವಾದದ್ದು. ನನ್ನ ಈ ಪ್ರಯಾಣದಲ್ಲಿ ಅತ್ಯಂತ ಮಹತ್ವದ ಮೈಲುಗಲ್ಲಾಗಲಿದೆ. ಕ್ರಿಕೆಟ್ ದಕ್ಷಿಣ ಆಫ್ರಿಕಾ ಮತ್ತು ಲಯನ್ಸ್ ಕ್ರಿಕೆಟ್‌ಗೆ ನಾನು ಆಭಾರಿಯಾಗಿದ್ದೇನೆ' ಎಂದು ಸಿಪೊಕಾಝಿ ಹೇಳಿದ್ದಾರೆ. ಪೂರ್ವ ಕೇಪ್‌ನಲ್ಲಿ ಜನಿಸಿರುವ ಸಿಪೊಕಾಝಿ ಅವರನ್ನು ಐಸಿಸಿಯು ವಿಶ್ವಕಪ್ ಸಂದರ್ಭದಲ್ಲಿ ಲಾರ್ಡ್ಸ್, ಸೌತಾಂಪ್ಟನ್, ಟ್ರೆಂಟ್‌ಬ್ರಿಡ್ಜ್, ಸೊಮರ್‌ಸೆಟ್ ಮತ್ತು ಮ್ಯಾಂಚೆಸ್ಟರ್‌ನಲ್ಲಿ ಮಾಧ್ಯಮ ವ್ಯವಸ್ಥಾಪಕರನ್ನಾಗಿ ನೇಮಕ ಮಾಡಿತ್ತು.


ಸಿಪೊಕಾಝಿ ಸೊಕಾನ್ಯೆಲ್

ಮಾಧ್ಯಮಗೋಷ್ಠಿ–ಕೊಹ್ಲಿ ದೂರ: ಗುಟ್ಟು ಬಿಚ್ಚಿಟ್ಟ ದ್ರಾವಿಡ್

ಜೋಹಾನ್ಸ್‌ಬರ್ಗ್ (ಪಿಟಿಐ): ದಕ್ಷಿಣ ಆಫ್ರಿಕಾದಲ್ಲಿ ಭಾರತದ ಪ್ರವಾಸ ಆರಂಭವಾದಾಗಿನಿಂದಲೂ ಪಂದ್ಯದ ಮುನ್ನಾ ದಿನದ ಪತ್ರಿಕಾಗೋಷ್ಠಿಗಳಿಗೆ ವಿರಾಟ್ ಕೊಹ್ಲಿ ಗೈರು ಹಾಜರಾಗಿದ್ದಾರೆ.

ಈ ಕುರಿತು ನಡೆದಿದ್ದ ಚರ್ಚೆಗೆ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಭಾನುವಾರ ತೆರೆ ಎಳೆದರು.

'ಈ ಸರಣಿಯ ಮೂರನೇ ಪಂದ್ಯವು ವಿರಾಟ್‌ಗೆ 100ನೇ ಟೆಸ್ಟ್ ಪಂದ್ಯವಾಗಲಿದೆ. ಆಗ ಅವರು ಮಾಧ್ಯಮಗೋಷ್ಠಿಗೆ ಹಾಜರಾಗಲಿದ್ದಾರೆ. ಅವರ ನೂರನೇ ಪಂದ್ಯದ ಕುರಿತು ನೀವೆಲ್ಲರೂ ಪ್ರಶ್ನೆಗಳನ್ನು ಕೇಳಬಹುದು' ಎಂದು ದ್ರಾವಿಡ್ ಹೇಳಿದರು.

ಜನವರಿ 11ರಿಂದ ಕೇಪ್‌ಟೌನ್‌ನಲ್ಲಿ ಮೂರನೇ ಟೆಸ್ಟ್ ನಡೆಯಲಿದೆ.

ವಿರಾಟ್ ಕೊಹ್ಲಿ ತಮ್ಮನ್ನು ಏಕದಿನ ತಂಡದ ನಾಯಕತ್ವದಿಂದ ಕೆಳಗಿಳಿಸಿದ್ದರ ಕುರಿತು ನೀಡಿದ್ದ ಹೇಳಿಕೆ ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ನೀಡಿದ್ದ ಹೇಳಿಕೆಗೆ ವ್ಯತಿರಿಕ್ತವಾಗಿತ್ತು. ಅವರು ಬ್ಯಾಟಿಂಗ್‌ನಲ್ಲಿ ಫಾರ್ಮ್ ಕಳೆದುಕೊಂಡಿದ್ದು ಎರಡು ವರ್ಷಗಳಿಂದ ಶತಕ ಹೊಡೆದಿಲ್ಲ. ಈ ಎಲ್ಲ ವಿಷಯಗಳ ಕುರಿತು ಪ್ರಶ್ನೆಗಳಿಂದ ತಪ್ಪಿಸಿಕೊಳ್ಳಲು ಅವರು ಪತ್ರಿಕಾಗೋಷ್ಠಿಗೆ ಬರುತ್ತಿಲ್ಲ ಎಂಬ ಮಾತುಗಳೂ ಕೇಳಿಬಂದಿದ್ದವು.

ಬೆಂಗಳೂರು ಜಯಭೇರಿ: ಅಗ್ರಸ್ಥಾನಕ್ಕೆ ಲಗ್ಗೆ

ಬೆಂಗಳೂರು: ಮತ್ತೆ ಮಿಂಚಿದ ಪವನ್ ಶೆರಾವತ್ ಆಟದಿಂದಾಗಿ ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಟೂರ್ನಿಯಲ್ಲಿ ಭಾನುವಾರ ಜಯಭೇರಿ ಬಾರಿಸಿತು.

ವೈಟ್‌ಫೀಲ್ಡ್‌ನ ಶೆರಟಾನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಬೆಂಗಳೂರು ತಂಡವು 40–29ರಿಂದ ಪುಣೇರಿ ಪಲ್ಟನ್ ವಿರುದ್ಧ ಗೆದ್ದಿತು. ಟೂರ್ನಿಯಲ್ಲಿ ಬೆಂಗಳೂರು ತಂಡಕ್ಕೆ ಇದು ನಾಲ್ಕನೇ ಜಯ. ಇದರೊಂದಿಗೆ ತಂಡ ಪಾಯಿಂಟ್ ಪಟ್ಟಿಯಲ್ಲಿ ಬಾರಿ ಅಗ್ರ ಸ್ಥಾನಕ್ಕೇರಿತು.

ಮೊದಲಾರ್ಧದ ವಿರಾಮದ ವೇಳೆಗೆ ಪುಣೇರಿ ತಂಡವು 18–13ರಿಂದ ಮುನ್ನಡೆ ಸಾಧಿಸಿತ್ತು.

ವಿರಾಮದ ನಂತರ ತಿರುಗೇಟು ನೀಡಿದ ಪವನ್ ಬಳಗವು ಪುಣೇರಿಗೆ ಸೋಲಿನತ್ತ ತಳ್ಳಿತು. ಈ ಅವಧಿಯಲ್ಲಿ 27 ಪಾಯಿಂಟ್ಸ್ ಹೆಕ್ಕಿದ ಬೆಂಗಳೂರು ತಂಡವು ದೊಡ್ಡ ಅಂತರದ ಜಯ ಸಾಧಿಸಿತು.

ಅದರಲ್ಲಿ ಪವನ್ ಶೆರಾವತ್ ಮತ್ತು ಚಂದ್ರನ್ ರಂಜೀತ್ (6 ಅಂಕ) ಅವರ ಆಟ ಮಹತ್ವದ್ದಾಗಿತ್ತು. ಅವರಿಗೆ ಭರತ್ (5) ಕೂಡ ಉತ್ತಮ ಜೊತೆ ನೀಡಿದರು.

ರಕ್ಷಣಾ ವಿಭಾಗದಲ್ಲಿ ಸೌರಭ್ ನಂದಲ್ (4), ಮೋಹಿತ್ ಶೇರಾವತ್ (3) ಮತ್ತು ಅಮನ್ (4) ಕೂಡ ಎದುರಾಳಿ ರೇಡರ್‌ಗಳಿಗೆ ಕಡಿವಾಣ ಹಾಕಿದರು. ಪುಣೇರಿ ತಂಡದ ಅಸ್ಲಂ ಆರು ಅಂಕ ಗಳಿಸಿದರು.

ಸ್ಟೀಲರ್ಸ್‌ಗೆ ರೋಚಕ ಜಯ: ನಾಯಕ ವಿಕಾಸ್ ಖಂಡಾಲಾ ಮತ್ತು ಮೀಟು ಅವರ ಅಮೋಘ ಆಟದಿಂದ ಹರಿಯಾಣ ಸ್ಟೀಲರ್ಸ್ ತಂಡವು ರೋಚಕ ಜಯ ಸಾಧಿಸಿತು.

ದಿನದ ಮೊದಲ ಪಂದ್ಯದಲ್ಲಿ ಹರಿಯಾಣ ತಂಡವು 38–36ರಿಂದ ಗುಜರಾತ್ ಜೈಂಟ್ಸ್ ವಿರುದ್ಧ ಗೆದ್ದಿತು.

ರೇಡಿಂಗ್‌ನಲ್ಲಿ ವಿಕಾಸ್ ಹನ್ನೊಂದು ಅಂಕಗಳನ್ನು ಗಳಿಸಿದರು. ಆಲ್‌ರೌಂಡರ್ ಮೀಟು ಕೂಡ 10 ಅಂಕ ಗಳಿಸಿ ತಂಡದ ಬಲ ಹೆಚ್ಚಿಸಿದರು.

ಹರಿಯಾಣ ತಂಡವು ಮೊದಲಾರ್ಧದ ವಿರಾಮದ ವೇಳೆಗೆ 22–10ರಿಂದ ಮುನ್ನಡೆ ಸಾಧಿಸಿತ್ತು. ಆದರೆ ವಿರಾಮದ ನಂತರ ಗುಜರಾತ್ ತಂಡವು ತಿರುಗೇಟು ನೀಡಿತು. ಕಠಿಣ ಪೈಪೋಟಿಯೊಡ್ಡಿದ ತಂಡವು ಒಂದು ಹಂತದಲ್ಲಿ ಸಮಬಲ ಸಾಧಿಸಿತ್ತು. ತಂಡದ ಆಲ್‌ರೌಂಡರ್ ರಾಕೇಶ್ 19 ಅಂಕಗಳನ್ನು ಗಳಿಸಿದರು.


ಎದುರಾಳಿ ತಂಡದ ಆಟಗಾರರಿಂದ ತಪ್ಪಿಸಿಕೊಂಡ ಪವನ್ ಶೆರಾವತ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಬೆಂಗಳೂರು ಬುಲ್ಸ್	6	4	1	1	23
ದಬಂಗ್ ಡೆಲ್ಲಿ	5	3	-	2	21
ಯು ಮುಂಬಾ	5	2	1	2	17
ಪಟ್ನಾ ಪೈರೇಟ್ಸ್	4	3	1	-	16
ತಮಿಳ್ ತಲೈವಾಸ್	5	1	1	3	14
ಗುಜರಾತ್ ಜೈಂಟ್ಸ್	5	1	2	2	13
ಯುಪಿ ಯೋಧಾ	5	1	2	2	13
ಹರಿಯಾಣ ಸ್ಟೀಲರ್ಸ್	5	2	3	-	12
ಜೈಪುರ್ ಪಿಂಕ್ ಪ್ಯಾಂಥರ್ಸ್	4	2	2	-	11
ಬೆಂಗಾಲ್ ವಾರಿಯರ್ಸ್	5	2	3	-	11
ತೆಲುಗು ಟೈಟನ್ಸ್	4	-	2	2	8
ಪುಣೇರಿ ಪಲ್ಟನ್	5	1	4	-	5

(ಭಾನುವಾರದ ಪಂದ್ಯಗಳ ಅಂತ್ಯಕ್ಕೆ)

ಇಂದಿನ ಪಂದ್ಯ (ರಾತ್ರಿ)

ಜೈಪುರ್ ಪಿಂಕ್ ಪ್ಯಾಂಥರ್ಸ್ Vs ಬೆಂಗಾಲ್ ವಾರಿಯರ್ಸ್ – 7.30
ತೆಲುಗು ಟೈಟನ್ಸ್ – ಪಟ್ನಾ ಪೈರೇಟ್ಸ್ – 8.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಐಎಸ್‌ಎಲ್ ಟೂರ್ನಿ: ಚೆನ್ನೈಗೆ ಮಣಿದ ಜೆಮ್ಷೆಡ್‌ಪುರ

ಕೇರಳ–ಗೋವಾ ಸಮಬಲದ ಹೋರಾಟ

ವಾಸ್ಕೊ (ಪಿಟಿಐ): ಅಗ್ರಸ್ಥಾನದ ಮೇಲೆ ಕಣ್ಣಿಟ್ಟು ಕಣಕ್ಕೆ ಇಳಿದ ಕೇರಳ ಬ್ಲಾಸ್ಟರ್ಸ್ ತಂಡಕ್ಕೆ ನಿರಾಸೆಯಾಯಿತು. ತಿಲಕ್ ಮೈದಾನ್ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಕೇರಳ ಮತ್ತು ಎಫ್‌ಸಿ ಗೋವಾ ನಡುವಿನ ಪಂದ್ಯ 2–2ರಲ್ಲಿ ಡ್ರಾ ಆಯಿತು.

ಪಾಯಿಂಟ್ ಪಟ್ಟಿಯ 5ನೇ ಸ್ಥಾನದಲ್ಲಿದ್ದ ಕೇರಳ ಈ ಪಂದ್ಯದಲ್ಲಿ ಜಯ ಗಳಿಸಿದ್ದರೆ ಮುಂಬೈಯನ್ನು ಹಿಂದಿಕ್ಕಿ ಮೊದಲ ಸ್ಥಾನಕ್ಕೇರುವ ಸಾಧ್ಯತೆ ಇತ್ತು. ಆರಂಭದಲ್ಲೇ ಮುನ್ನಡೆ ಸಾಧಿಸಿ ಭರವಸೆ ಮೂಡಿಸಿತ್ತು. ಆದರೆ ತಿರುಗೇಟು ನೀಡಿದ ಗೊವಾ ಡ್ರಾ ಸಾಧಿಸಿತು.

ಕಾರ್ನರ್ ಕಿಕ್‌ನಲ್ಲಿ ಜೀಕ್ಸನ್ ಸಿಂಗ್ ಗಳಿಸಿದ ಮೋಹಕ ಗೋಲಿನ ಮೂಲಕ ಕೇರಳ ಬ್ಲಾಸ್ಟರ್ಸ್ 10ನೇ ನಿಮಿಷದಲ್ಲೇ ಮುನ್ನಡೆ ಗಳಿಸಿತು. ಅಡ್ರಿಯಾನ್ ಲೂನಾ ಚೆಂಡನ್ನು ಗೋಲುಪೆಟ್ಟಿಗೆಯ ಸಮೀಪಕ್ಕೆ ಗಾಳಿಯಲ್ಲಿ ತೇಲಿಬಿಟ್ಟರು. ಅಲ್ಲಿ ಕಾಯುತ್ತಿದ್ದ ಜೀಕ್ಸನ್, ಹೆಡರ್ ಮೂಲಕ ಚೆಂಡನ್ನು ಬಲೆಯೊಳಗೆ ಸೇರಿಸಿದರು.

10 ನಿಮಿಷಗಳ ನಂತರ ಅಡ್ರಿಯಾನ್ ಲೂನಾ ಗೋಲು ಗಳಿಸಿ ಮುನ್ನಡೆ ಹೆಚ್ಚಿಸಿದರು. ಚೆಂಡಿನೊಂದಿಗೆ ಧಾವಿಸಿದ ಅಡ್ರಿಯಾನ್ ಕೊನೆಯ ಕ್ಷಣದಲ್ಲಿ ಅನಿರೀಕ್ಷಿತವಾಗಿ ಮಿಂಚಿನ ವೇಗದಲ್ಲಿ ಗೋಲುಪೆಟ್ಟಿಗೆಯೊಳಗೆ ತೂರಿಬಿಟ್ಟರು. ಗೋಲ್‌ಕೀಪರ್ ನೋಡುತ್ತಿದ್ದಂತೆ ಚೆಂಡು ಬಲೆಯೊಳಗೆ ಸೇರಿತು.

ಇದಾಗಿ ನಾಲ್ಕೇ ನಿಮಿಷಗಳಲ್ಲಿ ಗೋವಾ ತಿರುಗೇಟು ನೀಡಿತು. ಸೇವಿಯರ್ ಗಾಮಾ ಎಡಬದಿಯಿಂದ ನೀಡಿದ ಕ್ರಾಸ್‌ನಲ್ಲಿ ಚೆಂಡನ್ನು ನಿಯಂತ್ರಿಸಿದ ಜಾರ್ಜ್ ಒರ್ಟಿಜ್ ವೇಗವಾಗಿ ಗೋಲುಪೆಟ್ಟಿಗೆಯೊಳಗೆ ಒದ್ದು ಗುರಿ ಮುಟ್ಟಿಸಿದರು. 38ನೇ ನಿಮಿಷದಲ್ಲಿ ಎಡು ಬೇಡಿಯಾ ಅವರ ಗೋಲಿನೊಂದಿಗೆ ಸಮಬಲ ಸಾಧಿಸುವಲ್ಲಿ ಗೋವಾ ಯಶಸ್ಸು ಕಂಡಿತು.

ಚೆನ್ನೈಗೆ ಗೆಲುವು: ಪ್ರಬಲ ಪೈಪೋಟಿ ಕಂಡ ಮತ್ತೊಂದು ಪಂದ್ಯದಲ್ಲಿ ಚೆನ್ನೈಯಿನ್ ಎಫ್‌ಸಿ ತಂಡ ಜೆಮ್ಷೆಡ್‌ಪುರ ಎಫ್‌ಸಿಯನ್ನು 1–0ಯಿಂದ ಮಣಿಸಿತು. 31ನೇ ನಿಮಿಷದಲ್ಲಿ ಲೂಕಾಸ್ ಗಿಕೀವಿಜ್ ಗಳಿಸಿದ ಗೋಲಿನ ಮೂಲಕ ಮುನ್ನಡೆ ಸಾಧಿಸಿದ ಚೆನ್ನೈಯಿನ್ ಕೊನೆಯವರೆಗೂ ಹೋರಾಡಿ ಎದುರಾಳಿ ತಂಡವನ್ನು ನಿಯಂತ್ರಿಸಿತು.

ಒಡಿಶಾಗೆ ಮುಂಬೈ ಸಿಟಿ ಸವಾಲು: ವಾಸ್ಕೊದಲ್ಲಿ ಸೋಮವಾರ ನಡೆಯಲಿರುವ ಪಂದ್ಯದಲ್ಲಿ ಒಡಿಶಾ ಎಫ್‌ಸಿ ಮತ್ತು ಮುಂಬೈ ಸಿಟಿ ಎಫ್‌ಸಿ ತಂಡಗಳು ಮುಖಾಮುಖಿಯಾಗಲಿವೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಮೆಸ್ಸಿ, ಮೆಗ್ರಾಗೆ ಕೋವಿಡ್ ಖಚಿತ

ಪ್ಯಾರಿಸ್/ಸಿಡ್ನಿ (ಎಎಫ್‌ಪಿ/ಪಿಟಿಐ): ಫುಟ್‌ಬಾಲ್ ದಿಗ್ಗಜ ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ಮತ್ತು ಆಸ್ಟ್ರೇಲಿಯಾದ ಮಾಜಿ ವೇಗದ ಬೌಲರ್ ಗ್ಲೆನ್ ಮೆಗ್ರಾ ಅವರಿಗೆ ಕೋವಿಡ್–19 ಸೋಂಕು ದೃಢಪಟ್ಟಿದೆ.

ಮೆಸ್ಸಿ ಈಗ ಆಡುತ್ತಿರುವ ಪ್ಯಾರಿಸ್ ಸೇಂಟ್ ಜರ್ಮನ್ ತಂಡದ ಇತರ ಮೂವರಿಗೂ ಸೋಂಕು ಇದೆ ಎಂದು ತಂಡದ ಆಡಳಿತ ಭಾನುವಾರ ತಿಳಿಸಿದೆ. ಮೆಸ್ಸಿ ಅವರು ಫ್ರೆಂಚ್ ಕಪ್‌ನಲ್ಲಿ ವೇನ್ಸ್ ಎದುರಿನ ಪಂದ್ಯ ಆಡಲು ಸಜ್ಜಾಗುತ್ತಿರುವಾಗ ಸೋಂಕು ಆಗಿದೆ.

ಗ್ಲೆನ್ ಮೆಕ್‌ಗ್ರಾ ಅವರು 'ಪಿಂಕ್ ಟೆಸ್ಟ್'ಗೆ ಸಜ್ಜಾಗುತ್ತಿರುವ ವೇಳೆ ಸೋಂಕು ಕಾಣಿಸಿಕೊಂಡಿದೆ. ಪಿಂಕ್ ಟೆಸ್ಟ್‌ನ ಮೂರನೇ ದಿನವನ್ನು ಮೆಗ್ರಾ ಅವರ ಪತ್ನಿ ಜೇನ್ ಸ್ಮರಣಾರ್ಥ 'ಜೇನ್ ಡೇ' ಎಂದು ಕರೆಯಲಾಗುತ್ತದೆ. ಜೇನ್ ಅವರು ಕ್ಯಾನ್ಸರ್‌ನಿಂದ ಸಾವಿಗೀಡಾಗಿದ್ದರು.

ಈ ಬಾರಿ 'ಪಿಂಕ್ ಟೆಸ್ಟ್' ಇದೇ ಐದರಿಂದ ಸಿಡ್ನಿಯಲ್ಲಿ ನಡೆಯಲಿದೆ. ಆ್ಯಷಸ್ ಸರಣಿಯ ನಾಲ್ಕನೇ ಪಂದ್ಯ ಇದು. ಮುಂದಿನ ಪರೀಕ್ಷೆಯ ವರದಿ ನೆಗೆಟಿವ್ ಆದರೆ ಮೆಗ್ರಾ ಈ ಟೆಸ್ಟ್ ವೇಳೆ ಅಂಗಣದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಇಂಗ್ಲೆಂಡ್ ಕೋಚ್‌ಗೂ ಕೋವಿಡ್

ಮೆಲ್ಬರ್ನ್: ಇಂಗ್ಲೆಂಡ್ ಕ್ರಿಕೆಟ್ ತಂಡದ ಮುಖ್ಯ ಕೋಚ್ ಕ್ರಿಸ್ ಸಿಲ್ವರ್‌ವುಡ್ ಅವರಿಗೆ ಕೋವಿಡ್–19 ಇರುವುದು ಖಚಿತವಾಗಿದೆ. ಅವರು ಈಗ ಕ್ಯಾರಂಟೈನ್‌ನಲ್ಲಿದ್ದು ಹೋಬರ್ಟ್‌ನಲ್ಲಿ ನಡೆಯಲಿರುವ ಕೊನೆಯ ಹಾಗೂ ಐದನೇ ಟೆಸ್ಟ್ ಪಂದ್ಯಕ್ಕೆ ತಂಡವನ್ನು ಸೇರುವ ಸಾಧ್ಯತೆ ಇದೆ.

ಸಿಲ್ವರ್‌ವುಡ್ ಅವರಲ್ಲಿ ಸೋಂಕಿನ ಲಕ್ಷಣಗಳಿಲ್ಲ. ಅವರು ಎರಡೂ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ ಎಂದು ತಂಡದ ಆಡಳಿತ ತಿಳಿಸಿದೆ.